# ಒಳನಾಡು ನೌಕೆಗಳ ಅಧಿನಿಯಮ, 1917

30.03.2006ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 32ನೇ ಸಂಪುಟದ 1ನೇ ಸಂಚಿಕೆಯಲ್ಲಿ 2 ರಿಂದ 35ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

### ಅಧ್ಯಾಯ – I

### ಪ್ರಾರಂಭಿಕ

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ

2. ಪರಿಭಾಷೆಗಳು

### ಅಧ್ಯಾಯ – II

### ಒಳನಾಡು ಯಂತ್ರಚಾಲಿತ ನೌಕೆಗಳ ಸಮೀಕ್ಷೆ

3. ಒಳನಾಡು ಯಂತ್ರಚಾಲಿತ ನೌಕೆಯು ಸಮೀಕ್ಷಾ ಪ್ರಮಾಣ ಪತ್ರವಿಲ್ಲದೆ ಜಲಯಾನಕ್ಕೆ ಹೊರಡದಿರುವುದು ಅಥವಾ ಅದನ್ನು ಸೇವೆಗೆ ಉಪಯೋಗಿಸದಿರುವುದು

4. ಸಮೀಕ್ಷಕರ ನೇಮಕ ಮತ್ತು ಸಮೀಕ್ಷಣ ಸ್ಥಳಗಳು

5. ಸಮೀಕ್ಷಕರ ಅಧಿಕಾರ

6. ಸಮೀಕ್ಷೆ ಸಂಬಂಧದಲ್ಲಿ ಫೀಜುಗಳು

7. ಸಮೀಕ್ಷಕನ ಘೋಷಣೆ

8. ಒಡೆಯನು ಅಥವಾ ನಾಯಕನು ರಾಜ್ಯ ಸರ್ಕಾರಕ್ಕೆ ಘೋಷಣೆಯನ್ನು ಕಳುಹಿಸುವುದು

9. ಸಮೀಕ್ಷಾ ಪ್ರಮಾಣ ಪತ್ರಗಳನ್ನು ನೀಡಲು ಅಥವಾ ನೀಡಿದ ಪ್ರಮಾಣ ಪತ್ರಗಳನ್ನು ಅಧಿಕೃತಗೊಳಿಸಲು ರಾಜ್ಯ ಸರ್ಕಾರದ ಅಧಿಕಾರ

10. ಸಮೀಕ್ಷೆಯ ಪ್ರಮಾಣ ಪತ್ರವನ್ನು ಯಂತ್ರಚಾಲಿತ ನೌಕೆಯ ಎದ್ದುಕಾಣುವ ಭಾಗದಲ್ಲಿ ಅಂಟಿಸಿರುವುದು

10ಎ. ಸಮೀಕ್ಷಾ ಪ್ರಮಾಣ ಪತ್ರಗಳ ಜಾರಿ

11. ಸಮೀಕ್ಷಾ ಪ್ರಮಾಣ ಪತ್ರಗಳ ಅವಧಿ

12. ಸಮೀಕ್ಷಾ ಪ್ರಮಾಣ ಪತ್ರಗಳ ನವೀಕರಣ

13. ಸಮೀಕ್ಷಾ ಪ್ರಮಾಣ ಪತ್ರವನ್ನು ಅಮಾನತುಗೊಳಿಸುವ ಅಥವಾ ರದ್ದುಗೊಳಿಸುವ ರಾಜ್ಯ ಸರ್ಕಾರದ ಅಧಿಕಾರ

14. ಅವಧಿ ಮುಕ್ತಾಯವಾದ ಅಥವಾ ರದ್ದುಪಡಿಸಿದ ಪ್ರಮಾಣ ಪತ್ರವನ್ನು ವಶಾವಣೆ ಮಾಡುವಂತೆ ಅಗತ್ಯಪಡಿಸುವ ರಾಜ್ಯ ಸರ್ಕಾರದ ಅಧಿಕಾರ

15. ಕೆಲವು ಪ್ರಮಾಣ ಪತ್ರಗಳ ಅಮಾನತು ಅಥವಾ ರದ್ದಿಯಾತಿಯ ವರದಿ

16. ಇಬ್ಬರು ಸಮೀಕ್ಷಕರು ಸಮೀಕ್ಷೆ ಮಾಡುವಂತೆ ನಿರ್ದೇಶಿಸಲು ರಾಜ್ಯ ಸರ್ಕಾರದ ಅಧಿಕಾರ

17. ಎರಡನೇ ಬಾರಿ ಸಮೀಕ್ಷೆಗೆ ಆದೇಶಿಸಲು ರಾಜ್ಯ ಸರ್ಕಾರದ ಅಧಿಕಾರ

18. ಇಬ್ಬರು ಸಮೀಕ್ಷಕರನ್ನು ನಿಯೋಜಿಸಿರುವಾಗ ಕರ್ತವ್ಯಗಳ ಹಂಚಿಕೆ

19. ಸಮೀಕ್ಷೆಗಳ ಬಗ್ಗೆ ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ

## ಅಧ್ಯಾಯ – IIಎ

### ಒಳನಾಡು ಯಂತ್ರಚಾಲಿತ ನೌಕೆಗಳ ನೋಂದಣಿ

19ಎ. ಒಳನಾಡು ಯಂತ್ರಚಾಲಿತ ನೌಕೆಗಳನ್ನು ನೋಂದಣಿ ಪ್ರಮಾಣ ಪತ್ರವಿಲ್ಲದೆ ಜಲಯಾನಕ್ಕೆ ಬಿಡದಿರುವುದು ಅಥವಾ ಸೇವೆಗೆ ಉಪಯೋಗಿಸದಿರುವುದು

19ಬಿ. ನೋಂದಣಿ ಸ್ಥಳ ಮತ್ತು ನೋಂದಣಿ ಪ್ರಾಧಿಕಾರಗಳು

19ಸಿ. ನೋಂದಣಿ ಪುಸ್ತಕ

19ಡಿ. ನೋಂದಣಿ ಅರ್ಜಿ

19ಇ. ನೋಂದಣಿ ಸ್ಥಳಗಳು

19ಎಫ್. ನೋಂದಣಿ ಪ್ರಮಾಣ ಪತ್ರದ ನೀಡಿಕೆ

19ಜಿ. ನಿರಸನಗೊಳಿಸಲಾಗಿದೆ

19ಹೆಚ್. ಒಳನಾಡು ಯಂತ್ರಚಾಲಿತ ನೌಕೆಗಳಿಗೆ ಗುರುತು ಹಾಕುವುದು

19ಐ. ನೋಂದಣಿ ಪ್ರಮಾಣ ಪತ್ರದ ವರ್ಗಾವಣೆಗೆ ನಿಷೇಧ

19ಜೆ. ಬದಲಾವಣೆಗಳ ನೋಂದಣಿ

19ಕೆ. ನೋಂದಣಿಯ ವರ್ಗಾವಣೆ

19ಎಲ್. ವಾಸಸ್ಥಳ ಅಥವಾ ವ್ಯವಹಾರ ಸ್ಥಳದ ಬದಲಾವಣೆ

19ಎಂ. ನೋಂದಾಯಿತ ನೌಕೆಯ ಒಡೆತನದ ವರ್ಗಾವಣೆಯ ನಿಷೇಧ

19ಎನ್. ನೋಂದಣಿ ಪ್ರಮಾಣ ಪತ್ರಗಳ ಅಮಾನತು

19ಓ. ನೋಂದಣಿಯ ರದ್ದಿಯಾತಿ

19ಪಿ. ಅಪೀಲುಗಳು

19ಕ್ಯೂ. ಪರಸ್ಪರತೆ

19ಕ್ಯೂಎ. ಯಂತ್ರಚಾಲಿತ ನೌಕೆಯ ಅಡಮಾನ ಅಥವಾ ಷೇರು

19ಆರ್. ನಿಯಮ ರಚನಾಧಿಕಾರ

19ಎಸ್. ವ್ಯಾಪಾರಿ ಹಡಗು ಅಧಿನಿಯಮದ ಮೇರೆಗೆ ನೀಡಲಾದ ಕೆಲವು ಪ್ರಮಾಣ ಪತ್ರಗಳು ಈ ಅಧಿನಿಯಮದ ಮೇರೆಗೆ ಸಿಂಧುವಾಗಿರುವುದು

## ಅಧ್ಯಾಯ – III

### ಒಳನಾಡು ಯಂತ್ರಚಾಲಿತ ನೌಕೆಯ ನಾಯಕರು (ಸೆರಾಂಗರು ಸೇರಿದಂತೆ) ಮತ್ತು ಇಂಜಿನಿಯರುಗಳು (ಇಂಜಿನ್ ಚಾಲಕರು ಸೇರಿದಂತೆ)

20. ಪರೀಕ್ಷಕರ ನೇಮಕಾತಿ

21. ಹಡಗಿನ ನಾಯಕರು, ಸೆರಾಂಗ್‌ಗಳು, ಇಂಜಿನಿಯರ್‌ಗಳು ಅಥವಾ ಇಂಜಿನ್ ಚಾಲಕರಿಗೆ ಸಕ್ಷಮತಾ ಪ್ರಮಾಣ ಪತ್ರಗಳ ನೀಡಿಕೆ

22. ಹಡಗಿನ ನಾಯಕರ, ಸೆರಾಂಗ್‌ಗಳ, ಇಂಜಿನಿಯರ್‌ಗಳ ಮತ್ತು ಇಂಜಿನ್ ಚಾಲಕರಿಗೆ ಸೇವಾ ಪ್ರಮಾಣ ಪತ್ರಗಳ ನೀಡಿಕೆ

22ಎ. ಲೈಸೆನ್ಸುಗಳು

23. ಪ್ರಮಾಣ ಪತ್ರಗಳನ್ನು ದ್ವಿಪ್ರತಿಯಲ್ಲಿ ತಯಾರಿಸುವುದು

24. ಕೆಲವು ಸಂದರ್ಭಗಳಲ್ಲಿ ಪ್ರಮಾಣ ಪತ್ರ ಅಥವಾ ಲೈಸೆನ್ಸಿನ ಪ್ರತಿಯನ್ನು ನೀಡುವುದು

25. ಒಂದು ನೂರು ಅಥವಾ ಹೆಚ್ಚು ಅಶ್ವಶಕ್ತಿಯ ನೌಕೆಯ ನಾಯಕನು ಮತ್ತು ಇಂಜಿನಿಯರನು ಪ್ರಮಾಣ ಪತ್ರಗಳನ್ನು ಹೊಂದಿರುವುದು

26. ನಲವತ್ತರಿಂದ ಒಂದುನೂರರವರೆಗಿನ ಅಶ್ವಶಕ್ತಿಯನ್ನು ಹೊಂದಿರುವ ನೌಕೆಯ ನಾಯಕನು ಮತ್ತು ಇಂಜಿನಿಯರನು ಹೊಂದಿರಬೇಕಾದ ಪ್ರಮಾಣ ಪತ್ರಗಳು

27. ನಲವತ್ತು ಅಶ್ವಶಕ್ತಿಗಿಂತ ಕಡಿಮೆ ಇರುವ ನೌಕೆಯ ನಾಯಕ ಅಥವಾ ಇಂಜಿನಿಯರ್‌ನು ಹೊಂದಿರಬೇಕಾದ ಪ್ರಮಾಣ ಪತ್ರಗಳು

28. ಇತರ ಪ್ರಮಾಣ ಪತ್ರಗಳೊಂದಿಗೆ ಈ ಅಧಿನಿಯಮದ ಮೇರೆಗೆ ನೀಡಲಾದ ಪ್ರಮಾಣ ಪತ್ರವನ್ನು ಹೊಂದಿರಲು ನಾಯಕನನ್ನು ಅಥವಾ ಇಂಜಿನಿಯರನನ್ನು ಅಗತ್ಯಪಡಿಸಲು ರಾಜ್ಯ ಸರ್ಕಾರದ ಅಧಿಕಾರ

29. ಸಕ್ಷಮತಾ ಪ್ರಮಾಣ ಪತ್ರಗಳನ್ನು ನೀಡುವ ಬಗ್ಗೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ

30. ಸೇವಾ ಪ್ರಮಾಣ ಪತ್ರಗಳನ್ನು ನೀಡುವ ಬಗ್ಗೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ

30ಎ. ಲೈಸೆನ್ಸು ನೀಡಿಕೆಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ

31. ಯಾವ ಪ್ರದೇಶದಲ್ಲಿ ಸಕ್ಷಮತಾ ಅಥವಾ ಸೇವಾ ಪ್ರಮಾಣ ಪತ್ರಗಳು ಮತ್ತು ಲೈಸೆನ್ಸುಗಳು ಪರಿಣಾಮಕಾರಿಯಾಗತಕ್ಕದ್ದು

## ಅಧ್ಯಾಯ – IV

## ಅಪಘಾತಗಳ ಬಗ್ಗೆ ತನಿಖೆ ನಡೆಸುವುದು

32. ಅಪಘಾತಗಳ ವರದಿಯನ್ನು ಸಮೀಪದ ಪೊಲೀಸು ಠಾಣೆಗೆ ವರದಿ ಮಾಡುವುದು

33. ತನಿಖಾ ನ್ಯಾಯಾಲಯವನ್ನು ನೇಮಕ ಮಾಡಲು ರಾಜ್ಯ ಸರ್ಕಾರದ ಅಧಿಕಾರ

34. ಅಸಮರ್ಥತೆ ಅಥವಾ ದುರ್ನಡತೆಯ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ತನಿಖಾ ನ್ಯಾಯಾಲಯದ ಅಧಿಕಾರ

35. 33ನೇ ಪ್ರಕರಣದ ಮೇರೆಗಲ್ಲದೆ ಬೇರೆ ರೀತಿಯಲ್ಲಿ ತನಿಖೆಯನ್ನು ನಿರ್ದೇಶಿಸಲು ರಾಜ್ಯ ಸರ್ಕಾರದ ಅಧಿಕಾರ

36. ಆರೋಪಿತ ವ್ಯಕ್ತಿಯ ಅಹವಾಲನ್ನು ಕೇಳುವುದು

37. ನಿರ್ಧಾರಕರು

38. ಸಾಕ್ಷ್ಯ ಮತ್ತು ವ್ಯವಹರಣೆಗಳ ವಿನಿಯಮನಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಅಧಿಕಾರಗಳು

39. ನೌಕೆಗಳನ್ನು ಪ್ರವೇಶಿಸುವಂತೆ ಮತ್ತು ಅವುಗಳನ್ನು ತಡೆಹಿಡಿದಿರಿಸುವಂತೆ ಮಾಡುವ ಮೂಲಕ ಸಾಕ್ಷಿದಾರರ ದಸ್ತಗಿರಿಯನ್ನು ಮಾಡಿಸಲು ನ್ಯಾಯಾಲಯದ ಅಧಿಕಾರ

40. ಸಾಕ್ಷಿದಾರರನ್ನು ಅಧಿವಿಚಾರಣೆಗೆ ಒಪ್ಪಿಸಲು ಮತ್ತು ಅವರಿಂದ ಮುಚ್ಚಳಿಕೆ ಬರೆಸಿಕೊಳ್ಳಲು ನ್ಯಾಯಾಲಯದ ಅಧಿಕಾರ

41. ಗೈರುಹಾಜರಾಗಿರುವ ಸಾಕ್ಷಿಗಳ ಸಾಕ್ಷ್ಯ

42. ನ್ಯಾಯಾಲಯವು ರಾಜ್ಯ ಸರ್ಕಾರಕ್ಕೆ ವರದಿ ಮಾಡುವುದು

43. ನ್ಯಾಯಾಲಯವು ಮೌಲ್ಯ ನಿರ್ಣಾಯಕದಾರರಿದ್ದಾಗ್ಯೂ ಸ್ವತಂತ್ರವಾಗಿ ಅಧಿಕಾರಗಳನ್ನು ಚಲಾಯಿಸುವುದು

44. ಯಂತ್ರಚಾಲಿತ ನೌಕೆಯಲ್ಲಿ ಉಂಟಾದ ಆಸ್ಫೋಟದ ಕಾರಣಗಳ ಬಗ್ಗೆ ತನಿಖೆಗಳನ್ನು ನಡೆಸುವಂತೆ ನಿರ್ದೇಶಿಸಲು ರಾಜ್ಯ ಸರ್ಕಾರದ ಅಧಿಕಾರ

## ಅಧ್ಯಾಯ – IV - ಎ

### ನೌಕಾ ಸಂಚಾರದಲ್ಲಿನ ಅಡ್ಡಿಗಳನ್ನು ಮತ್ತು ಅದೇ ಬಗೆಯ ಅಪಾಯಗಳನ್ನು ತೆಗೆದುಹಾಕುವುದು

44ಎ. ನೌಕಾ ಸಂಚಾರಕ್ಕೆ ಅಡ್ಡಿಯಾಗುವ ಭಗ್ನಾವಶೇಷಗಳನ್ನು ಮೇಲಕ್ಕೆತ್ತುವುದು ಅಥವಾ ತೆಗೆದುಹಾಕುವುದು, ಇತ್ಯಾದಿ

44ಬಿ. ಒಳನಾಡು ಜಲಮಾರ್ಗದಲ್ಲಿನ ಅಡ್ಡಿಗಳನ್ನು ತೆಗೆದುಹಾಕುವುದು

44ಸಿ. ತೆಗೆದುಹಾಕುವುದಕ್ಕೆ ತಗುಲಿದ ವೆಚ್ಚಗಳ ವಸೂಲಿ

44ಡಿ. ಕಾನೂನುಸಮ್ಮತ ಅಡ್ಡಿಯನ್ನು ತೆಗೆದುಹಾಕುವುದು

44ಇ. ಸರ್ಕಾರಿ ಲಂಗರುಗಳಿಗೆ ತೊಡರಿಕೊಳ್ಳುವುದು

## ಅಧ್ಯಾಯ – V

### ಈ ಅಧಿನಿಯಮದ ಮೇರೆಗೆ ನೀಡಿದ ಪ್ರಮಾಣ ಪತ್ರಗಳ ಅಮಾನತು ಅಥವಾ ರದಿಯಾತಿ

45. ಕೆಲವು ಸಂದರ್ಭಗಳಲ್ಲಿ ಪ್ರಮಾಣ ಪತ್ರಗಳನ್ನು ಅಮಾನತುಗೊಳಿಸಲು ಅಥವಾ ರದ್ದುಪಡಿಸಲು ರಾಜ್ಯ ಸರ್ಕಾರದ ಅಧಿಕಾರ

46. ಅಮಾನತ್ತುಗೊಳಿಸಲಾದ ಅಥವಾ ರದ್ದುಪಡಿಸಲಾದ ಪ್ರಮಾಣ ಪತ್ರವನ್ನು ಒಪ್ಪಿಸಲು ಬಾಧ್ಯತೆ

47. ಇತರ ರಾಜ್ಯ ಸರ್ಕಾರಕ್ಕೆ ವರದಿ ಮಾಡುವುದು

48. ಅಮಾನತನ್ನು ಅಥವಾ ರದ್ದಿಯಾತಿಯನ್ನು ಹಿಂತೆಗೆದುಕೊಳ್ಳಲು ಮತ್ತು ಹೊಸ ಪ್ರಮಾಣ ಪತ್ರವನ್ನು ನೀಡಲು ರಾಜ್ಯ ಸರ್ಕಾರದ ಅಧಿಕಾರ

## ಅಧ್ಯಾಯ – VI

### ಒಳನಾಡು ಯಂತ್ರಚಾಲಿತ ನೌಕೆಗಳಲ್ಲಿ ಪ್ರಯಾಣಿಕರನ್ನು ಸಂರಕ್ಷಿಸುವುದು ಮತ್ತು ಒಯ್ಯುವುದು

49. ಅಪಾಯಕಾರಿ ಸರಕುಗಳೆಂದು ಘೋಷಿಸಲು ರಾಜ್ಯ ಸರ್ಕಾರದ ಅಧಿಕಾರ

50. ಅಪಾಯಕಾರಿ ಸರಕುಗಳ ಸಾಗಣೆ

51. ನೌಕೆಯಲ್ಲಿರುವ ಅಪಾಯಕಾರಿ ಸರಕುಗಳನ್ನು ಕೆಳಗೆ ಎಸೆಯಲು ಯಂತ್ರಚಾಲಿತ ನೌಕೆಯ ಒಡೆಯನ ಅಥವಾ ನಾಯಕನ ಅಧಿಕಾರ

52. ಅಪಘಾತಗಳಿಂದ ಒಳನಾಡು ಯಂತ್ರಚಾಲಿತ ನೌಕೆಗಳ ರಕ್ಷಣೆಗಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ

53. ಒಳನಾಡು ಯಂತ್ರಚಾಲಿತ ನೌಕೆಗಳಲ್ಲಿ ಪ್ರಯಾಣಿಕರನ್ನು ಒಯ್ಯುವ ಬಗ್ಗೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ

54. ಪ್ರಯಾಣಿಕರನ್ನು ರಕ್ಷಿಸುವುದಕ್ಕಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ

54ಎ. ಪ್ರಯಾಣ ದರಗಳ ಮತ್ತು ಸರಕು ಸಾಗಣೆ ದರಗಳ ಗರಿಷ್ಠ ಮತ್ತು ಕನಿಷ್ಠ ದರಗಳನ್ನು ನಿಗದಿಪಡಿಸಲು ರಾಜ್ಯ ಸರ್ಕಾರದ ಅಧಿಕಾರ

54ಬಿ. ಸಲಹಾ ಸಮಿತಿಗಳ ನೇಮಕಕ್ಕೆ ಉಪಬಂಧ ಕಲ್ಪಿಸುವ ನಿಯಮಗಳನ್ನು ರಚಿಸಲು ಅಧಿಕಾರ

## ಅಧ್ಯಾಯ – VIಎ

### ಮೂರನೇ ಪಕ್ಷಕಾರನ ಅಪಾಯ ಸಂಭವಗಳಿಗೆ ಸಂಬಂಧಪಟ್ಟಂತೆ ಯಂತ್ರಚಾಲಿತ ನೌಕೆಗಳ ವಿಮೆ

54ಸಿ. ಯಂತ್ರಚಾಲಿತ ನೌಕೆಗಳ ವಿಮೆ ಸಂಬಂಧದಲ್ಲಿ ಮೋಟಾರು ವಾಹನಗಳ ಅಧಿನಿಯಮ, 1939ರ VIIIನೇ ಅಧ್ಯಾಯದ ಅನ್ವಯ

## ಅಧ್ಯಾಯ – VII

### ದಂಡಗಳು ಮತ್ತು ಕಾನೂನು ವ್ಯವಹರಣೆಗಳು


55. ಸಮೀಕ್ಷಾ ಪ್ರಮಾಣ ಪತ್ರವಿಲ್ಲದೆ ಜಲಯಾನ ಮಾಡಿದ ಬಗ್ಗೆ ದಂಡ

56. ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಸಮೀಕ್ಷೆ ಪ್ರಮಾಣ ಪತ್ರ ಅಂಟಿಸಲು ಉಪೇಕ್ಷೆ ಮಾಡುವುದಕ್ಕಾಗಿ ದಂಡ

57. ಸಮೀಕ್ಷಾ ಅಥವಾ ನೋಂದಣಿ ಪ್ರಮಾಣ ಪತ್ರಗಳನ್ನು ಒಪ್ಪಿಸಲು ಅಥವಾ ವಾಪಸ್ಸು ಕೊಡಲು ಉಪೇಕ್ಷೆ ಮಾಡುವುದಕ್ಕೆ ಅಥವಾ ನಿರಾಕರಿಸುವುದಕ್ಕೆ ದಂಡ

58. ನೌಕೆಯಲ್ಲಿ ಮಿತಿಮೀರಿದ ಸಂಖ್ಯೆಯ ಪ್ರಯಾಣಿಕರನ್ನು ಒಯ್ಯುವುದಕ್ಕೆ ದಂಡ

58ಎ. ನೌಕೆಯಲ್ಲಿ ಮಿತಿಮೀರಿದ ಪ್ರಮಾಣದ ಸರಕನ್ನು ಒಯ್ಯುವುದಕ್ಕೆ ದಂಡ

59. ಪ್ರಮಾಣ ಪತ್ರವಿಲ್ಲದೆ ನಾಯಕನಾಗಿ ಅಥವಾ ಇಂಜಿನಿಯರ್‌ನಾಗಿ ಸೇವೆ ಸಲ್ಲಿಸಿದ್ದಕ್ಕೆ ಅಥವಾ ಸೇವೆ ಸಲ್ಲಿಸಲು ಒಬ್ಬ ವ್ಯಕ್ತಿಯನ್ನು ಗೊತ್ತುಮಾಡಿದ್ದಕ್ಕೆ ದಂಡ

60. ನೌಕೆಯ ಭಗ್ನತೆ ಅಥವಾ ಅಪಘಾತದ ಬಗ್ಗೆ ತಿಳಿಸಲು ತಪ್ಪಿದ್ದಕ್ಕೆ ನಾಯಕನಿಗೆ ದಂಡ

61. ಅಮಾನತುಗೊಳಿಸಿದ ಅಥವಾ ರದ್ದುಪಡಿಸಿದ ಪ್ರಮಾಣ ಪತ್ರವನ್ನು ಒಪ್ಪಿಸಲು ತಪ್ಪಿದ್ದಕ್ಕೆ ದಂಡ

62. ತಿಳಿಸದೆ ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಅಪಾಯಕರ ಸರಕುಗಳನ್ನು ಒಯ್ಯಲು ತೆಗೆದುಕೊಂಡಿದ್ದಕ್ಕೆ ಅಥವಾ ಕೊಟ್ಟಿದ್ದಕ್ಕೆ ಅಥವಾ ಒಪ್ಪಿಸಿದ್ದಕ್ಕೆ ದಂಡ

62ಎ. ಅಪಘಾತಕ್ಕೆ ಸಂಬಂಧಪಡುವ ಅಪರಾಧಗಳಿಗೆ ದಂಡನೆ

62ಬಿ. ವಿಮೆ ಮಾಡಿಸಿಲ್ಲದ ಯಂತ್ರಚಾಲಿತ ನೌಕೆಯನ್ನು ಉಪಯೋಗಿಸುವುದಕ್ಕಾಗಿ ದಂಡ

62ಸಿ. ವಿಮೆಯ ಬಗ್ಗೆ ಮಾಹಿತಿ ನೀಡಲು ಅಥವಾ ವಿಮಾ ಪ್ರಮಾಣ ಪತ್ರವನ್ನು ಹಾಜರುಪಡಿಸಲು ನಿರ್ಲಕ್ಷಿಸಿದ್ದಕ್ಕೆ ಅಥವಾ ನಿರಾಕರಿಸಿದ್ದಕ್ಕೆ ದಂಡ

63. ಒಳನಾಡು ಯಂತ್ರಚಾಲಿತ ನೌಕೆಗೆ ಅಥವಾ ನೌಕೆಯಲ್ಲಿರುವ ಯಾರೇ ವ್ಯಕ್ತಿಯ ಪ್ರಾಣಕ್ಕೆ ಅಥವಾ ಅಂಗಾಂಗಕ್ಕೆ ಅಪಾಯ ಉಂಟುಮಾಡುವ ದುರ್ನಡತೆಗೆ ಅಥವಾ ನಿರ್ಲಕ್ಷ್ಯಕ್ಕೆ ದಂಡ

63ಎ. ಬಿಟ್ಟುಹೋಗುವುದು ಮತ್ತು ರಜೆ ತೆಗೆದುಕೊಳ್ಳದೆ ಗೈರುಹಾಜರಾಗುವುದು

63ಬಿ. ಶಿಸ್ತು ಉಲ್ಲಂಘನೆಯ ಸಾಮಾನ್ಯ ಅಪರಾಧಗಳು

63ಸಿ. ಅಧಿಕೃತ ವಾಹನ ಸಂಚಾರ ಪುಸ್ತಕದಲ್ಲಿ ಅಪರಾಧದ ನಮೂದನೆ

63ಡಿ. ಅನ್ಯಥಾ ಉಪಬಂಧಿಸಿಲ್ಲದ ಅಪರಾಧಗಳ ದಂಡನೆಗಾಗಿ ಸಾಮಾನ್ಯ ಉಪಬಂಧ

64. ಒಳನಾಡು ಯಂತ್ರಚಾಲಿತ ನೌಕೆಯನ್ನು ಜಪ್ತಿ ಮಾಡುವ ಮೂಲಕ ಜುಲ್ಮಾನೆಯ ವಸೂಲಿ

65. ಮ್ಯಾಜಿಸ್ಟ್ರೇಟರ ಅಧಿಕಾರ ವ್ಯಾಪ್ತಿ

66. ಅಧಿವಿಚಾರಣೆಯ ಸ್ಥಳ


## ಅಧ್ಯಾಯ – VIII

### ಪೂರಕ


67. ಸಾಮಾನ್ಯ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ

68. ಕೆಲವು ಒಳನಾಡು ಯಂತ್ರಚಾಲಿತ ನೌಕೆಗಳಿಗೆ ಅಧಿನಿಯಮದ ಅನ್ವಯವನ್ನು ಮಾರ್ಪಾಟು ಮಾಡುವ ಮತ್ತು ರಾಜ್ಯ ಸರ್ಕಾರದ ಅಧಿಕಾರ

69. ಸರ್ಕಾರಿ ನೌಕೆಗಳಿಗೆ ಫೀಜುಗಳಿಂದ ವಿನಾಯಿತಿ

70. ಉಬ್ಬರವಿಳಿತ ಕಡಲನ್ನು ನಿರ್ಧರಿಸಲು ಕೇಂದ್ರ ಸರ್ಕಾರದ ಅಧಿಕಾರ

71. ಜುಲ್ಮಾನೆಯಂತೆ ವಸೂಲು ಮಾಡಬೇಕಾದ ಫೀಜುಗಳು

72. ಒಳನಾಡು ಯಂತ್ರಚಾಲಿತ ನೌಕೆಗಳ ಪ್ರಮಾಣ ಪತ್ರ ಹೊಂದಿರುವ ನಾಯಕನನ್ನು 1908ರ ಅಧಿನಿಯಮ ಸಂಖ್ಯೆ 15ರ ಪ್ರಕರಣ 31ರ ಮೇರೆಗೆ ಹಡಗು ಚಾಲಕನೆಂದು ಭಾವಿಸುವುದು

72ಎ. ಪಾಕಿಸ್ತಾನದಲ್ಲಿ ನೀಡಲಾದ ಪ್ರಮಾಣ ಪತ್ರಗಳು ಮತ್ತು ಲೈಸೆನ್ಸ್‌ಗಳಿಗೆ ಹಿಂಬರಹ

73 ನಿರಸಿತ

74. ನಿಯಮಗಳ ಪ್ರಕಟಣೆ

75. ನಿರಸನ ಮತ್ತು ಉಳಿಸುವಿಕೆ

* * *

# ಒಳನಾಡು ನೌಕೆಗಳ ಅಧಿನಿಯಮ, 1917

(1917ರ ಅಧಿನಿಯಮ ಸಂಖ್ಯೆ 1)

[7ನೇ ಫೆಬ್ರವರಿ, 1917]

ಒಳನಾಡು ನೌಕೆಗಳಿಗೆ ಸಂಬಂಧಿಸಿದ ಅಧಿನಿಯಮಿತಿಗಳನ್ನು ಕ್ರೋಡೀಕರಿಸುವ ಅಧಿನಿಯಮ.

ಒಳನಾಡು ನೌಕೆಗಳಿಗೆ ಸಂಬಂಧಿಸಿದ ಅಧಿನಿಯಮಿತಿಗಳನ್ನು ಕ್ರೋಡೀಕರಿಸುವುದು ಯುಕ್ತವಾಗಿರುವುದರಿಂದ, ಅದನ್ನು ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:-

## ಅಧ್ಯಾಯ - I

### ಪ್ರಾರಂಭಿಕ

1. **ಚಿಕ್ಕ ಹೆಸರು ಮತ್ತು ವ್ಯಾಪ್ತಿ.-** ಈ ಅಧಿನಿಯಮವನ್ನು ಒಳನಾಡು ನೌಕೆಗಳ ಅಧಿನಿಯಮ, 1917 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯ ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ:

ಪರಂತು, ಇದು 1936ರ ಮಾರ್ಚ್ 31ನೇ ದಿವಸದಂದು ಮದ್ರಾಸು ಪ್ರಾಂತ್ಯದಲ್ಲಿ ಸೇರಿಸಿದ್ದ ಅಥವಾ 1956ರ ಅಕ್ಟೋಬರ್ 31ನೇ ದಿವಸದಂದು ಟ್ರಾವಂಕೂರ್ ಕೊಚ್ಚಿನ್ ರಾಜ್ಯದಲ್ಲಿ ಸೇರಿಸಿದ್ದ ರಾಜ್ಯಕ್ಷೇತ್ರಗಳ ಯಾವುದೇ ಭಾಗದಲ್ಲಿ, ಸಂಬಂಧಪಟ್ಟ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದೇಶಿಸಿದ ಹೊರತು ಜಾರಿಗೆ ಬರತಕ್ಕದ್ದಲ್ಲ.

2. **ಪರಿಭಾಷೆಗಳು.-** (1) ಈ ಅಧಿನಿಯಮದಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,-

(ಎ) "ಒಳನಾಡು ನೌಕೆ" ಅಥವಾ "ಯಂತ್ರಚಾಲಿತ ಒಳನಾಡು ನೌಕೆ" ಎಂದರೆ ಯಾವುದೇ ಒಳನಾಡು ಜಲಮಾರ್ಗದ ಮೇಲೆ ಸಾಮಾನ್ಯವಾಗಿ ಸಂಚರಿಸುವ ಯಂತ್ರಚಾಲಿತ ನೌಕೆ;

(ಬಿ) "ಒಳನಾಡು ಜಲಕ್ಷೇತ್ರ" ಎಂದರೆ ಯಾವುದೇ ಕಾಲುವೆ, ನದಿ, ಸರೋವರ ಅಥವಾ ಇತರ ನೌಕಾ ಸಂಚಾರ ಯೋಗ್ಯ ಜಲಕ್ಷೇತ್ರ;

(ಸಿ) "ಯಂತ್ರಚಾಲಿತ ನೌಕೆ" ಎಂದರೆ ಪೂರ್ಣವಾಗಿ ಅಥವಾ ಭಾಗಶಃ ವಿದ್ಯುಚ್ಛಕ್ತಿ, ಹಬೆ ಅಥವಾ ಇತರ ಯಂತ್ರಶಕ್ತಿಯ ಮೂಲಕ ಚಲಿಸುವ ಪ್ರತಿಯೊಂದು ವರ್ಣನೆಯ ನೌಕೆ;

(ಡಿ) "ಪ್ರಯಾಣಿಕ" ಎಂಬುದು ನೌಕೆಯ ನಾಯಕ ಮತ್ತು ನಾವಿಕ ತಂಡ ಮತ್ತು ಒಡೆಯ, ಆತನ ಕುಟುಂಬ ವರ್ಗ ಮತ್ತು ಸೇವಕರನ್ನು ಹೊರತುಪಡಿಸಿ ಯಂತ್ರಚಾಲಿತ ನೌಕೆಯಲ್ಲಿ ಒಯ್ಯಲಾಗುವ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಇ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗಿನ ಯಾವುದೇ ನಿಯಮದ ಮೂಲಕ ನಿಯಮಿಸಲಾದುದು;

(ಎಫ್) "ಸಮೀಕ್ಷೆ" ಎಂದರೆ ಈ ಅಧಿನಿಯಮದ ಮೇರೆಗೆ ಒಂದು ಯಂತ್ರಚಾಲಿತ ನೌಕೆಯ ಸಮೀಕ್ಷೆ;

(ಜಿ) "ಸಮೀಕ್ಷಕ" ಎಂದರೆ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಸಮೀಕ್ಷಕ;

(ಎಚ್) "ಜಲಯಾನ" ಎಂಬುದು ಯಂತ್ರಚಾಲಿತ ನೌಕೆಯು ಯಾವುದೇ ಸ್ಥಳದಲ್ಲಿ ಅಥವಾ ಸುತ್ತಮುತ್ತ ಸಂಚರಿಸುವುದನ್ನು ಒಳಗೊಳ್ಳುತ್ತದೆ.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ಲಿಖಿತದಲ್ಲಿ ಅಥವಾ ಇತರ ದಸ್ತಾವೇಜಿನಲ್ಲಿರುವ ಒಳನಾಡು ಆವಿ ನೌಕೆಗಳ ಅಧಿನಿಯಮ, 1917ರ (1917ರ 1) - ಇದಕ್ಕೆ ಮಾಡಲಾದ ಯಾವುದೇ ಉಲ್ಲೇಖವನ್ನು ಒಳನಾಡು ನೌಕೆಗಳ ಅಧಿನಿಯಮ, 1917ಕ್ಕೆ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

## ಅಧ್ಯಾಯ - II

## ಒಳನಾಡು ಯಂತ್ರಚಾಲಿತ ನೌಕೆಗಳ ಸಮೀಕ್ಷೆ

**3. ಒಳನಾಡು ಯಂತ್ರಚಾಲಿತ ನೌಕೆಯು ಸಮೀಕ್ಷಾ ಪ್ರಮಾಣ ಪತ್ರವಿಲ್ಲದೆ ಜಲಯಾನಕ್ಕೆ ಹೊರಡದಿರುವುದು ಅಥವಾ ಅದನ್ನು ಸೇವೆಗೆ ಉಪಯೋಗಿಸದಿರುವುದು.**- (1) ಒಂದು ಒಳನಾಡು ಯಂತ್ರಚಾಲಿತ ನೌಕೆಯನ್ನು, ಜಾರಿಯಲ್ಲಿರುವ ಮತ್ತು ಜಲಯಾನಕ್ಕೆ ಅಥವಾ ಸೇವೆಗೆ ಅನ್ವಯವಾಗುವ ಸಮೀಕ್ಷಾ ಪ್ರಮಾಣ ಪತ್ರವನ್ನು ಅದು ಹೊಂದಿದ್ದ ಹೊರತು ಯಾವುದೇ ಜಲಯಾನಕ್ಕೆ ಹೊರಡಿಸತಕ್ಕದ್ದಲ್ಲ ಅಥವಾ ಯಾವುದೇ ಸೇವೆಗೆ ಉಪಯೋಗಿಸತಕ್ಕದ್ದಲ್ಲ.

(2) ಈ ಪ್ರಕರಣದಲ್ಲಿರುವುದಾವುದೂ, ಒಳನಾಡು ಯಂತ್ರಚಾಲಿತ ನೌಕೆಯ ಸಮೀಕ್ಷಾ ಪ್ರಮಾಣ ಪತ್ರದ ಅವಧಿಯು ಮುಕ್ತಾಯವಾದ ಕಾಲ ಮತ್ತು ಆ ಪ್ರಮಾಣಪತ್ರವನ್ನು ಸಾಧ್ಯವಾದಷ್ಟೂ ಮುಂಚಿತವಾಗಿ ನವೀಕರಿಸುವ ಕಾಲ - ಇವುಗಳ ನಡುವಣ ಅವಧಿಯಲ್ಲಿ ಜಲಯಾನ ಮಾಡುವ ಆ ಯಾವುದೇ ಯಂತ್ರಚಾಲಿತ ನೌಕೆಗೆ ಅನ್ವಯವಾಗತಕ್ಕದ್ದಲ್ಲ.

**4. ಸಮೀಕ್ಷಕರ ನೇಮಕ ಮತ್ತು ಸಮೀಕ್ಷಣ ಸ್ಥಳಗಳು.**- (1) ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,-

(ಎ) ತನ್ನ ಆಡಳಿತಕ್ಕೆ ಅಧೀನವಾದ ರಾಜ್ಯಕ್ಷೇತ್ರದೊಳಗೆ ತಾನು ಯೋಗ್ಯವೆಂದು ಯೋಚಿಸಬಹುದಾದಂಥ ಸ್ಥಳಗಳನ್ನು ಸಮೀಕ್ಷಣ ಸ್ಥಳಗಳು ಎಂಬುದಾಗಿ ಘೋಷಿಸಬಹುದು;

(ಬಿ) ಈ ಅಧಿನಿಯಮದ ಉದ್ದೇಶಕ್ಕಾಗಿ ಅದು ಯೋಗ್ಯವೆಂದು ಯೋಚಿಸಬಹುದಾದಷ್ಟು ಸಂಖ್ಯೆಯ ವ್ಯಕ್ತಿಗಳನ್ನು ಸಮೀಕ್ಷಕರನ್ನಾಗಿ ನೇಮಕ ಮಾಡಬಹುದು.

(2) ಪ್ರತಿಯೊಬ್ಬ ಸಮೀಕ್ಷಕನು ಮಾಡಿದ ಯಾವುವೇ ಸಮೀಕ್ಷೆಯ ಉದ್ದೇಶಗಳಿಗಾಗಿ, ಅವನನ್ನು ಭಾರತ ದಂಡ ಸಂಹಿತೆಯ (1860ರ 45) ಅರ್ಥವ್ಯಾಪ್ತಿಯಲ್ಲಿ ಒಬ್ಬ ಲೋಕನೌಕರನೆಂಬುದಾಗಿ ಭಾವಿಸತಕ್ಕದ್ದು.

**5. ಸಮೀಕ್ಷಕರ ಅಧಿಕಾರ.**- (1) ಸಮೀಕ್ಷೆಯ ಉದ್ದೇಶಕ್ಕಾಗಿ ಸಮೀಕ್ಷಕನು ಯಾವುದೇ ಯುಕ್ತ ಕಾಲದಲ್ಲಿ, ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯೊಳಕ್ಕೆ ಹೋಗಬಹುದು ಮತ್ತು ನೌಕೆಯ ಒಡಲು, ಬಾಯ್ಲರ್‌ಗಳು, ಇಂಜಿನ್ನುಗಳು ಮತ್ತು ಇತರ ಯಂತ್ರ ಭಾಗಗಳು ಮತ್ತು ನೌಕೆಯಲ್ಲಿರುವ ಎಲ್ಲಾ ಸಾಧನ ಸಾಮಗ್ರಿಗಳು ಮತ್ತು ವಸ್ತುಗಳೂ ಸೇರಿದಂತೆ ಯಂತ್ರಚಾಲಿತ ನೌಕೆಯನ್ನು ಮತ್ತು ಅದರ ಪ್ರತಿಯೊಂದು ಭಾಗವನ್ನು ಪರಿಶೀಲಿಸಬಹುದು:

ಪರಂತು, ಯಂತ್ರಚಾಲಿತ ನೌಕೆಗೆ ಸಾಮಗ್ರಿಗಳನ್ನು ತುಂಬುವಲ್ಲಿ ಮತ್ತು ಅದರಿಂದ ಇಳಿಸುವಲ್ಲಿ ಅವನು ಅನಾವಶ್ಯಕವಾಗಿ ಅಡಚಣೆ ಮಾಡತಕ್ಕದ್ದಲ್ಲ ಅಥವಾ ಅದು ಯಾವುದೇ ಜಲಯಾನಕ್ಕೆ ತೆರಳುವುದನ್ನು ಅನಾವಶ್ಯಕವಾಗಿ ತಡೆಹಿಡಿದಿಡತಕ್ಕದ್ದಲ್ಲ ಅಥವಾ ವಿಳಂಬ ಮಾಡತಕ್ಕದ್ದಲ್ಲ.

(2) ಯಂತ್ರಚಾಲಿತ ನೌಕೆಯ ಒಡೆಯನು, ನಾಯಕ ಮತ್ತು ಅಧಿಕಾರಿಗಳು ಸಮೀಕ್ಷಕನಿಗೆ ಸಮೀಕ್ಷೆಯ ಉದ್ದೇಶಕ್ಕಾಗಿ ಅವನು ಅವಶ್ಯಪಡಿಸಬಹುದಾದಂಥ ಎಲ್ಲಾ ಯುಕ್ತ ಸೌಲಭ್ಯಗಳನ್ನು ಮತ್ತು ಯಂತ್ರಚಾಲಿತ ನೌಕೆ, ಅದರ ಯಂತ್ರ ಭಾಗಗಳು ಅಥವಾ ಅದರ ಯಾವುದೇ ಭಾಗ ಮತ್ತು ನೌಕೆಯಲ್ಲಿರುವ ಎಲ್ಲಾ ಸಾಧನ ಸಾಮಗ್ರಿಗಳು ಮತ್ತು ವಸ್ತುಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಒದಗಿಸತಕ್ಕದ್ದು.

**6. ಸಮೀಕ್ಷೆ ಸಂಬಂಧದಲ್ಲಿ ಫೀಜುಗಳು.**- ಸಮೀಕ್ಷೆಯು ಪ್ರಾರಂಭವಾಗುವುದಕ್ಕೆ ಮುಂಚೆ ಸಮೀಕ್ಷೆ ಮಾಡಬೇಕಾದ ಯಂತ್ರಚಾಲಿತ ನೌಕೆಯ ಒಡೆಯನು ಅಥವಾ ನಾಯಕನು, ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಸಂಬಂಧದಲ್ಲಿ ನೇಮಕ ಮಾಡಬಹುದಾದಂಥ ಅಧಿಕಾರಿಗೆ ಈ ಕೆಳಕಂಡಂತೆ ಫೀಜುಗಳನ್ನು ಸಂದಾಯ ಮಾಡತಕ್ಕದ್ದು:-

(ಎ) ಅನುಸೂಚಿ 1 ರಲ್ಲಿ ಹೇಳಲಾದ ದರಗಳಿಗನುಸಾರವಾಗಿ ಅಥವಾ ನಿಯಮಿಸಲಾದ ಯಾವುದೇ ಇತರ ದರಗಳಿಗನುಸಾರವಾಗಿ ಯಂತ್ರಚಾಲಿತ ನೌಕೆಯ ಟನ್ ಮಾನಕಕ್ಕನುಸಾರ ಮೇಲೆ ಲೆಕ್ಕ ಹಾಕಿದ ಫೀಜು; ಮತ್ತು

(ಬಿ) ಕಲ್ಕತ್ತ, ಮದ್ರಾಸು ಅಥವಾ ಮುಂಬಯಿ - ಇವುಗಳನ್ನು ಹೊರತುಪಡಿಸಿ ಯಾವುದೇ ಇತರ ಸಮೀಕ್ಷೆಯ ಸ್ಥಳದಲ್ಲಿ ಸಮೀಕ್ಷೆಯನ್ನು ಮಾಡಬೇಕಾಗಿರುವಾಗ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದಾದಂಥ ಸ್ಥಳಕ್ಕೆ ಸಮೀಕ್ಷಕನು ಮಾಡಿದ ಪ್ರಯಾಣಕ್ಕೆ ತಗುಲಿದ ವೆಚ್ಚವೇನಾದರೂ ಇದ್ದರೆ, ಆ ಸಂಬಂಧದಲ್ಲಿನ ಹೆಚ್ಚುವರಿ ಫೀಜು.

**7. ಸಮೀಕ್ಷಕನ ಘೋಷಣೆ.**– ಯಂತ್ರಚಾಲಿತ ನೌಕೆಯ ಸಮೀಕ್ಷೆಯು ಪೂರ್ಣಗೊಂಡಾಗ ಸಮೀಕ್ಷಕನು,–

(ಎ) ಯಂತ್ರಚಾಲಿತ ನೌಕೆಯ ಒಡಲು, ಬಾಯ್ಲರ್‌ಗಳು, ಇಂಜಿನ್‌ಗಳು ಮತ್ತು ಇತರ ಯಂತ್ರ ಭಾಗಗಳು ಉದ್ದೇಶಿತ ಜಲಯಾನ ಅಥವಾ ಸೇವೆಗಾಗಿ ಸಮರ್ಥವಾಗಿವೆ ಅಥವಾ ಉತ್ತಮ ಸ್ಥಿತಿಯಲ್ಲಿವೆ ಎಂದು, ಮತ್ತು

(ಬಿ) ಯಂತ್ರಚಾಲಿತ ನೌಕೆಗಳ ಸಾಧನ ಸಾಮಗ್ರಿಗಳು ಮತ್ತು ನಾಯಕನ ಮತ್ತು ಇಂಜಿನಿಯರನ ಪ್ರಮಾಣಪತ್ರಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಮತ್ತು ಯಂತ್ರಚಾಲಿತ ನೌಕೆಗೆ ಅನ್ವಯವಾಗುವ ಯಾವುದೇ ಕಾನೂನಿನ ಮೂಲಕ ಅಗತ್ಯಪಡಿಸಿದಂಥವುಗಳಾಗಿವೆಯೆಂದು ಮತ್ತು ಅಂಥ ಸ್ಥಿತಿಯಲ್ಲಿವೆಯೆಂದು ಮನದಟ್ಟು ಮಾಡಿಕೊಂಡರೆ ಸಮೀಕ್ಷಕನು ಕೂಡಲೇ ಒಡೆಯನಿಗೆ ಅಥವಾ ನಾಯಕನಿಗೆ

– (ಎ) ಮತ್ತು (ಬಿ) ಖಂಡಗಳಲ್ಲಿ ಹೇಳಲಾದ ವಿವರಗಳನ್ನು ಮತ್ತು ಕೆಳಕಂಡ ಹೆಚ್ಚಿನ ವಿವರಗಳನ್ನು ಒಳಗೊಂಡಂತೆ ನಿಯಮಿಸಲಾದ ನಮೂನೆಯಲ್ಲಿರುವ ಘೋಷಣೆಯನ್ನು ಕೊಡತಕ್ಕದ್ದು, ಎಂದರೆ:–

(i) ಅವಧಿಯು ಒಂದು ವರ್ಷಕ್ಕಿಂತ ಕಡಿಮೆ ಇದ್ದರೆ ಯಂತ್ರಚಾಲಿತ ನೌಕೆಯ ಒಡಲು, ಬಾಯ್ಲರ್‌ಗಳು, ಇಂಜಿನ್ನುಗಳು ಮತ್ತು ಇತರ ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳು ಎಷ್ಟು ಅವಧಿಯವರೆಗೆ ಸಮರ್ಥವಾಗಿರುತ್ತವೆ ಎಂಬ ವಿವರ;

(ii) ಸಮೀಕ್ಷಕನ ಪ್ರಕಾರ ಯಾವ ನೌಕೆಯ ಒಡಲು, ಬಾಯ್ಲರ್‌ಗಳು, ಇಂಜಿನ್ನುಗಳು ಮತ್ತು ಇತರ ಯಂತ್ರೋಪಕರಣಗಳು ಅಥವಾ ಸಾಧನ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಆ ಯಂತ್ರಚಾಲಿತ ನೌಕೆಯು ಯಾವ ಕಾಲಮಿತಿಯ ತರುವಾಯ ಸಂಚಾರಕ್ಕೆ ಯೋಗ್ಯವಲ್ಲವೋ ಆ ಕಾಲ ಪರಿಮಿತಿಯ (ಯಾವುದಾದರೂ ಇದ್ದರೆ ಅದರ) ವಿವರ;

(iii) ಸಮೀಕ್ಷಕನ ನಿರ್ಣಯದ ಪ್ರಕಾರ ಯಂತ್ರಚಾಲಿತ ನೌಕೆಯು ಒಯ್ಯಲು ಸಮರ್ಥವಾದ ಪ್ರಯಾಣಿಕರ ಸಂಖ್ಯೆ, ಮತ್ತು ಅಗತ್ಯವಿದ್ದಲ್ಲಿ ಅನುಕ್ರಮವಾಗಿ ನೌಕೆಯ ಅಟ್ಟದ ಮೇಲೆ ಮತ್ತು ನೌಕೆಯ ಮಲಗುವ ಕೋಣೆಗಳಲ್ಲಿ ಮತ್ತು ನೌಕೆಯ ಒಡಲು ಮತ್ತು ಹಡಗಿನ ಮಲಗುವ ಕೋಣೆಗಳ ಬೇರೆ ಬೇರೆ ಭಾಗಗಳಲ್ಲಿ ಒಯ್ಯಬೇಕಾದ ಪ್ರಯಾಣಿಕರ ಸಂಖ್ಯೆ ಮತ್ತು ಆ ಸಂಖ್ಯೆಯು ವರ್ಷದ ಕಾಲ, ಜಲಯಾನದ ಸ್ವರೂಪ, ಸಾಗಿಸಬೇಕಾದ ಸರಕುಗಳು ಮತ್ತು ಇತರ ಪರಿಸ್ಥಿತಿಗನುಸಾರವಾಗಿ ಸಂದರ್ಭವು ಅಗತ್ಯಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು ವ್ಯತ್ಯಾಸಗಳಿಗೆ ಒಳಪಟ್ಟಿರಬೇಕು;

(iiiಎ) ಸಮೀಕ್ಷಕನ ತೀರ್ಮಾನದಲ್ಲಿ ಯಂತ್ರಚಾಲಿತ ನೌಕೆಯು ಒಯ್ಯಲು ಸಮರ್ಥವಾದ ಸರಕಿನ ಸ್ವರೂಪ ಮತ್ತು ಪರಿಮಾಣ; ಮತ್ತು

(iv) ಯಾವುದೇ ಇತರ ನಿಯಮಿಸಲಾದ ವಿವರಗಳು.

**8. ಒಡೆಯನು ಅಥವಾ ನಾಯಕನು ರಾಜ್ಯ ಸರ್ಕಾರಕ್ಕೆ ಘೋಷಣೆಯನ್ನು ಕಳುಹಿಸುವುದು.**– (1) ಯಂತ್ರಚಾಲಿತ ನೌಕೆಯ ಯಾವ ಒಡೆಯನಿಗೆ ಅಥವಾ ನಾಯಕನಿಗೆ 7ನೇ ಪ್ರಕರಣದ ಮೇರೆಗೆ ಘೋಷಣೆಯನ್ನು ಕೊಡಲಾಗಿದೆಯೋ ಆ ಒಡೆಯನು ಅಥವಾ ನಾಯಕನು ಅದನ್ನು ಸ್ವೀಕರಿಸಿದ ದಿನಾಂಕದ ತರುವಾಯ ನಾಲ್ಕು ದಿವಸಗಳೊಳಗಾಗಿ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನೇಮಿಸಬಹುದಾದಂಥ ಅಧಿಕಾರಿಗೆ ಆ ಘೋಷಣೆಯನ್ನು ಕಳುಹಿಸತಕ್ಕದ್ದು.

(2) ಯಾರೇ ಒಡೆಯ ಅಥವಾ ನಾಯಕನು (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಲಾಗಿರುವಂಥ ಘೋಷಣೆಯನ್ನು ಕಳುಹಿಸಲು ತಪ್ಪಿದರೆ, ಆ ಘೋಷಣೆಯನ್ನು ಕಳುಹಿಸಲು ವಿಳಂಬ ಮಾಡಿರುವ ಅವಧಿಯ ಪ್ರತಿ ದಿವಸಕ್ಕೆ ಅವನ ಮೊಬಲಗಿನಲ್ಲಿ ಐದು ರೂಪಾಯಿಯನ್ನು ಮೀರದಷ್ಟು ಮೊಬಲಗು ಮುಟ್ಟುಗೋಲು ಆಗತಕ್ಕದ್ದು.

**9. ಸಮೀಕ್ಷಾ ಪ್ರಮಾಣ ಪತ್ರಗಳನ್ನು ನೀಡಲು ಅಥವಾ ನೀಡಿದ ಪ್ರಮಾಣಪತ್ರಗಳನ್ನು ಅಧಿಕೃತಗೊಳಿಸಲು ರಾಜ್ಯ ಸರ್ಕಾರದ ಅಧಿಕಾರ.**– (1) ರಾಜ್ಯ ಸರ್ಕಾರವು, ಈ ಅಧಿನಿಯಮದ, ಎಲ್ಲಾ ಉಪಬಂಧಗಳನ್ನು 8ನೇ ಪ್ರಕರಣದ ಮೇರೆಗೆ ಕಳುಹಿಸಿದ ಘೋಷಣೆಯ ಸಂಬಂಧದಲ್ಲಿ ಪಾಲಿಸಲಾಗಿದೆ ಎಂದು ಮನದಟ್ಟು ಮಾಡಿಕೊಂಡರೆ,–

(ಎ) ಸಮೀಕ್ಷಾ ಪ್ರಮಾಣ ಪತ್ರವನ್ನು ದ್ವಿಪ್ರತಿಯಲ್ಲಿ ಸಿದ್ಧಪಡಿಸಲು ವ್ಯವಸ್ಥೆ ಮಾಡತಕ್ಕದ್ದು, ಮತ್ತು

(ಬಿ) ಆ ಪ್ರಮಾಣಪತ್ರವು ಯಾವ ಯಂತ್ರಚಾಲಿತ ನೌಕೆಗೆ ಸಂಬಂಧಪಟ್ಟಿರುವುದೋ ಆ ನೌಕೆಯ ಒಡೆಯನಿಗೆ ಅಥವಾ ನಾಯಕನಿಗೆ ಅಂಚೆಯ ಮೂಲಕ ಅಥವಾ ಅನ್ಯಥಾ ಆ ಬಗ್ಗೆ ನೋಟೀಸನ್ನು ಕೊಡಲು ವ್ಯವಸ್ಥೆ ಮಾಡತಕ್ಕದ್ದು.

(2) ಒಡೆಯ ಅಥವಾ ನಾಯಕನು, ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನೇಮಕ ಮಾಡಬಹುದಾದಂಥ ಸಮೀಕ್ಷೆಯ ಸ್ಥಳದಲ್ಲಿನ ಅಧಿಕಾರಿಗೆ ಅರ್ಜಿ ಸಲ್ಲಿಸಿದ ತರುವಾಯ ಮತ್ತು ಒಡೆಯನು ಅಥವಾ ನಾಯಕನು 8ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವುದೇ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿದ್ದರೆ ಅದನ್ನು ಅಂಥ ಅಧಿಕಾರಿಗೆ ಸಂದಾಯ ಮಾಡಿದ ನಂತರ (ಆ ಮೂಲಕ ನಿಗದಿಪಡಿಸಿರುವ ಪರಿಮಿತಿಯೊಳಗೆ ಅವರ ವಾಸ್ತವಿಕ ಮೊಬಲಗನ್ನು ರಾಜ್ಯ ಸರ್ಕಾರವು ನಿರ್ಧರಿಸತಕ್ಕದ್ದು ಹಾಗೆ ತಯಾರಿಸಿದ ಪ್ರಮಾಣ ಪತ್ರವನ್ನು ದ್ವಿಪ್ರತಿಯಲ್ಲಿ, ರಾಜ್ಯ ಸರ್ಕಾರವು, ಒಡೆಯ ಅಥವಾ ನಾಯಕನಿಗೆ ನೀಡತಕ್ಕುದು ಮತ್ತು ಅದನ್ನು ಆತನಿಗೆ ಅಂಥ ಅಧಿಕಾರಿಯ ಮೂಲಕ ನೀಡತಕ್ಕದ್ದು.

(3) ಈ ಪ್ರಕರಣದ ಮೇರೆಗೆ ನೀಡಲಾಗುವ ಪ್ರಮಾಣಪತ್ರವು ನಿಯಮಿಸಲಾದ ನಮೂನೆಯಲ್ಲಿರತಕ್ಕದ್ದು, ಮತ್ತು ಯಂತ್ರಚಾಲಿತ ನೌಕೆಯ ಸಮೀಕ್ಷೆಯ ಸಂಬಂಧದಲ್ಲಿ ಈ ಅಧಿನಿಯಮದ ಮತ್ತು ಸಮೀಕ್ಷೆಯ ಘೋಷಣೆಯ ಎಲ್ಲಾ ಉಪಬಂಧಗಳನ್ನು ಪಾಲಿಸಲಾಗಿದೆ ಎಂಬ ವಿವರಣೆಯನ್ನು ಒಳಗೊಂಡಿರತಕ್ಕದ್ದು, ಮತ್ತು ಅದರಲ್ಲಿ,-

(ಎ) 7ನೇ ಪ್ರಕರಣದ (i), (ii) ಮತ್ತು (iii)ನೇ ಖಂಡಗಳ ಮೂಲಕ ಅಗತ್ಯಪಡಿಸಲಾದಂತೆ ಸಮೀಕ್ಷೆಯ ಘೋಷಣೆಯಲ್ಲಿ ನಮೂದಿಸಲಾದ ಯಂತ್ರಚಾಲಿತ ನೌಕೆಗೆ ಸಂಬಂಧಿಸುವ ವಿವರಗಳನ್ನು, ಮತ್ತು

(ಬಿ) ಯಾವುದೇ ಇತರ ನಿಯಮಿಸಿದ ವಿವರಗಳನ್ನು

- ನಮೂದಿಸತಕ್ಕದ್ದು.

(4) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ, ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರಕ್ಕೆ ವಹಿಸಿಕೊಡಲಾದ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ಯಾರೇ ವ್ಯಕ್ತಿಗೆ ಪ್ರತ್ಯಾಯೋಜಿಸಿ ಕೊಡಬಹುದು:

ಪರಂತು, 7ನೇ ಪ್ರಕರಣದ ಮೇರೆಗೆ ಸಮೀಕ್ಷೆಯ ಘೋಷಣೆಯನ್ನು ಮಾಡಿರುವ ಮೋಜಣಿದಾರನು ಸಮೀಕ್ಷೆಯ ಪ್ರಮಾಣಪತ್ರವನ್ನು ನೀಡಲು ಅವನಿಗೆ ಅಧಿಕಾರ ನೀಡುವ ಬಗ್ಗೆ ಯಾವುದೇ ಪ್ರತ್ಯಾಯೋಜನೆಯನ್ನು (2)ನೇ ಉಪಪ್ರಕರಣದ ಮೇರೆಗೆ ಮಾಡತಕ್ಕದ್ದಲ್ಲ.

**10. ಸಮೀಕ್ಷೆಯ ಪ್ರಮಾಣಪತ್ರವನ್ನು ಯಂತ್ರಚಾಲಿತ ನೌಕೆಯ ಎದ್ದುಕಾಣುವ ಭಾಗದಲ್ಲಿ ಅಂಟಿಸಿರುವುದು.**- ಸಮೀಕ್ಷೆಯ ಪ್ರಮಾಣಪತ್ರವನ್ನು ನೀಡಲಾಗಿರುವ ಪ್ರತಿಯೊಂದು ಯಂತ್ರಚಾಲಿತ ನೌಕೆಯ ಒಡೆಯ ಅಥವಾ ನಾಯಕನು, ಪ್ರಮಾಣಪತ್ರವನ್ನು ಸ್ವೀಕರಿಸಿದ ತರುವಾಯ, ಅದರ ಪ್ರತಿಗಳ ಪೈಕಿ ಒಂದನ್ನು ನೌಕೆಯಲ್ಲಿರುವ ಎಲ್ಲ ವ್ಯಕ್ತಿಗಳು ಸುಲಭವಾಗಿ ಓದುವಂತಿರುವ ಯಂತ್ರಚಾಲಿತ ನೌಕೆಯ ಸಾಕಷ್ಟು ಎದ್ದುಕಾಣುವ ಭಾಗದಲ್ಲಿ ಅಂಟಿಸತಕ್ಕದ್ದು, ಮತ್ತು ಅದು ಜಾರಿಯಲ್ಲಿರುವವರೆಗೆ ಮತ್ತು ಯಂತ್ರಚಾಲಿತ ನೌಕೆಯು ಉಪಯೋಗದಲ್ಲಿರುವವರೆಗೆ ಅದನ್ನು ಹಾಗೆಯೇ ಅಂಟಿಸಿಡತಕ್ಕದ್ದು.

**10ಎ. ಸಮೀಕ್ಷಾ ಪ್ರಮಾಣಪತ್ರಗಳ ಜಾರಿ.**- ಒಂದು ಸಮೀಕ್ಷಾ ಪ್ರಮಾಣಪತ್ರವನ್ನು ಯಾವ ರಾಜ್ಯಕ್ಕೆ ನೀಡಲಾಗಿದೆಯೋ ಆ ರಾಜ್ಯದಾದ್ಯಂತ ಅದು ಜಾರಿಯಲ್ಲಿರತಕ್ಕದ್ದು:

ಪರಂತು, ಅಂಥ ಪ್ರಮಾಣಪತ್ರವನ್ನು ಯಾವುದೇ ಇತರ ರಾಜ್ಯದ ರಾಜ್ಯ ಸರ್ಕಾರವು ಅಥವಾ ಆ ಇತರ ರಾಜ್ಯದ ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಮಂಜೂರಾತಿ ಪಡೆದು ಅದನ್ನು ನೀಡುವ ಪ್ರಾಧಿಕಾರಿಯು, ಆ ಇತರ ರಾಜ್ಯ ಅಥವಾ ಅದರ ಯಾವುದೇ ಭಾಗದಲ್ಲಿ ಪರಿಣಾಮವನ್ನು ಹೊಂದಿರುವಂತೆ ಅದರ ಮೇಲೆ ಹಿಂಬರಹ ಮಾಡಬಹುದು ಮತ್ತು ಹಾಗೆ ಹಿಂಬರಹ ಮಾಡಿದರೆ ತದನುಸಾರವಾಗಿ ಅದು ಪರಿಣಾಮವನ್ನು ಹೊಂದಿರತಕ್ಕದ್ದು.

**11. ಸಮೀಕ್ಷಾ ಪ್ರಮಾಣಪತ್ರಗಳ ಅವಧಿ.**- ಸಮೀಕ್ಷಾ ಪ್ರಮಾಣಪತ್ರವು,-

(ಎ) ಅದರ ದಿನಾಂಕದಿಂದ ಒಂದು ವರ್ಷವು ಮುಕ್ತಾಯವಾದ ತರುವಾಯ; ಅಥವಾ

(ಬಿ) ಪ್ರಮಾಣಪತ್ರವು ಯಾವ ಯಂತ್ರಚಾಲಿತ ನೌಕೆಗೆ ಸಂಬಂಧಪಡುವುದೋ ಅದರ ಕಟ್ಟಡ, ಬಾಯ್ಲರ್‌ಗಳು, ಇಂಜಿನ್‌ಗಳು ಅಥವಾ ಯಂತ್ರೋಪಕರಣಗಳು ಅಥವಾ ಯಾವುದೇ ಇತರ ಸಾಮಗ್ರಿಗಳು

ಯಾವ ಅವಧಿಯವರೆಗೆ ಪರ್ಯಾಪ್ತವಾಗಿರುವುದೆಂದು ಸದರಿ ಪ್ರಮಾಣ ಪತ್ರದಲ್ಲಿ ಹೇಳಲಾಗಿದೆಯೋ, ಆ ಅವಧಿಯು ಒಂದು ವರ್ಷಕ್ಕಿಂತ ಕಡಿಮೆ ಇದ್ದರೆ, ಆ ಅವಧಿಯು ಮುಕ್ತಾಯವಾದ ತರುವಾಯ;

(ಸಿ) ಸಮೀಕ್ಷಾ ಪ್ರಮಾಣ ಪತ್ರವನ್ನು ಯಾವ ರಾಜ್ಯದಲ್ಲಿ ನೀಡಲಾಗಿತ್ತೋ, ಆ ರಾಜ್ಯದ ರಾಜ್ಯ ಸರ್ಕಾರವು, ಅಂಥ ಯಂತ್ರಚಾಲಿತ ನೌಕೆಯ ಒಡೆಯನಿಗೆ ಅಥವಾ ನಾಯಕನಿಗೆ ಅಂಥ ಸರ್ಕಾರವು ಅದನ್ನು ರದ್ದುಪಡಿಸಿದೆ ಎಂದು ಅಥವಾ ಅಮಾನತುಗೊಳಿಸಿದೆ ಎಂದು ನೋಟೀಸು ಕೊಟ್ಟ ತರುವಾಯ

– ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರತಕ್ಕದ್ದಲ್ಲ.

ಸಮೀಕ್ಷಾ ಪ್ರಮಾಣ ಪತ್ರವು ಯಾವುದೇ ರಾಜ್ಯದಲ್ಲಿ, ಆ ರಾಜ್ಯಕ್ಕೆ ಸಂಬಂಧಪಟ್ಟಂಥ ಯಾವುದೇ ದೃಢೀಕರಣದ ಆಧಾರದ ಮೇಲೆ, ಆ ರಾಜ್ಯದ ರಾಜ್ಯ ಸರ್ಕಾರವು, ಯಂತ್ರಚಾಲಿತ ನೌಕೆಯ ಒಡೆಯನಿಗೆ ಅಥವಾ ನಾಯಕನಿಗೆ, ಆ ಸರ್ಕಾರವು ದೃಢೀಕರಣವನ್ನು ರದ್ದುಪಡಿಸಿದೆ ಎಂದು ಅಥವಾ ಅಮಾನತುಗೊಳಿಸಿದೆ ಎಂದು ನೋಟೀಸನ್ನು ನೀಡಿದ ತರುವಾಯವೂ ಜಾರಿಯಲ್ಲಿರತಕ್ಕದ್ದಲ್ಲ.

**12. ಸಮೀಕ್ಷಾ ಪ್ರಮಾಣ ಪತ್ರಗಳ ನವೀಕರಣ.–** ಸಮೀಕ್ಷಾ ಪ್ರಮಾಣಪತ್ರವು ಜಾರಿಯಲ್ಲಿರುವುದು ನಿಂತುಹೋದ ತರುವಾಯ, ಹಾಗೆ ನಿಯಮಿಸಬಹುದಾದಷ್ಟರ ಮಟ್ಟಿಗಿನ ಅದರ ಯಾವುದೇ ಸಡಿಲಿಕೆಯ ಹೊರತು, ಪ್ರಮಾಣಪತ್ರವು ಸಂಬಂಧಪಡುವ ಯಂತ್ರಚಾಲಿತ ನೌಕೆಯ ಹೊಸ ಸಮೀಕ್ಷೆಯನ್ನು ಈ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಮಾಡಿದ ತರುವಾಯ ಮಾತ್ರ ನವೀಕರಿಸತಕ್ಕದ್ದು.

**13. ಸಮೀಕ್ಷಾ ಪ್ರಮಾಣ ಪತ್ರವನ್ನು ಅಮಾನತುಗೊಳಿಸುವ ಅಥವಾ ರದ್ದುಗೊಳಿಸುವ ರಾಜ್ಯ ಸರ್ಕಾರದ ಅಧಿಕಾರ.–** ಸಮೀಕ್ಷಾ ಪ್ರಮಾಣ ಪತ್ರವನ್ನು ಯಾವ ರಾಜ್ಯದಲ್ಲಿ ನೀಡಲಾಯಿತೋ, ಅಥವಾ 10ಎ ಪ್ರಕರಣದ ಮೇರೆಗೆ ದೃಢೀಕರಣವನ್ನು ಯಾವ ರಾಜ್ಯಕ್ಕೆ ಸಂಬಂಧಿಸಿ ಮಾಡಲಾಯಿತೋ, ಆ ರಾಜ್ಯದ ರಾಜ್ಯ ಸರ್ಕಾರಕ್ಕೆ,–

(ಎ) ಯಂತ್ರಚಾಲಿತ ನೌಕೆಯ ಕಟ್ಟಡ, ಬಾಯ್ಲರ್‌ಗಳು, ಇಂಜಿನ್‌ಗಳು ಮತ್ತು ಇತರ ಯಂತ್ರೋಪಕರಣಗಳು ಅಥವಾ ಯಾವುದೇ ಸಾಧನ ಸಾಮಗ್ರಿ ಇವುಗಳ ಪರ್ಯಾಪ್ತತೆಯನ್ನು ಮತ್ತು ಸುಸ್ಥಿತಿಯನ್ನು ಕುರಿತಂತೆ ಸಮೀಕ್ಷಕನು ಘೋಷಣೆಯನ್ನು ಮೋಸದಿಂದ ಅಥವಾ ತಪ್ಪಾಗಿ ಮಾಡಿದ್ದಾನೆಂದು, ಅಥವಾ

(ಬಿ) ಪ್ರಮಾಣ ಪತ್ರವನ್ನು ಅನ್ಯಥಾ ಸುಳ್ಳು ಅಥವಾ ತಪ್ಪು ಮಾಹಿತಿಯನ್ನು ಆಧರಿಸಿ ನೀಡಲಾಗಿದೆ ಎಂದು, ಅಥವಾ

(ಸಿ) ಘೋಷಣೆಯನ್ನು ಮಾಡಿದಂದಿನಿಂದ, ಯಂತ್ರಚಾಲಿತ ನೌಕೆಯ ಕಟ್ಟಡ, ಬಾಯ್ಲರುಗಳು, ಇಂಜಿನುಗಳು ಅಥವಾ ಇತರ ಯಂತ್ರೋಪಕರಣ ಅಥವಾ ಯಾವುದೇ ಸಾಧನ ಸಾಮಗ್ರಿ – ಇವುಗಳಿಗೆ ಸಾಕಷ್ಟು ಹಾನಿಯಾಗಿದೆ ಎಂದು ಅಥವಾ ಅನ್ಯಥಾ ಅವು ಪರ್ಯಾಪ್ತವಾಗಿಲ್ಲ ಎಂದು

– ನಂಬಲು ಕಾರಣವಿದ್ದರೆ, ಅದು ಅಂಥ ಪ್ರಮಾಣಪತ್ರ ಅಥವಾ ಅದರ ಹಿಂಬರಹವನ್ನು ಅಮಾನತುಗೊಳಿಸಬಹುದು ಅಥವಾ ರದ್ದುಪಡಿಸಬಹುದು.

**14. ಅವಧಿ ಮುಕ್ತಾಯವಾದ ಅಥವಾ ರದ್ದುಪಡಿಸಿದ ಪ್ರಮಾಣಪತ್ರವನ್ನು ವಶಾವಣೆ ಮಾಡುವಂತೆ ಅಗತ್ಯಪಡಿಸುವ ರಾಜ್ಯ ಸರ್ಕಾರದ ಅಧಿಕಾರ.–** ರಾಜ್ಯ ಸರ್ಕಾರವು, ಅವಧಿ ಮುಕ್ತಾಯವಾಗಿರುವ ಅಥವಾ ಅಮಾನತುಗೊಳಿಸಲಾಗಿರುವ ಅಥವಾ ರದ್ದುಪಡಿಸಲಾಗಿರುವ ಯಾವುದೇ ಸಮೀಕ್ಷಾ ಪ್ರಮಾಣ ಪತ್ರವನ್ನು, ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ಅಧಿಕಾರಿಗೆ ವಶಾವಣೆ ಮಾಡತಕ್ಕದ್ದೆಂದು ಅಗತ್ಯಪಡಿಸಬಹುದು.

ಯಾವುದೇ ರಾಜ್ಯದ ಯಾವುದೇ ಸಮೀಕ್ಷಾ ಪ್ರಮಾಣ ಪತ್ರದ ಮೇಲಿನ ಹಿಂಬರಹವನ್ನು ಅಮಾನತ್ತುಗೊಳಿಸಿರುವಲ್ಲಿ ಅಥವಾ ರದ್ದುಗೊಳಿಸಿರುವಲ್ಲಿ, ಆ ರಾಜ್ಯದ ರಾಜ್ಯ ಸರ್ಕಾರವು, ಸಮೀಕ್ಷಾ ಪ್ರಮಾಣ ಪತ್ರದ ಮೇಲೆ ಹಿಂಬರಹದ ಅಮಾನತಿನ ಅಥವಾ ರದ್ದಿಯಾತಿಯ ವಿವರಗಳನ್ನು ನಮೂದಿಸಬೇಕಾಗಿರುವ ದೃಷ್ಟಿಯಿಂದ ಆ ಪ್ರಮಾಣ ಪತ್ರವನ್ನು ಈ ಸಂಬಂಧದಲ್ಲಿ ಆ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ಅಧಿಕಾರಿಗೆ ವಶಾವಣೆ ಮಾಡುವಂತೆ ಅಗತ್ಯಪಡಿಸಬಹುದು.

**15. ಕೆಲವು ಪ್ರಮಾಣ ಪತ್ರಗಳ ಅಮಾನತು ಅಥವಾ ರದ್ದಿಯಾತಿಯ ವರದಿ.–** ಒಂದು ಪ್ರಮಾಣ ಪತ್ರದ ಮೇಲೆ 10ಎ ಪ್ರಕರಣದ ಮೇರೆಗೆ ಮಾಡಿದ ಹಿಂಬರಹವನ್ನು ರಾಜ್ಯ ಸರ್ಕಾರವು ಅಮಾನತುಗೊಳಿಸಿದರೆ ಅಥವಾ ರದ್ದುಪಡಿಸಿದರೆ, ಅಥವಾ ಅಮಾನತ್ತಿನ ಅಥವಾ ರದ್ದಿಯಾತಿಯ ವಿಷಯವನ್ನು ಅದರ ಕಾರಣಗಳೊಂದಿಗೆ, ಆ ಪ್ರಮಾಣ ಪತ್ರವನ್ನು ನೀಡಿದ ಆ ರಾಜ್ಯ ಸರ್ಕಾರಕ್ಕೆ ಅಥವಾ ಅದರ ಪ್ರತಿನಿಧಿಗೆ ವರದಿ ಮಾಡತಕ್ಕದ್ದು.

**16. ಇಬ್ಬರು ಸಮೀಕ್ಷಕರು ಸಮೀಕ್ಷೆ ಮಾಡುವಂತೆ ನಿರ್ದೇಶಿಸಲು ರಾಜ್ಯ ಸರ್ಕಾರದ ಅಧಿಕಾರ.–** ಸಮೀಕ್ಷೆಯನ್ನು ಸಾಮಾನ್ಯವಾಗಿ ಒಬ್ಬ ಸಮೀಕ್ಷಕನು ಮಾಡತಕ್ಕದ್ದು. ಆದರೆ, ರಾಜ್ಯ ಸರ್ಕಾರವು, ಸಮೀಕ್ಷೆಯ ಯಾವುದೇ ಸ್ಥಳದಲ್ಲಿನ ಎಲ್ಲಾ ಯಂತ್ರಚಾಲಿತ ನೌಕೆಗಳ ಸಂದರ್ಭದಲ್ಲಿ ಸಾಮಾನ್ಯವಾಗಿ, ಅಥವಾ ಯಾವುದೇ ಅಂಥ ಸ್ಥಳದಲ್ಲಿನ ಯಾವುದೇ ನಿರ್ದಿಷ್ಟ ಯಂತ್ರಚಾಲಿತ ನೌಕೆಗಳ ಅಥವಾ ಯಂತ್ರಚಾಲಿತ ನೌಕೆಗಳ ವರ್ಗದ ಸಂದರ್ಭದಲ್ಲಿ ವಿಶೇಷವಾಗಿ ಇಬ್ಬರು ಸಮೀಕ್ಷಕರನ್ನು ನಿಯೋಜಿಸಬಹುದೆಂದು ಲಿಖಿತ ಆದೇಶದ ಮೂಲಕ ನಿರ್ದೇಶಿಸಿದರೆ, ಹಾಗೆ ನಿಯೋಜಿಸಬಹುದು.

**17. ಎರಡನೇ ಬಾರಿ ಸಮೀಕ್ಷೆಗೆ ಆದೇಶಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ಯಂತ್ರಚಾಲಿತ ನೌಕೆಯ ಸಮೀಕ್ಷೆಯನ್ನು ಮಾಡುವ ಸಮೀಕ್ಷಕನು ಆ ಯಂತ್ರಚಾಲಿತ ನೌಕೆಯ ಸಂಬಂಧವಾಗಿ 7ನೇ ಪ್ರಕರಣದ ಮೇರೆಗೆ ಘೋಷಣೆಯನ್ನು ನೀಡಲು ನಿರಾಕರಿಸಿದರೆ ಅಥವಾ ನೀಡಿರುವ ಘೋಷಣೆಯ ಬಗ್ಗೆ ಯಂತ್ರಚಾಲಿತ ನೌಕೆಯ ಒಡೆಯ ಅಥವಾ ನಾಯಕನಿಗೆ ಅಸಮಾಧಾನವಾಗಿದ್ದರೆ, ರಾಜ್ಯ ಸರ್ಕಾರವು, ಆ ಒಡೆಯನು ಅಥವಾ ನಾಯಕನು ಅರ್ಜಿ ಸಲ್ಲಿಸಿದ ಮೇಲೆ, ಮತ್ತು ರಾಜ್ಯ ಸರ್ಕಾರವು ಅಗತ್ಯಪಡಿಸಬಹುದಾದಂತೆ, ಹಿಂದಿನ ಸಮೀಕ್ಷೆಗಾಗಿ ಸಂದಾಯವಾಗತಕ್ಕ ಫೀ ಮೊಬಲಗಿನ ಎರಡರಷ್ಟು ಮೀರದಷ್ಟು ಫೀಜನ್ನು ಅವನು ಸಂದಾಯ ಮಾಡಿದ ಮೇಲೆ, ಯಂತ್ರಚಾಲಿತ ನೌಕೆಯ ಸಮೀಕ್ಷೆ ಮಾಡುವಂತೆ ಇಬ್ಬರು ಇತರ ಸಮೀಕ್ಷಕರಿಗೆ ನಿರ್ದೇಶಿಸಬಹುದು.

(2) ಹಾಗೆ ನಿರ್ದೇಶಿಸಲಾದ ಸಮೀಕ್ಷಕರು ಕೂಡಲೇ ಯಂತ್ರಚಾಲಿತ ನೌಕೆಯ ಸಮೀಕ್ಷೆಯನ್ನು ಮಾಡತಕ್ಕದ್ದು ಮತ್ತು ಸಮೀಕ್ಷಕನು ತರುವಾಯ ಘೋಷಣೆಯನ್ನು ನೀಡಲು ನಿರಾಕರಿಸಬಹುದು ಅಥವಾ ಆ ಪರಿಸ್ಥಿತಿಗಳಲ್ಲಿ ಅವರಿಗೆ ಸೂಕ್ತವೆಂದು ಕಂ ಡುಬರುವಂಥ ಘೋಷಣೆಯನ್ನು ನೀಡಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ನೀಡಲಾದ ಯಾವುದೇ ಘೋಷಣೆ, ಅಥವಾ ಘೋಷಣೆಯನ್ನು ನೀಡುವುದಿಲ್ಲವೆಂದು ಮಾಡಿದ ಯಾವುದೇ ನಿರಾಕರಣೆಯು ಅಂತಿಮವಾಗಿರತಕ್ಕದ್ದು.

**18. ಇಬ್ಬರು ಸಮೀಕ್ಷಕರನ್ನು ನಿಯೋಜಿಸಿರುವಾಗ ಕರ್ತವ್ಯಗಳ ಹಂಚಿಕೆ.–** 16ನೇ ಪ್ರಕರಣದ ಮೇರೆಗಾಗಲಿ ಅಥವಾ 17ನೇ ಪ್ರಕರಣದ ಮೇರೆಗಾಗಲಿ ಸಮೀಕ್ಷೆಯನ್ನು ಇಬ್ಬರು ಸಮೀಕ್ಷಕರು ಮಾಡುವಾಗ, ಪ್ರತಿಯೊಬ್ಬ ಸಮೀಕ್ಷಕನು, ಈ ಅಧಿನಿಯಮ ಅಥವಾ ಅದರ ಮೇರೆಗೆ ಮಾಡಿದ ನಿಯಮಗಳ ಮೇರೆಗೆ ಸಮೀಕ್ಷಕರಿಗೆ ವಹಿಸಿದ ಕರ್ತವ್ಯಗಳ ಪೈಕಿ ಅವನಿಗೆ ನಿಯಮಿಸಿದ ಕರ್ತವ್ಯದ ಭಾಗವನ್ನು ನೆರವೇರಿಸತಕ್ಕದ್ದು.

**19. ಸಮೀಕ್ಷೆಗಳ ಬಗ್ಗೆ ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಸಮೀಕ್ಷೆ ಮಾಡುವುದನ್ನು ವಿನಿಯಮನಗೊಳಿಸುವ ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಕೆಳಕಂಡವುಗಳನ್ನು ನಿಯಮಿಸಬಹುದು:–

(ಎ) ಯಾವ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ, ಮತ್ತು ಯಾವ ರೀತಿಯಲ್ಲಿ ಸಮೀಕ್ಷೆಗಳನ್ನು ಮಾಡಬೇಕು;

(ಬಿ) ಸಮೀಕ್ಷೆ ಮಾಡುವ ಸಮೀಕ್ಷಕರ ಕರ್ತವ್ಯಗಳು ಮತ್ತು ಇಬ್ಬರು ಸಮೀಕ್ಷಕರನ್ನು ನಿಯೋಜಿಸಿರುವಲ್ಲಿ ಅಂಥ ಪ್ರತಿಯೊಬ್ಬ ಸಮೀಕ್ಷಕನ ಕರ್ತವ್ಯಗಳು;

(ಸಿ) ಯಾವ ನಮೂನೆಯಲ್ಲಿ ಸಮೀಕ್ಷೆಯ ಘೋಷಣೆಗಳನ್ನು ಮತ್ತು ಸಮೀಕ್ಷೆ ಪ್ರಮಾಣ ಪತ್ರಗಳನ್ನು ರೂಪಿಸಬೇಕು ಮತ್ತು 7ನೇ ಮತ್ತು 9ನೇ ಪ್ರಕರಣಗಳ ಮೇರೆಗೆ ಅವುಗಳಲ್ಲಿ ನಮೂದಿಸಬೇಕಾದ ವಿವರಗಳ ಸ್ವರೂಪ;

(ಡಿ) ರಾಜ್ಯ ಸರ್ಕಾರದ ಆಡಳಿತದ ಅಧೀನದಲ್ಲಿರುವ ರಾಜ್ಯ ಕ್ಷೇತ್ರದೊಳಗಿನ ಸಮೀಕ್ಷೆಯ ಎಲ್ಲ ಸ್ಥಳಗಳ ಅಥವಾ ಯಾವುದೇ ಸ್ಥಳದ ಸಂದರ್ಭದಲ್ಲಿ 1ನೇ ಅನುಸೂಚಿಯಲ್ಲಿ ನಮೂದಿಸಲಾದ ದರಗಳನ್ನು ಹೊರತುಪಡಿಸಿ ಸಮೀಕ್ಷೆಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಫೀಜುಗಳನ್ನು ಯಾವ ದರಗಳಿಗನುಸಾರ ಲೆಕ್ಕ ಹಾಕತಕ್ಕದ್ದೋ ಆ ದರಗಳು;

(ಇ) ಹೊಸ ಪ್ರಮಾಣ ಪತ್ರದ ನೀಡಿಕೆಗೆ ಮುಂಚೆ ಯಾವ ಸಂದರ್ಭಗಳಲ್ಲಿ ಮತ್ತು ಯಾವ ವ್ಯಾಪ್ತಿಯವರೆಗೆ ಸಮೀಕ್ಷೆ ಮಾಡುವುದನ್ನು ಬಿಟ್ಟುಬಿಡಬಹುದೋ ಆ ಸಂದರ್ಭಗಳು ಮತ್ತು ವ್ಯಾಪ್ತಿ.

## ಅಧ್ಯಾಯ - IIಎ

## ಒಳನಾಡು ಯಂತ್ರಚಾಲಿತ ನೌಕೆಗಳ ನೋಂದಣಿ

**19ಎ. ಒಳನಾಡು ಯಂತ್ರಚಾಲಿತ ನೌಕೆಗಳನ್ನು ನೋಂದಣಿ ಪ್ರಮಾಣ ಪತ್ರವಿಲ್ಲದೆ ಜಲಯಾನಕ್ಕೆ ಬಿಡದಿರುವುದು ಅಥವಾ ಸೇವೆಗೆ ಉಪಯೋಗಿಸದಿರುವುದು.**- (1) ಒಳನಾಡು ಯಂತ್ರಚಾಲಿತ ನೌಕೆಯು, ಜಲಯಾನದ ಅಥವಾ ಸೇವೆಯ ಸಂಬಂಧದಲ್ಲಿ ಜಾರಿಯಲ್ಲಿರುವ ಮತ್ತು ಈ ಅಧಿನಿಯಮದ ಮೇರೆಗೆ ನೀಡಿದ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿದ್ದ ಹೊರತು ಅದನ್ನು ಜಲಯಾನಕ್ಕೆ ಬಿಡತಕ್ಕದ್ದಲ್ಲ ಅಥವಾ ಯಾವುದೇ ಸೇವೆಗಾಗಿ ಉಪಯೋಗಿಸತಕ್ಕದ್ದಲ್ಲ.

(2) ಈ ಪ್ರಕರಣದಲ್ಲಿರುವುದು ಯಾವುದೂ,-

(ಎ) ನೋಂದಣಿಯ ಸ್ಥಳವಲ್ಲದ ಯಾವುದೇ ಇತರ ಸ್ಥಳದಲ್ಲಿ ನಿರ್ಮಿಸಿದ ಮತ್ತು ಅಂಥ ಸ್ಥಳಕ್ಕೆ ನೋಂದಣಿಗಾಗಿ ಮೊದಲ ಸಲ ಜಲಯಾನ ಮಾಡುವ ಯಾವುದೇ ಯಂತ್ರಚಾಲಿತ ನೌಕೆಗೆ ಅನ್ವಯವಾಗತಕ್ಕದ್ದಲ್ಲ, ಅಥವಾ

(ಬಿ) 3ನೇ ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳನ್ನು ಅಲ್ಪೀಕರಿಸುವಂತೆ ಇರತಕ್ಕದ್ದಲ್ಲ.

**19ಬಿ. ನೋಂದಣಿ ಸ್ಥಳ ಮತ್ತು ನೋಂದಣಿ ಪ್ರಾಧಿಕಾರಗಳು.**- (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,-

(ಎ) ತನ್ನ ಆಡಳಿತದ ಅಧೀನದಲ್ಲಿರುವ ರಾಜ್ಯ ಕ್ಷೇತ್ರದೊಳಗಿನ ಮತ್ತು ತಾನು ಯೋಗ್ಯವೆಂದು ಯೋಚಿಸುವಂಥ ಸ್ಥಳಗಳನ್ನು ನೋಂದಣಿಯ ಸ್ಥಳಗಳೆಂದು ಘೋಷಿಸಬಹುದು, ಮತ್ತು

(ಬಿ) ಈ ಅಧಿನಿಯಮದ ಉದ್ದೇಶಕ್ಕಾಗಿ, ಸದರಿ ಸ್ಥಳಗಳಲ್ಲಿ ನೋಂದಣಿ ಪ್ರಾಧಿಕಾರಿಗಳನ್ನು ನೇಮಕ ಮಾಡಬಹುದು.

(2) ನೋಂದಣಿ ಪ್ರಾಧಿಕಾರಿಯಾಗಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯು, ಅವನು ಮಾಡಿದ ಯಾವುದೇ ನೋಂದಣಿಯ ಉದ್ದೇಶಗಳಿಗಾಗಿ, ಭಾರತ ದಂಡ ಸಂಹಿತೆಯ (1860ರ 45) ಅರ್ಥವ್ಯಾಪ್ತಿಯೊಳಗೆ ಲೋಕ ನೌಕರನಾಗಿರುವುದಾಗಿ ಭಾವಿಸತಕ್ಕದ್ದು.

**19ಸಿ. ನೋಂದಣಿ ಪುಸ್ತಕ.**- ನೋಂದಣಿಯ ಪ್ರತಿಯೊಂದು ಸ್ಥಳದಲ್ಲಿ ನೋಂದಣಿ ಪ್ರಾಧಿಕಾರಿಯು ಒಂದು ಪುಸ್ತಕವನ್ನು ಇಟ್ಟಿರತಕ್ಕುದು ಮತ್ತು ಅದರಲ್ಲಿ ನೋಂದಣಿ ಪ್ರಮಾಣ ಪತ್ರದ ನಮೂನೆಯಲ್ಲಿ ಒಳಗೊಂಡಿರುವ ಎಲ್ಲ ವಿವರಗಳನ್ನು ಕ್ರಮಬದ್ಧವಾಗಿ ನಮೂದಿಸತಕ್ಕದ್ದು ಮತ್ತು ಅಂಥ ನೋಂದಣಿ ಪ್ರಾಧಿಕಾರಿಯು ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯನ್ನು ನೋಂದಣಿ ಮಾಡಿದೊಡನೆಯೇ ಅಥವಾ ಗರಿಷ್ಠ ಒಂದು ತಿಂಗಳೊಳಗಾಗಿ ರಾಜ್ಯ ಸರ್ಕಾರಕ್ಕೆ, ಹಾಗೆ ನೀಡತಕ್ಕ ಪ್ರತಿಯೊಂದು ಪ್ರಮಾಣಪತ್ರದ ನಿಜವಾದ ಮತ್ತು ಯಥಾರ್ಥವಾದ ಪ್ರತಿಯನ್ನು ಸಂಖ್ಯೆಯ ಸಮೇತ ಕಳುಹಿಸಿಕೊಡತಕ್ಕದ್ದು.

**19ಡಿ. ನೋಂದಣಿ ಅರ್ಜಿ.**- ಒಳನಾಡು ಯಂತ್ರಚಾಲಿತ ನೌಕೆಯ ನೋಂದಣಿ ಅರ್ಜಿಯನ್ನು, ನೌಕೆಯ ಒಡೆಯನು ಅಥವಾ ನಾಯಕನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕದ್ದು ಮತ್ತು ಅದು ಅಂಥ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ನೌಕೆಯ ಸಂಬಂಧವಾಗಿ ನೀಡಿದ ಮತ್ತು ಜಾರಿಯಲ್ಲಿರುವ ಸಮೀಕ್ಷಾ ಪ್ರಮಾಣಪತ್ರದ ಒಂದು ಪ್ರತಿಯನ್ನು ಅದರೊಡನೆ ಲಗತ್ತಿಸಿರತಕ್ಕದ್ದು.

**19ಇ. ನೋಂದಣಿ ಸ್ಥಳಗಳು.**- (1) ಒಳನಾಡು ಯಂತ್ರಚಾಲಿತ ನೌಕೆಯ ಒಡೆಯನು ಯಾವ ನೋಂದಣಿ ಪ್ರಾಧಿಕಾರಿಯ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ ಸಾಮಾನ್ಯವಾಗಿ ವಾಸಿಸುತ್ತಿರುವನೋ ಅಥವಾ ವ್ಯವಹಾರವನ್ನು ನಡೆಸುತ್ತಿರುವನೋ ಆ ಪ್ರಾಧಿಕಾರಿಗೆ ನೋಂದಣಿ ಕೋರಿ ಪ್ರತಿಯೊಂದು ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ನೋಂದಣಿ ಪ್ರಮಾಣಪತ್ರ ಕೋರಿ ಅರ್ಜಿ ಸಲ್ಲಿಸುವ ಒಡೆಯನು ಕಂಪನಿಗಳ ಅಧಿನಿಯಮ, 1956 (1956ರ 1) 3ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಒಂದು ಕಂಪನಿಯಾಗಿರುವಲ್ಲಿ ಆ ಕಂಪನಿಯ ಪ್ರಧಾನ ಕಛೇರಿಯು ಯಾವ ನೋಂದಣಿ ಪ್ರಾಧಿಕಾರಿಯ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಇರುವುದೋ ಆ ನೋಂದಣಿ ಪ್ರಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಬಹುದು.

(3) ಈ ಪ್ರಕರಣದಲ್ಲಿ ಏನೇ ಇದ್ದರೂ, ಯಾವುದೇ ರಾಜ್ಯದಲ್ಲಿನ ನೋಂದಣಿ ಪ್ರಾಧಿಕಾರಿಯು, ಒಳನಾಡು ಯಂತ್ರಚಾಲಿತ ನೌಕೆಯ ಒಡೆಯನು ಆ ರಾಜ್ಯದಲ್ಲಿ ಸಾಮಾನ್ಯವಾಗಿ ವಾಸವಾಗಿಲ್ಲದಿದ್ದಾಗ್ಯೂ ಅಥವಾ ಅಲ್ಲಿ ಅವನು ತನ್ನ ವ್ಯವಹಾರವನ್ನು ನಡೆಸುತ್ತಿಲ್ಲದಿದ್ದಾಗ್ಯೂ ಅಥವಾ ಕಂಪನಿಯಾಗಿರುವಲ್ಲಿ, ಆ ಕಂಪನಿಯ ವ್ಯವಹಾರದ ಮುಖ್ಯ ಸ್ಥಳವು ಆ ರಾಜ್ಯದಲ್ಲಿ ಇಲ್ಲದಿದ್ದರೂ ಅದನ್ನು ನೋಂದಾಯಿಸಬಹುದು:

ಪರಂತು, ಒಡೆಯನು ಸಾಮಾನ್ಯವಾಗಿ ವಾಸಿಸುವ ಅಥವಾ ವ್ಯವಹಾರವನ್ನು ನಡೆಸುತ್ತಿರುವ ರಾಜ್ಯದ ಸರ್ಕಾರವು ಅಥವಾ ಕಂಪನಿಯ ಸಂದರ್ಭದಲ್ಲಿ, ಆ ಕಂಪನಿಯ ವ್ಯವಹಾರದ ಮುಖ್ಯ ಸ್ಥಳವು ಇರುವ ರಾಜ್ಯದ ರಾಜ್ಯ ಸರ್ಕಾರವು, ಅದಕ್ಕೆ ತಾನು ಪೂರ್ವ ಅನುಮೋದನೆಯನ್ನು ನೀಡಿರತಕ್ಕದ್ದು.

**19ಎಫ್. ನೋಂದಣಿ ಪ್ರಮಾಣಪತ್ರದ ನೀಡಿಕೆ.–** (1) ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯ ಸಂಬಂಧದಲ್ಲಿ ನೋಂದಣಿ ಪ್ರಾಧಿಕಾರಿಯು ಯುಕ್ತವೆಂದು ಯೋಚಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮಗಳ ಉಪಬಂಧಗಳನ್ನು ಪಾಲಿಸಲಾಗಿದೆ ಎಂದು ಅವನಿಗೆ ಮನವರಿಕೆಯಾದರೆ, ಅರ್ಜಿದಾರನು ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ಮೇಲೆ ನಿಯಮಿಸಿದ ವಿವರಗಳನ್ನು ಒಳಗೊಂಡಿರುವ ನೋಂದಣಿ ಪ್ರಮಾಣಪತ್ರವನ್ನು ಅವನಿಗೆ ನೀಡತಕ್ಕದ್ದು.

(2) ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಯಾಂತ್ರಿಕವಾಗಿ ನ್ಯೂನತೆಯು ಕಂಡುಬಂದರೆ ಅಥವಾ ಅರ್ಜಿದಾರನು ಅವನ ಅರ್ಜಿಯಲ್ಲಿ ನೀಡಿದ ಯಾವುದೇ ವಿವರಣೆಗೆ ಸಮರ್ಥನೆಯಾಗಿ ತೃಪ್ತಿಕರವಾದ ಸಾಕ್ಷ್ಯವನ್ನು ಒದಗಿಸದಿದ್ದರೆ, ನೋಂದಣಿ ಪ್ರಾಧಿಕಾರಿಯು ಅದರ ನೋಂದಣಿಯನ್ನು ನಿರಾಕರಿಸಬಹುದು:

ಪರಂತು, ನೋಂದಣಿ ಪ್ರಾಧಿಕಾರಿಯು, ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯನ್ನು ನೋಂದಣಿ ಮಾಡಲು ನಿರಾಕರಿಸಿರುವಲ್ಲಿ, ಅಂಥ ನಿರಾಕರಣೆಯ ಕಾರಣಗಳನ್ನು ಒಳಗೊಂಡ ಲಿಖಿತ ವಿವರಣೆಯನ್ನು ಆ ಅರ್ಜಿದಾರನಿಗೆ ಒದಗಿಸತಕ್ಕದ್ದು.

**19ಜಿ. (ನಿರಸನಗೊಳಿಸಲಾಗಿದೆ)**

**19ಎಚ್. ಒಳನಾಡು ಯಂತ್ರಚಾಲಿತ ನೌಕೆಗಳಿಗೆ ಗುರುತು ಹಾಕುವುದು.–** ಒಳನಾಡು ಯಂತ್ರಚಾಲಿತ ನೌಕೆಯನ್ನು, ಈ ಅಧ್ಯಾಯದ ಮೇರೆಗೆ ನೋಂದಾಯಿಸಲಾಗಿರುವಲ್ಲಿ, ನೋಂದಣಿ ಪ್ರಾಧಿಕಾರಿಯು ಆ ನೌಕೆಗೆ, ನಿಯಮಿಸಿದ ವಿಧಾನದಲ್ಲಿ ಅದರ ಮೇಲೆ ಎದ್ದು ಕಾಣುವಂತೆ ಪ್ರದರ್ಶಿಸುವ, ನೋಂದಣಿ ಗುರುತು ಎಂದು ಈ ಅಧಿನಿಯಮದಲ್ಲಿ ಇನ್ನು ಮುಂದೆ ಉಲ್ಲೇಖಿಸಿದ ವಿಶಿಷ್ಟ ಗುರುತನ್ನು ಕೂಡ ಕೊಡತಕ್ಕದ್ದು.

**19ಐ. ನೋಂದಣಿ ಪ್ರಮಾಣಪತ್ರದ ವರ್ಗಾವಣೆಗೆ ನಿಷೇಧ.–** (1) ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯ ಸಂಬಂಧದಲ್ಲಿ ನೀಡಿದ ನೋಂದಣಿ ಪ್ರಮಾಣ ಪತ್ರವನ್ನು ಆ ನೌಕೆಯ ಕಾನೂನುಬದ್ಧ ನೌಕಾ ಸಂಚಾರಕ್ಕೆ ಮಾತ್ರ ಉಪಯೋಗಿಸತಕ್ಕದ್ದು.

(2) ಒಂದು ರಾಜ್ಯದಲ್ಲಿನ ನೋಂದಣಿ ಪ್ರಾಧಿಕಾರಿಯು ನೀಡಿದ ಒಳನಾಡು ಯಂತ್ರಚಾಲಿತ ನೌಕೆಯ ಸಂಬಂಧದಲ್ಲಿನ ನೋಂದಣಿ ಪ್ರಮಾಣ ಪತ್ರವು ಆ ರಾಜ್ಯದಲ್ಲಿ ಮಾತ್ರ ಸಿಂಧುವಾಗಿರತಕ್ಕುದು, ಆದರೆ ಯಾವುದೇ ಅಂಥ ನೌಕೆಯು ಯಾವುದೇ ಇತರ ರಾಜ್ಯದ ಒಳನಾಡು ಜಲಮಾರ್ಗಗಳಲ್ಲಿ ಸಂಚರಿಸುವಲ್ಲಿ ಈ ಪ್ರಕರಣದಲ್ಲಿರುವುದು ಯಾವುದೂ, ನೌಕೆಯ ಒಡೆಯನು ಅಥವಾ ನಾಯಕನು ನೌಕೆಯು ಹಾಗೆ ನೋಂದಾಯಿತವಾಗಿರದ ರಾಜ್ಯ ಅಥವಾ ರಾಜ್ಯಗಳ ಸಂಬಂಧದಲ್ಲಿ ಹೊಸ ನೋಂದಣಿ ಪ್ರಮಾಣ ಪತ್ರವನ್ನು ಪಡೆಯುವಂತೆ ಅವನನ್ನು ಅಗತ್ಯಪಡಿಸುವುದೆಂದು ಭಾವಿಸತಕ್ಕದ್ದಲ್ಲ.

(3) ಒಂದು ರಾಜ್ಯದಲ್ಲಿ ನೋಂದಾಯಿಸಲಾದ ಒಳನಾಡು ಯಂತ್ರಚಾಲಿತ ನೌಕೆಯನ್ನು ಮತ್ತೊಂದು ರಾಜ್ಯದಲ್ಲಿ ಹನ್ನೆರಡು ತಿಂಗಳಿಗೆ ಮೀರುವ ಅವಧಿಯವರೆಗೆ ಇಟ್ಟಿರುವಲ್ಲಿ ಆ ನೌಕೆಯ ಒಡೆಯ ಅಥವಾ ನಾಯಕನು, ಯಾವ ನೋಂದಣಿ ಪ್ರಾಧಿಕಾರಿಯ ಅಧಿಕಾರ ವ್ಯಾಪ್ತಿಯೊಳಗೆ ಆ ನೌಕೆಯು ಇರುವುದೋ ಆ ನೋಂದಣಿ ಪ್ರಾಧಿಕಾರಿಗೆ ನೌಕೆಯನ್ನು ನೋಂದಣಿ ಮಾಡಿದ ಸ್ಥಳದ ನೋಂದಣಿ ಪ್ರಾಧಿಕಾರದಿಂದ ನೋಂದಣಿಯ ವರ್ಗಾವಣೆಯನ್ನು ಕೋರಿ 19ಕೆ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

**19ಜೆ. ಬದಲಾವಣೆಗಳ ನೋಂದಣಿ.–** ಒಳನಾಡು ಯಂತ್ರಚಾಲಿತ ನೌಕೆಯ ನೋಂದಣಿ ಪ್ರಮಾಣಪತ್ರದಲ್ಲಿ ನಮೂದಾದ ವಿವರಗಳೊಂದಿಗೆ ಅಥವಾ ವರ್ಣನೆಯೊಂದಿಗೆ ಸಂವಾದಿಯಾಗದಷ್ಟು ಮಟ್ಟಿಗೆ ಅದನ್ನು ಬದಲಾಯಿಸಿರುವಾಗ ನೌಕೆಯ ಒಡೆಯನು ನೌಕೆಯನ್ನು ನೋಂದಾಯಿಸಲಾಗಿರುವ ಸ್ಥಳದ ನೋಂದಣಿ ಪ್ರಾಧಿಕಾರಿಗೆ ನಿಯಮಿಸಬಹುದಾದಂಥ ಅವಧಿಯೊಳಗೆ ಅಂಥ ಬದಲಾವಣೆಯನ್ನು ಕುರಿತು ವರದಿ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗಿನ ವರದಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕುದು ಮತ್ತು ಬದಲಾವಣೆಗೆ ಸಂಬಂಧಿಸಿ ಅಂಥ ವಿವರಗಳು ಆ ವರದಿಯಲ್ಲಿರತಕ್ಕದ್ದು ಮತ್ತು ವರದಿಯ ಸಮಯದಲ್ಲಿ ನೌಕೆಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ನೋಂದಣಿ ಪ್ರಮಾಣ ಪತ್ರವನ್ನು ಅದಕ್ಕೆ ಲಗತ್ತಿಸಿರತಕ್ಕದ್ದು.

(3) ನೋಂದಣಿ ಪ್ರಾಧಿಕಾರಿಯು (1)ನೇ ಉಪಪ್ರಕರಣದ ಮೇರೆಗಿನ ವರದಿಯನ್ನು ಸ್ವೀಕರಿಸಿದ ಮೇಲೆ ಮತ್ತು ನಿಯಮಿಸಿದ ಫೀಜು ಸಂದಾಯವಾದ ತರುವಾಯ ಬದಲಾವಣೆಯನ್ನು ನೋಂದಾಯಿಸುವಂತೆ ಮಾಡತಕ್ಕುದು ಅಥವಾ ನೌಕೆಯನ್ನು ಹೊಸದಾಗಿ ನೋಂದಾಯಿಸುವಂತೆ ನಿರ್ದೇಶಿಸತಕ್ಕದ್ದು:

ಪರಂತು, ನೋಂದಣಿ ಪ್ರಾಧಿಕಾರಿಯು, ನೌಕೆಯನ್ನು ಹೊಸದಾಗಿ ನೋಂದಾಯಿಸಿಕೊಳ್ಳತಕ್ಕದ್ದೆಂದು ನಿರ್ದೇಶಿಸಿರುವಲ್ಲಿ ಬದಲಾವಣೆಗೆ ಒಳಗಾಗಿರುವ ನೌಕೆಯನ್ನು ವಿವರಿಸುವ ತಾತ್ಕಾಲಿಕ ಪ್ರಮಾಣ ಪತ್ರವನ್ನು ನೀಡತಕ್ಕುದು ಅಥವಾ ಅಸ್ತಿತ್ವದಲ್ಲಿರುವ ಪ್ರಮಾಣಪತ್ರದ ಮೇಲೆ ಬದಲಾವಣೆಯ ವಿವರಗಳನ್ನು ತಾತ್ಕಾಲಿಕವಾಗಿ ಹಿಂಬರೆಯತಕ್ಕದ್ದು.

(4) ಈ ಪ್ರಕರಣದ ಉಪಬಂಧಗಳ ಮೇರೆಗೆ ನೀಡಲಾದ ಯಾವುದೇ ತಾತ್ಕಾಲಿಕ ಪ್ರಮಾಣ ಪತ್ರವು ಅಥವಾ ಮಾಡಿದ ಹಿಂಬರಹವು ಅದರ ದಿನಾಂಕದಿಂದ ಒಂದು ತಿಂಗಳ ಅವಧಿಯವರೆಗೆ ಸಿಂಧುವಾಗಿರತಕ್ಕುದು, ಮತ್ತು ಆ ಅವಧಿಯೊಳಗಾಗಿ ನೌಕೆಯ ಒಡೆಯನು ಆ ನೌಕೆಯನ್ನು ಹೊಸದಾಗಿ ನೋಂದಾಯಿಸಲು ಎಲ್ಲ ಅವಶ್ಯ ಕ್ರಮಗಳನ್ನು ಕೈಗೊಳ್ಳುವಂತೆ ಮಾಡತಕ್ಕದ್ದು.

**19ಕೆ. ನೋಂದಣಿಯ ವರ್ಗಾವಣೆ.-** (1) ಒಳನಾಡು ಯಂತ್ರಚಾಲಿತ ನೌಕೆಯನ್ನು ಇಟ್ಟಿರುವಂಥ ರಾಜ್ಯದ ನೋಂದಣಿ ಪ್ರಾಧಿಕಾರಿಗೆ ಆ ನೌಕೆಯ ಒಡೆಯನು ಅಥವಾ ನಾಯಕನು ಅರ್ಜಿಯನ್ನು ಸಲ್ಲಿಸಿದ ಮೇಲೆ ಆ ನೌಕೆಯ ನೋಂದಣಿಯನ್ನು ಆ ರಾಜ್ಯದ ಒಂದು ಸ್ಥಳದಿಂದ ಇನ್ನೊಂದು ರಾಜ್ಯದ ಇನ್ನೊಂದು ಸ್ಥಳಕ್ಕೆ ವರ್ಗಾಯಿಸಬಹುದು.

(2) ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ನೋಂದಣಿ ಪ್ರಾಧಿಕಾರಿಯು, ನೌಕೆಯನ್ನು ನೋಂದಾಯಿಸಿರುವಂಥ ಸ್ಥಳದ ನೋಂದಣಿ ಪ್ರಾಧಿಕಾರಿಗೆ ಆ ಸಂಬಂಧಿಸಿದ ನೋಟೀಸನ್ನು ರವಾನಿಸತಕ್ಕದ್ದು.

(3) ನೌಕೆಯ ಸಂಬಂಧದಲ್ಲಿನ ನೋಂದಣಿ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ನೋಂದಣಿಯ ಉದ್ದೇಶಿತ ಸ್ಥಳದ ನೋಂದಣಿ ಪ್ರಾಧಿಕಾರಿಗೆ ತಲುಪಿಸತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯನ್ನು ಮತ್ತು ನಿಯಮಿಸಿದ ಫೀಜು ಯಾವುದಾದರೂ ಇದ್ದರೆ ಅದನ್ನು ಸ್ವೀಕರಿಸಿದ ಮೇಲೆ ನೋಂದಣಿಯ ಉದ್ದೇಶಿತ ಸ್ಥಳದ ನೋಂದಣಿ ಪ್ರಾಧಿಕಾರಿಯು ಆ ನೌಕೆಗೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ತನ್ನ ರಿಜಿಸ್ಟರಿನಲ್ಲಿ ದಾಖಲು ಮಾಡತಕ್ಕದ್ದು ಮತ್ತು ಆ ನೌಕೆಯ ಸಂಬಂಧದಲ್ಲಿ ಹೊಸ ನೋಂದಣಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು ಮತ್ತು ಆ ತರುವಾಯ ಅಂಥ ನೌಕೆಯನ್ನು ನೋಂದಣಿಯ ಹೊಸ ಸ್ಥಳದಲ್ಲಿ ನೋಂದಾಯಿಸಲಾಗಿದೆಯೆಂದು ಪರಿಗಣಿಸತಕ್ಕದ್ದು.

(5) ಒಂದು ರಾಜ್ಯ ಸರ್ಕಾರವು ಆ ರಾಜ್ಯದಲ್ಲಿ ನೋಂದಾಯಿಸದಿರುವ ಮತ್ತು ತತ್ಕಾಲದಲ್ಲಿ ಆ ರಾಜ್ಯದ ಒಳಗೆ ತರಲಾಗಿರುವ ಅಥವಾ ಇರುವ ಒಳನಾಡು ಯಂತ್ರಚಾಲಿತ ನೌಕೆಯ ಒಡೆಯನನ್ನು ಅಥವಾ ನಾಯಕನನ್ನು ಆ ಒಳನಾಡು ಯಂತ್ರಚಾಲಿತ ನೌಕೆಗೆ ಮತ್ತು ಅದರ ನೋಂದಣಿಗೆ ಸಂಬಂಧಪಟ್ಟಂತೆ ನಿಯಮಿಸಬಹುದಾದಂಥ ಮಾಹಿತಿಯನ್ನು ರಾಜ್ಯದಲ್ಲಿನ ನಿಯಮಿಸಲಾದ ಪ್ರಾಧಿಕಾರಿಗೆ ಒದಗಿಸುವಂತೆ ಅಗತ್ಯಪಡಿಸುವಂಥ ನಿಯಮಗಳನ್ನು 19ಆರ್ ಪ್ರಕರಣದ ಮೇರೆಗೆ ರಚಿಸಬಹುದು.

**19ಎಲ್. ವಾಸಸ್ಥಳ ಅಥವಾ ವ್ಯವಹಾರ ಸ್ಥಳದ ಬದಲಾವಣೆ.-** (1) ಒಳನಾಡು ಯಂತ್ರಚಾಲಿತ ನೌಕೆಯ ಒಡೆಯನು ಆ ನೌಕೆಯ ನೋಂದಣಿ ಪ್ರಮಾಣ ಪತ್ರದಲ್ಲಿ ದಾಖಲಿಸಲಾಗಿರುವ ವಿಳಾಸದಲ್ಲಿ ವಾಸಿಸುವುದು ಅಥವಾ ವ್ಯವಹಾರ ನಡೆಸುವುದು ನಿಂತುಹೋಗಿದ್ದರೆ, ಅವನು ವಿಳಾಸದ ಬದಲಾವಣೆಯ ದಿನದಿಂದ ಮೂವತ್ತು ದಿವಸಗಳೊಳಗಾಗಿ, ತನ್ನ ಹೊಸ ವಿಳಾಸವನ್ನು ಆ ನೋಂದಣಿ ಪ್ರಮಾಣ ಪತ್ರವನ್ನು ನೀಡಿದಂಥ ನೋಂದಣಿ ಪ್ರಾಧಿಕಾರಿಗೆ ಅಥವಾ ಹೊಸ ವಿಳಾಸವು ಇನ್ನೊಂದು ನೋಂದಣಿ ಪ್ರಾಧಿಕಾರಿಯ ಅಧಿಕಾರ ವ್ಯಾಪ್ತಿಯೊಳಗೆ ಇದ್ದರೆ ಆ ನೋಂದಣಿ ಪ್ರಾಧಿಕಾರಿಗೆ ತಿಳಿಸತಕ್ಕದ್ದು ಮತ್ತು ಅದೇ ಸಮಯದಲ್ಲಿ ನೋಂದಣಿ ಪ್ರಮಾಣಪತ್ರದ ಮೇಲೆ ಹೊಸ ವಿಳಾಸವನ್ನು ದಾಖಲಿಸುವ ದೃಷ್ಟಿಯಿಂದ ಅದನ್ನು ಆ ನೋಂದಣಿ ಪ್ರಾಧಿಕಾರಿಗೆ ಕಳುಹಿಸಿಕೊಡತಕ್ಕದ್ದು.

(2) ಮೂಲ ನೋಂದಣಿ ಪ್ರಾಧಿಕಾರಿಯಲ್ಲದ ಇತರ ಯಾರೇ ನೋಂದಣಿ ಪ್ರಾಧಿಕಾರಿಯು ಯಾವುದೇ ಅಂಥ ದಾಖಲಾತಿಯನ್ನು ಮಾಡುವಲ್ಲಿ, ಆ ಪ್ರಾಧಿಕಾರಿಯು ಆ ಹೊಸ ವಿಳಾಸವನ್ನು ಮೂಲ ನೋಂದಣಿ ಪ್ರಾಧಿಕಾರಿಗೆ ತಿಳಿಸತಕ್ಕದ್ದು.

**19ಎಂ. ನೋಂದಾಯಿತ ನೌಕೆಯ ಒಡೆತನದ ವರ್ಗಾವಣೆಯ ನಿಷೇಧ.–** (1) ಒಂದು ರಾಜ್ಯದಲ್ಲಿ ಈ ಅಧಿನಿಯಮದ ಮೇರೆಗೆ ನೋಂದಾಯಿಸಿದ ಒಂದು ಒಳನಾಡು ಯಂತ್ರಚಾಲಿತ ನೌಕೆಯನ್ನು ಭಾರತದ ಇನ್ನೊಂದು ರಾಜ್ಯದಲ್ಲಿ ಅಥವಾ ಭಾರತದ ಹೊರಗಡೆಯ ಯಾವುದೇ ದೇಶದಲ್ಲಿ ನಿವಾಸಿಯಾಗಿರುವ ಯಾರೇ ವ್ಯಕ್ತಿಗೆ ಆ ನೌಕೆಯನ್ನು ನೋಂದಾಯಿಸಿರುವಂಥ ರಾಜ್ಯ ಸರ್ಕಾರದ ಪೂರ್ವಾನುಮೋದನೆ ಇಲ್ಲದೆ ವರ್ಗಾವಣೆ ಮಾಡತಕ್ಕದ್ದಲ್ಲ:

ಪರಂತು, ಒಂದು ಒಳನಾಡು ಯಂತ್ರಚಾಲಿತ ನೌಕೆಯನ್ನು ವ್ಯಾಪಾರಿ ಹಡಗು ಅಧಿನಿಯಮ, 1958 (1958ರ 44)ರ ಮೇರೆಗೆ ನೋಂದಾಯಿಸಲಾಗಿರುವಲ್ಲಿ ಅಥವಾ ನೋಂದಾಯಿಸಲಾಗಿದೆ ಎಂದು ಭಾವಿಸಿರುವಲ್ಲಿ, "ನೌಕೆಯನ್ನು ನೋಂದಾಯಿಸಿರುವಂಥ ರಾಜ್ಯ ಸರ್ಕಾರ" ಎಂಬ ಪದಗಳ ಬದಲಾಗಿ "ಕೇಂದ್ರ ಸರ್ಕಾರ" ಎಂಬ ಪದಗಳನ್ನು ಪ್ರತಿಯೋಜಿಸಲಾಗಿದ್ದರೆ ಹೇಗೋ ಹಾಗೆ ಈ ಉಪಪ್ರಕರಣವು ಪರಿಣಾಮವನ್ನು ಹೊಂದಿರತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಈ ಅಧಿನಿಯಮದ ಮೇರೆಗೆ ನೋಂದಾಯಿಸಿದ ಒಳನಾಡು ಯಂತ್ರಚಾಲಿತ ನೌಕೆಯ ಒಡೆಯನು ಮತ್ತು ಅದರ ವರ್ಗಾವಣೆ ಪಡೆದವನು ಜಂಟಿಯಾಗಿ ಸದರಿ ನೌಕೆಯ ಒಡೆತನವು ಆ ವರ್ಗಾವಣೆ ಪಡೆದವನಿಗೆ ವರ್ಗಾವಣೆಯಾದ ದಿನದಿಂದ ಮೂವತ್ತು ದಿವಸಗಳೊಳಗೆ, ಯಾವ ನೋಂದಣಿ ಪ್ರಾಧಿಕಾರಿಯ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ವರ್ಗಾವಣೆ ಪಡೆದವನು ವಾಸವಾಗಿರುವನೋ ಅಥವಾ ತನ್ನ ವ್ಯವಹಾರವನ್ನು ನಡೆಸುತ್ತಿರುವನೋ ಆ ಪ್ರಾಧಿಕಾರಿಗೆ ವರ್ಗಾವಣೆಯ ಬಗ್ಗೆ ವರದಿ ಮಾಡತಕ್ಕುದು ಮತ್ತು ಒಡೆತನದ ವರ್ಗಾವಣೆಯ ವಿವರಗಳನ್ನು ನೋಂದಣಿ ಪ್ರಮಾಣ ಪತ್ರದಲ್ಲಿ ದಾಖಲಿಸುವ ದೃಷ್ಟಿಯಿಂದ ನಿಯಮಿಸಿದ ಫೀಜಿನ ಜೊತೆಯಲ್ಲಿ ಆ ಪ್ರಮಾಣಪತ್ರವನ್ನು ಸಹ ಆ ನೋಂದಣಿ ಪ್ರಾಧಿಕಾರಿಗೆ ಕಳುಹಿಸಿಕೊಡತಕ್ಕದ್ದು.

**19ಎನ್. ನೋಂದಣಿ ಪ್ರಮಾಣಪತ್ರಗಳ ಅಮಾನತು.–** (1) ನೋಂದಣಿ ಪ್ರಾಧಿಕಾರಿಯು ಒಳನಾಡು ಯಂತ್ರಚಾಲಿತ ನೌಕೆಗೆ ನೋಂದಣಿ ಪ್ರಮಾಣಪತ್ರವನ್ನು ನೀಡಿದ ತರುವಾಯ ಆ ನೌಕೆಯು ಒಳನಾಡು ಜಲಮಾರ್ಗಗಳಲ್ಲಿ ಸಂಚರಿಸಲು ಯೋಗ್ಯವಾಗಿಲ್ಲವೆಂದು ಆ ಪ್ರಾಧಿಕಾರಿಗೆ ನಂಬಲು ಕಾರಣವಿರುವಲ್ಲಿ, ಅವನು ಯೋಗ್ಯವೆಂದು ಭಾವಿಸುವಂಥ ಅವಧಿಯವರೆಗೆ ಅಂಥ ಷರತ್ತುಗಳಿಗೊಳಪಟ್ಟು ಆ ನೌಕೆಯ ಪ್ರಮಾಣಪತ್ರವನ್ನು ಅಮಾನತುಗೊಳಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಒಂದು ಒಳನಾಡು ಯಂತ್ರಚಾಲಿತ ನೌಕೆಯ ನೋಂದಣಿಯನ್ನು ಒಂದು ತಿಂಗಳಿಗಿಂತ ಕಡಿಮೆ ಇಲ್ಲದ ಅವಧಿಯವರೆಗೆ ಅಮಾನತ್ತುಗೊಳಿಸಿರುವಲ್ಲಿ, ಆ ಅಮಾನತ್ತನ್ನು ಆದೇಶಿಸುವ ನೋಂದಣಿ ಪ್ರಾಧಿಕಾರವು ಮೂಲ ನೋಂದಣಿ ಪ್ರಾಧಿಕಾರವಾಗಿಲ್ಲದಿದ್ದರೆ, ಅದು ಅಂಥ ಅಮಾನತ್ತಿನ ಸಂಗತಿಯನ್ನು ಆ ಇನ್ನೊಂದು ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(3) ಪ್ರಮಾಣ ಪತ್ರವನ್ನು ಅಮಾನತುಗೊಳಿಸುವ ನೋಂದಣಿ ಪ್ರಾಧಿಕಾರಿಯು, ನೌಕೆಯ ಒಡೆಯನನ್ನು ಅಥವಾ ನಾಯಕನನ್ನು, ಹಾಗೆ ಅಮಾನತುಗೊಳಿಸಲಾದ ಪ್ರಮಾಣ ಪತ್ರವನ್ನು ತನಗೆ ಅಥವಾ ತಾನು ಮೂಲ ನೋಂದಣಿ ಪ್ರಾಧಿಕಾರಿಯಲ್ಲದಿದ್ದರೆ, ಆ ಇತರ ಪ್ರಾಧಿಕಾರಿಗೆ ಒಪ್ಪಿಸುವಂತೆ ಅಗತ್ಯಪಡಿಸಬಹುದು.

(4) ಪ್ರಮಾಣಪತ್ರದ ಅಮಾನತಿನ ಆದೇಶವನ್ನು ರದ್ದುಗೊಳಿಸಿದಾಗ ಅಥವಾ ಅದು ಜಾರಿಯಲ್ಲಿರುವುದು ನಿಂತುಹೋದಾಗ ಈ ಪ್ರಕರಣದ ಮೇರೆಗೆ ಒಪ್ಪಿಸಿದ ನೋಂದಣಿ ಪ್ರಮಾಣ ಪತ್ರವನ್ನು ಒಡೆಯನಿಗೆ ಹಿಂದಿರುಗಿಸತಕ್ಕದ್ದು.

**19ಓ. ನೋಂದಣಿಯ ರದ್ದಿಯಾತಿ.–** (1) ಒಂದು ಒಳನಾಡು ಯಂತ್ರಚಾಲಿತ ನೌಕೆಯನ್ನು ನಾಶಗೊಳಿಸಲಾಗಿದ್ದರೆ ಅಥವಾ ಸೇವೆಗೆ ಖಾಯಂ ಆಗಿ ಅನುಪಯುಕ್ತವನ್ನಾಗಿ ಮಾಡಲಾಗಿದ್ದರೆ, ನೌಕೆಯ ಒಡೆಯನು ಸಾಧ್ಯವಾದಷ್ಟು ಕನಿಷ್ಠ ವಿಳಂಬದಿಂದ ಆ ಸಂಗತಿಯನ್ನು ನೌಕೆಯನ್ನು ನೋಂದಾಯಿಸಿರುವ ಸ್ಥಳದ ನೋಂದಣಿ ಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು, ಮತ್ತು ಅವನು ಆ ಪ್ರಾಧಿಕಾರಕ್ಕೆ ವರದಿಯೊಂದಿಗೆ ನೌಕೆಯ ನೋಂದಣಿಯ ಪ್ರಮಾಣ ಪತ್ರವನ್ನು ಸಹ ಕಳುಹಿಸತಕ್ಕದ್ದು ಮತ್ತು ತದನಂತರ, ನೋಂದಣಿ ಪ್ರಾಧಿಕಾರಿಯು ನೋಂದಣಿ ಪ್ರಮಾಣ ಪತ್ರವನ್ನು ರದ್ದುಗೊಳಿಸತಕ್ಕದ್ದು.

(2) ಯಾರೇ ನೋಂದಣಿ ಪ್ರಾಧಿಕಾರಿಯು ತನ್ನ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗಿನ ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯನ್ನು ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೂಲಕ ನೇಮಕ ಮಾಡಬಹುದಾದಂಥ ಪ್ರಾಧಿಕಾರಿಯು ಪರಿಶೀಲಿಸಬಹುದೆಂದು ಯಾವುದೇ ಕಾಲದಲ್ಲಿ ಅಗತ್ಯಪಡಿಸಬಹುದು ಮತ್ತು ಅಂಥ ಪರಿಶೀಲನೆಯ ಪರಿಣಾಮವಾಗಿ ಆ ನೌಕೆಯು ಯಾವುದೇ ಒಳನಾಡು ಜಲಮಾರ್ಗದಲ್ಲಿ ಸಂಚಾರಕ್ಕೆ ಯೋಗ್ಯವಲ್ಲದ ಪರಿಸ್ಥಿತಿಯಲ್ಲಿದೆ ಎಂದು ನೋಂದಣಿ ಪ್ರಾಧಿಕಾರಿಗೆ ಮನದಟ್ಟಾದರೆ, ಆ ನೋಂದಣಿ ಪ್ರಾಧಿಕಾರಿಯು, ನೌಕೆಯ ಒಡೆಯನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ನೌಕೆಯ ನೋಂದಣಿಯನ್ನು ರದ್ದುಗೊಳಿಸಬಹುದು ಮತ್ತು ಒಡೆಯನು ಆ ನೌಕೆಗೆ

ಸಂಬಂಧಪಟ್ಟ ನೋಂದಣಿ ಪ್ರಮಾಣ ಪತ್ರವನ್ನು ಈಗಾಗಲೇ ಆ ನೋಂದಣಿ ಪ್ರಾಧಿಕಾರಕ್ಕೆ ಒಪ್ಪಿಸಿರದಿದ್ದರೆ ಅದನ್ನು ಆ ಕೂಡಲೇ ಒಪ್ಪಿಸುವಂತೆ ಅವನನ್ನು ಅಗತ್ಯಪಡಿಸಬಹುದು.

**19ಪಿ. ಅಪೀಲುಗಳು.**- (1) ಯಾರೇ ವ್ಯಕ್ತಿಯು,-

(ಎ) 19ಎಫ್ ಪ್ರಕರಣದ ಮೇರೆಗೆ ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯನ್ನು ನೋಂದಾಯಿಸಲು ನಿರಾಕರಿಸುವ ಆದೇಶ; ಅಥವಾ

(ಬಿ) 19ಎನ್ ಪ್ರಕರಣದ ಮೇರೆಗೆ ನೋಂದಣಿ ಪ್ರಮಾಣ ಪತ್ರವನ್ನು ಅಮಾನತುಗೊಳಿಸಿರುವ ಆದೇಶ; ಅಥವಾ

(ಸಿ) 19ಓ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೋಂದಣಿ ಪ್ರಮಾಣ ಪತ್ರವನ್ನು ರದ್ದುಗೊಳಿಸಿರುವ ಆದೇಶ

- ಇವುಗಳಲ್ಲಿ ಯಾವುದೇ ಒಂದು ಆದೇಶದಿಂದ ಬಾಧಿತನಾದರೆ ಅವನು ಅಂಥ ಆದೇಶದ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿವಸದೊಳಗೆ ಅದರ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲನ್ನು ಮಾಡಿಕೊಳ್ಳಬಹುದು.

(2) ರಾಜ್ಯ ಸರ್ಕಾರವು, ಅಂಥ ಪ್ರತಿಯೊಂದು ಅಪೀಲಿನ ನೋಟೀಸನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಸಂಬಂಧಿಸಿದ ನೋಂದಣಿ ಪ್ರಾಧಿಕಾರಿಗೆ ನೀಡುವಂತೆ ಮಾಡತಕ್ಕದ್ದು ಮತ್ತು ಆ ಪ್ರಾಧಿಕಾರಿಗೆ ಹಾಗೂ ಅಪೀಲುದಾರನಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಕೊಟ್ಟ ತರುವಾಯ, ಅದರ ಮೇಲೆ ತಾನು ಯುಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸತಕ್ಕದ್ದು.

**19ಕ್ಯೂ. ಪರಸ್ಪರತೆ.**- ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ಜಾರಿಯಲ್ಲಿರುವ ನೋಂದಣಿಯ ಪ್ರಮಾಣ ಪತ್ರವನ್ನು ಹೊಂದಿರುವ ಒಳನಾಡು ಯಂತ್ರಚಾಲಿತ ನೌಕೆಗಳು ಭಾರತದ ಹೊರಗಡೆ ಯಾವುದೇ ದೇಶದ ಕಾನೂನಿನ ಅಥವಾ ಆಚರಣೆಯ ಮೂಲಕ,-

(ಎ) ಅಂಥ ನೋಂದಣಿಯ ಕಾರಣದಿಂದ ಆ ದೇಶದ ಒಳನಾಡು ಜಲಮಾರ್ಗದಲ್ಲಿ ಸಂಚರಿಸುತ್ತಿರುವಾಗ ಅಲ್ಲಿ ಯಾವುದೇ ವಿಶೇಷ ವಿನಾಯಿತಿಯನ್ನು ಪಡೆದಿವೆ ಎಂದು; ಅಥವಾ

(ಬಿ) ಆದೇಶದ ಒಳನಾಡು ಜಲಮಾರ್ಗಗಳಲ್ಲಿ ಸಂಚರಿಸಲು ಒಂದು ಷರತ್ತಾಗಿ ಹೊಸದಾಗಿ ನೋಂದಣಿ ಮಾಡಿಸುವ ಮೂಲಕ ಅಥವಾ ಫೀಜನ್ನು ಸಂದಾಯ ಮಾಡುವ ಮೂಲಕ ಅಥವಾ ಅನ್ಯಥಾ ಯಾವುದೇ ವಿಶೇಷ ಅಗತ್ಯತೆಯನ್ನು ಪಾಲಿಸಲು ಅವುಗಳನ್ನು ಅಗತ್ಯಪಡಿಸಲಾಗಿದೆ ಎಂದು

- ಮನದಟ್ಟು ಮಾಡಿಕೊಂಡಿರುವಲ್ಲಿ,-

ಆ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಪರಸ್ಪರತೆಯ ಉದ್ದೇಶಕ್ಕಾಗಿ, ಈ ಅಧಿನಿಯಮವು ವ್ಯಾಪ್ತವಾಗುವಂತಹ ರಾಜ್ಯಕ್ಷೇತ್ರಗಳ ಒಳನಾಡು ಜಲಮಾರ್ಗಗಳಲ್ಲಿ ಆ ದೇಶದಲ್ಲಿ ನೋಂದಾಯಿಸಿದ ಒಳನಾಡು ಯಂತ್ರಚಾಲಿತ ನೌಕೆಗಳು ಸಂಚರಿಸುವಾಗ ಸದರಿ ವಿನಾಯಿತಿಗೆ ಅಥವಾ ಅಗತ್ಯತೆಗೆ ಸಮವಾದಂಥ ಅಥವಾ ಸದರಿ ವಿನಾಯಿತಿಗೆ ಅಥವಾ ಅಗತ್ಯತೆಗೆ ಸಾಧ್ಯವಾದಷ್ಟು ಸಮವಾದಂಥ ವಿನಾಯಿತಿಯನ್ನು ಅವುಗಳಿಗೆ ನೀಡಬಹುದೆಂದು ಅಥವಾ ಅಗತ್ಯತೆಯನ್ನು ಅವುಗಳ ಮೇಲೆ ವಿಧಿಸಬಹುದೆಂದು ನಿರ್ದೇಶಿಸಬಹುದು.

**19ಕ್ಯೂಎ. ಯಂತ್ರಚಾಲಿತ ನೌಕೆಯ ಅಡಮಾನ ಅಥವಾ ಷೇರು.**- ವ್ಯಾಪಾರಿ ಹಡಗು ಅಧಿನಿಯಮ, 1958 (1958ರ 44)ರ 47, 48, 49, 50, 51, 52 ಮತ್ತು 53 - ಈ ಪ್ರಕರಣಗಳ ಉಪಬಂಧಗಳು ಹಡಗುಗಳ ಸಂಬಂಧದಲ್ಲಿ ಹೇಗೆ ಅನ್ವಯವಾಗುತ್ತವೆಯೋ ಹಾಗೆಯೇ ಈ ಮುಂದಿನ ಮಾರ್ಪಾಟುಗಳಿಗೊಳಪಟ್ಟು ಯಂತ್ರಚಾಲಿತ ನೌಕೆಯ ಅಡಮಾನದ ಸಂಬಂಧದಲ್ಲಿ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು, ಎಂದರೆ:-

(ಎ) 47, 48, 49, 50, 51, 52 ಮತ್ತು 53 ಈ ಪ್ರಕರಣಗಳಲ್ಲಿ "ಹಡಗು", "ನೋಂದಣಿಕಾರ" ಮತ್ತು "ನೋಂದಣಿ ಪುಸ್ತಕ" ಎಂಬ ಉಲ್ಲೇಖಗಳು ಬರುವಲ್ಲೆಲ್ಲ ಅನುಕ್ರಮವಾಗಿ "ಯಂತ್ರಚಾಲಿತ ನೌಕೆ", "ನೋಂದಣಿ ಪ್ರಾಧಿಕಾರಿ" ಮತ್ತು "ನೋಂದಣಿ ಪುಸ್ತಕ" ಎಂಬವುಗಳಿಗೆ ಮಾಡಲಾದ ಉಲ್ಲೇಖಗಳು ಎಂಬುದಾಗಿ ಅರ್ಥೈಸತಕ್ಕದ್ದು;

(ಬಿ) 47ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಹಡಗಿನ ನೋಂದಣಿ ಬಂದರಿನ ನೋಂದಣಿಕಾರನು ಅದನ್ನು ನೋಂದಣಿ ಪುಸ್ತಕದಲ್ಲಿ ದಾಖಲಿಸತಕ್ಕದ್ದು" ಎಂಬ ಪದಗಳಿಗೆ ಬದಲಾಗಿ

"ನೋಂದಣಿ ಪ್ರಾಧಿಕಾರಿಯು, ಅದನ್ನು ನೋಂದಣಿ ಪುಸ್ತಕದಲ್ಲಿ ದಾಖಲು ಮಾಡತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**19ಆರ್. ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧ್ಯಾಯದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ, ಅಂಥ ನಿಯಮಗಳು–

(ಎ) ನೋಂದಣಿ ಪ್ರಾಧಿಕಾರಿಗಳ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ಮತ್ತು ಅವರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳನ್ನು ನಿಯಮಿಸಬಹುದು;

(ಬಿ) ನೋಂದಣಿಗಾಗಿ ಸಲ್ಲಿಸುವ ಅರ್ಜಿಗಳ ಮತ್ತು ನೋಂದಣಿಯ ಪ್ರಮಾಣ ಪತ್ರಗಳ ನಮೂನೆಯನ್ನು ಮತ್ತು ಅವುಗಳಲ್ಲಿ ಒಳಗೊಂಡಿರಬೇಕಾದ ವಿವರಗಳನ್ನು ನಿಯಮಿಸಬಹುದು;

(ಸಿ) ಈ ಅಧ್ಯಾಯದ ಮೇರೆಗೆ ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ನೋಂದಣಿ ಪುಸ್ತಕಗಳನ್ನು ನಿರ್ವಹಿಸತಕ್ಕದ್ದೋ ಆ ನಮೂನೆಯನ್ನು ಮತ್ತು ರೀತಿಯನ್ನು ಉಪಬಂಧಿಸಬಹುದು;

(ಡಿ) ಕಳೆದುಹೋದ, ನಾಶವಾದ ಅಥವಾ ವಿರೂಪಗೊಂಡ ಪ್ರಮಾಣ ಪತ್ರಗಳ ಬದಲಾಗಿ, ನೋಂದಣಿ ಪ್ರಮಾಣ ಪತ್ರಗಳ ನಕಲುಗಳನ್ನು ನೀಡಲು ಉಪಬಂಧಿಸಬಹುದು;

(ಇ) ಕೇಂದ್ರ ಸರ್ಕಾರದ ಅನುಮೋದನೆಗೊಳಪಟ್ಟು, ಒಳನಾಡು ಯಂತ್ರಚಾಲಿತ ನೌಕೆಗಳ ನೋಂದಣಿಗೆ ವಿಧಿಸಬೇಕಾದ ಫೀಜುಗಳನ್ನು ಅಥವಾ ಈ ಅಧ್ಯಾಯದ ಮೇರೆಗೆ ನೋಂದಣಿ ಪ್ರಾಧಿಕಾರಿಯು ಕೈಗೊಳ್ಳಬೇಕಾದ ಯಾವುದೇ ಇತರ ಕ್ರಮವನ್ನು ನಿಯಮಿಸಬಹುದು ಮತ್ತು ಯಾವುದೇ ಅಂಥ ಫೀಜುಗಳ ಪೂರ್ಣ ಅಥವಾ ಯಾವುದೇ ಭಾಗದ ಸಂದಾಯದಿಂದ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗಕ್ಕೆ ವಿನಾಯಿತಿಯನ್ನು ನೀಡುವ ಬಗ್ಗೆ ಉಪಬಂಧಿಸಬಹುದು;

(ಎಫ್) ಒಂದು ಒಳನಾಡು ಯಂತ್ರಚಾಲಿತ ನೌಕೆಯ ಒಡೆಯನು, ಯಾವ ಅವಧಿಯೊಳಗೆ ಮತ್ತು ಯಾವ ರೀತಿಯಲ್ಲಿ 19ಜೆ ಪ್ರಕರಣದ ಮೇರೆಗೆ ನೌಕೆಯಲ್ಲಿ ಮಾಡಿದ ಯಾವುದೇ ಮಾರ್ಪಾಟಿನ ವರದಿಯನ್ನು ಮಾಡತಕ್ಕದ್ದೋ ಆ ಅವಧಿಯನ್ನು ಮತ್ತು ರೀತಿಯನ್ನು ನಿಯಮಿಸಬಹುದು;

(ಎಫ್ಎ)19ಕೆ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಒಳನಾಡು ಯಂತ್ರಚಾಲಿತ ನೌಕೆಗೆ ಮತ್ತು ಅದರ ನೋಂದಣಿಗೆ ಸಂಬಂಧಪಟ್ಟಂತೆ ಒಂದು ಪ್ರಾಧಿಕಾರಿಯನ್ನು ನಿಯಮಿಸಬಹುದು ಮತ್ತು ಅಂಥ ಮಾಹಿತಿಯನ್ನು ಪ್ರಾಧಿಕಾರಿಗೆ ಒದಗಿಸುವುದಕ್ಕಾಗಿ ಉಪಬಂಧ ಕಲ್ಪಿಸಬಹುದು;

(ಜಿ) ಈ ಅಧ್ಯಾಯದ ಮೇರೆಗೆ ಯಾವ ರೀತಿಯಲ್ಲಿ ರಾಜ್ಯ ಸರ್ಕಾರಕ್ಕೆ ಅಪೀಲುಗಳನ್ನು ಸಲ್ಲಿಸಬಹುದೋ ಆ ರೀತಿಯನ್ನು ಮತ್ತು ಅಂಥ ಯಾವುದೇ ಅಪೀಲಿಗೆ ಸಂಬಂಧಿಸಿ ಸಂದಾಯ ಮಾಡಬೇಕಾದ ಫೀಜುಗಳನ್ನು ನಿಯಮಿಸಬಹುದು;

(ಜಿಎ) ಯಂತ್ರಚಾಲಿತ ನೌಕೆಯ ಅಡಮಾನವನ್ನು ಮಾಡುವ ಲಿಖಿತ ಪತ್ರದ ಅಥವಾ ಅದರಲ್ಲಿನ ಒಂದು ಷೇರಿನ ಅಥವಾ ಅಂಥ ಯಾವುದೇ ಅಡಮಾನದ ವರ್ಗಾವಣೆಯ ನಮೂನೆಯ ಬಗ್ಗೆ ಉಪಬಂಧಿಸಬಹುದು;

(ಎಚ್) ಈ ಅಧ್ಯಾಯದ ಮೇರೆಗೆ, ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯದ ಬಗ್ಗೆ ಉಪಬಂಧಿಸಬಹುದು.

**19ಎಸ್. ವ್ಯಾಪಾರಿ ಹಡಗು ಅಧಿನಿಯಮದ ಮೇರೆಗೆ ನೀಡಲಾದ ಕೆಲವು ಪ್ರಮಾಣ ಪತ್ರಗಳು ಈ ಅಧಿನಿಯಮದ ಮೇರೆಗೆ ಸಿಂಧುವಾಗಿರುವುದು.–** ವ್ಯಾಪಾರಿ ಹಡಗು ಅಧಿನಿಯಮ, 1958 (1958ರ 44)ರ ಮೇರೆಗೆ ಯಂತ್ರಚಾಲಿತ ನೌಕೆಯ ಸಂಬಂಧದಲ್ಲಿ ನೀಡಲಾದ ಪ್ರತಿಯೊಂದು ನೋಂದಣಿ ಪ್ರಮಾಣ ಪತ್ರವು ಮತ್ತು ಪ್ರತಿಯೊಂದು ಮೋಜಣಿ ಪ್ರಮಾಣ ಪತ್ರವು, ಈ ಅಧಿನಿಯಮದ ಮೇರೆಗೆ ನೀಡಲಾದ ನೋಂದಣಿ ಪ್ರಮಾಣ ಪತ್ರವಾಗಿದ್ದರೆ ಅಥವಾ ಸಂದರ್ಭಾನುಸಾರ ಮೋಜಣಿ ಪ್ರಮಾಣ ಪತ್ರವಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗತಕ್ಕದ್ದು ಮತ್ತು ಈ ಅಧಿನಿಯಮದ ಸುಸಂಬದ್ಧ ಉಪಬಂಧಗಳು ಈ ಅಧಿನಿಯಮದ ಮೇರೆಗೆ ನೋಂದಾಯಿಸಲಾದ ಒಂದು ಒಳನಾಡು ಯಂತ್ರಚಾಲಿತ ನೌಕೆಗೆ ಅನ್ವಯಿಸುವಂತೆಯೇ ಅಂಥ ನೌಕೆಯ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.

## ಅಧ್ಯಾಯ - III

## ಒಳನಾಡು ಯಂತ್ರಚಾಲಿತ ನೌಕೆಯ ನಾಯಕರು (ಸೆರಾಂಗರು ಸೇರಿದಂತೆ) ಮತ್ತು ಇಂಜಿನಿಯರುಗಳು (ಇಂಜಿನ್ ಚಾಲಕರು ಸೇರಿದಂತೆ)

**20. ಪರೀಕ್ಷಕರ ನೇಮಕಾತಿ.-** ರಾಜ್ಯ ಸರ್ಕಾರವು, ಒಳನಾಡು ಯಂತ್ರಚಾಲಿತ ನೌಕೆಗಳಲ್ಲಿ ಸಂದರ್ಭಾನುಸಾರವಾಗಿ ಹಡಗಿನ ನಾಯಕರು ಅಥವಾ ಸೆರಾಂಗ್‌ಗಳಂತೆ ಅಥವಾ ಇಂಜಿನಿಯರುಗಳು ಅಥವಾ ಇಂಜಿನ್ ಚಾಲಕರಂತೆ ಕಾರ್ಯನಿರ್ವಹಿಸಲು ಅವರು ಸಕ್ಷಮರಾಗಿರುವರೆಂದು ಪ್ರಮಾಣ ಪತ್ರಗಳನ್ನು (ಇದರಲ್ಲಿ ಇನ್ನು ಮುಂದೆ ಸಕ್ಷಮತಾ ಪ್ರಮಾಣಪತ್ರಗಳೆಂದು ಕರೆಯಲಾಗಿದೆ) ಪಡೆಯಲು ಅಪೇಕ್ಷಿಸುವ ವ್ಯಕ್ತಿಗಳ ವಿದ್ಯಾರ್ಹತೆಗಳನ್ನು ಪರೀಕ್ಷಿಸುವ ಉದ್ದೇಶಕ್ಕಾಗಿ ಪರೀಕ್ಷಕರನ್ನು ನೇಮಕ ಮಾಡಬಹುದು.

**21. ಹಡಗಿನ ನಾಯಕರು, ಸೆರಾಂಗ್‌ಗಳು, ಇಂಜಿನಿಯರ್‌ಗಳು ಅಥವಾ ಇಂಜಿನ್ ಚಾಲಕರಿಗೆ ಸಕ್ಷಮತಾ ಪ್ರಮಾಣ ಪತ್ರಗಳ ನೀಡಿಕೆ.-** (1) ರಾಜ್ಯ ಸರ್ಕಾರ ಅಥವಾ ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನೇಮಕ ಮಾಡಬಹುದಾದಂಥ ಅಧಿಕಾರಿಯು, ನಿಯಮಿಸಿದ ವಿದ್ಯಾರ್ಹತೆಯನ್ನು ಹೊಂದಿರುವನೆಂದು ಪರೀಕ್ಷಕರು ವರದಿ ಮಾಡಿರುವ ಪ್ರತಿಯೊಬ್ಬ ವ್ಯಕ್ತಿಗೆ ಅವನು ಒಂದು ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಸಂದರ್ಭಾನುಸಾರ, ಒಂದನೇ ದರ್ಜೆಯ ನಾಯಕನಾಗಿ, ಎರಡನೇ ದರ್ಜೆ ನಾಯಕನಾಗಿ ಅಥವಾ ಸೆರಾಂಗ್‌ನಾಗಿ ಅಥವಾ ಒಬ್ಬ ಇಂಜಿನಿಯರ್‌ನಾಗಿ, ಒಂದನೇ ದರ್ಜೆ ಇಂಜಿನ್ ಚಾಲಕನಾಗಿ ಅಥವಾ ಎರಡನೇ ದರ್ಜೆ ಇಂಜಿನ್ ಚಾಲಕನಾಗಿ ಕಾರ್ಯ ನಿರ್ವಹಿಸಲು ಸಕ್ಷಮನಾಗಿರುವನೆಂದು ಸಕ್ಷಮತಾ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

ಅದೇನೇ ಇದ್ದರೂ, ಈ ಅಧಿನಿಯಮದ ಮೇರೆಗೆ ಸಕ್ಷಮತಾ ಪ್ರಮಾಣ ಪತ್ರವನ್ನು ನೀಡುವುದಕ್ಕೆ ಮುಂಚೆ, ಅಂಥ ಪ್ರಮಾಣ ಪತ್ರವನ್ನು ನೀಡಲು ಅಧಿಕಾರ ಹೊಂದಿರುವಂಥ ಪ್ರಾಧಿಕಾರಿಯು, ಅಂಥ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ಯಾರೇ ಅರ್ಜಿದಾರನ ಸಂಬಂಧದಲ್ಲಿ ಪರೀಕ್ಷಕರ ವರದಿಯು ದೋಷಪೂರಿತವಾಗಿದೆ ಎಂದು ಪರಿಗಣಿಸಿದರೆ ಅಥವಾ ಅಂಥ ವರದಿಯನ್ನು ಅನುಚಿತವಾಗಿ ಮಾಡಲಾಗಿದೆ ಎಂದು ನಂಬಲು ಅವನಿಗೆ ಕಾರಣವಿದ್ದರೆ, ಅರ್ಜಿದಾರನ ಸಂಬಂಧದಲ್ಲಿ ಇನ್ನಷ್ಟು ಪರೀಕ್ಷೆಯಾಗಬೇಕೆಂದು ಅಥವಾ ಮರುಪರೀಕ್ಷೆಯಾಗಬೇಕೆಂದು ಅಗತ್ಯಪಡಿಸಬಹುದು.

(2) ಈ ಪ್ರಕರಣದ ಮೇರೆಗೆ ನೀಡಲಾಗುವ ಪ್ರತಿಯೊಂದು ಪ್ರಮಾಣ ಪತ್ರವು ನಿಯಮಿಸಿದ ನಮೂನೆಯಲ್ಲಿರತಕ್ಕದ್ದು.

**22. ಹಡಗಿನ ನಾಯಕರ, ಸೆರಾಂಗ್‌ಗಳ, ಇಂಜಿನಿಯರ್‌ಗಳ ಮತ್ತು ಇಂಜಿನ್ ಚಾಲಕರಿಗೆ ಸೇವಾ ಪ್ರಮಾಣ ಪತ್ರಗಳ ನೀಡಿಕೆ.-** (1) ರಾಜ್ಯ ಸರ್ಕಾರವು, ಅದು ಸೂಕ್ತವೆಂದು ಭಾವಿಸಿದರೆ, ಒಂದು ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ನವೆಂಬರ್ 1956ರ ಮೊದಲ ದಿವಸಕ್ಕೆ ಮುಂಚೆ ಮೂರು ವರ್ಷಗಳ ಅವಧಿಯವರೆಗೆ ನಾಯಕನಾಗಿ ಅಥವಾ ಇಂಜಿನಿಯರ್‌ನಾಗಿ ಸೇವೆ ಸಲ್ಲಿಸಿರುವ ಯಾರೇ ವ್ಯಕ್ತಿಗೆ ಅವನ ಸಂಬಂಧದಲ್ಲಿ ಯಾವುದೇ ಪರೀಕ್ಷೆ ನಡೆಸದೆ, ಅವನು ಹಾಗೆ ಸೇವೆ ಸಲ್ಲಿಸಿದ ಕಾರಣದಿಂದ ಒಂದು ಒಳನಾಡು ಯಂತ್ರಚಾಲಿತ ನೌಕೆಯಲ್ಲಿ, ಸಂದರ್ಭಾನುಸಾರವಾಗಿ, ಒಂದನೇ ದರ್ಜೆ ನಾಯಕನಾಗಿ, ಎರಡನೇ ದರ್ಜೆ ನಾಯಕನಾಗಿ ಅಥವಾ ಸೆರಾಂಗ್‌ನಾಗಿ ಅಥವಾ ಒಬ್ಬ ಇಂಜಿನಿಯರ್‌ನಾಗಿ, ಒಂದನೇ ದರ್ಜೆ ಇಂಜಿನ್ ಚಾಲಕನಾಗಿ ಅಥವಾ ಎರಡನೇ ದರ್ಜೆ ಇಂಜಿನ್ ಚಾಲಕನಾಗಿ ಆತನು ಕಾರ್ಯ ಮಾಡಲು ಸಕ್ಷಮವಾಗಿರುವನೆಂದು ಪ್ರಮಾಣ ಪತ್ರವನ್ನು (ಇದರಲ್ಲಿ ಇನ್ನು ಮುಂದೆ ಸೇವಾ ಪ್ರಮಾಣ ಪತ್ರವೆಂದು ಕರೆಯಲಾಗಿದೆ) ನೀಡಬಹುದು.

(2) ಹಾಗೆ ನೀಡಲಾದ ಸೇವಾ ಪ್ರಮಾಣಪತ್ರವು, ಪರೀಕ್ಷೆಯ ತರುವಾಯ ಈ ಅಧಿನಿಯಮದ ಮೇರೆಗೆ ನೀಡಿದ ಸಕ್ಷಮತಾ ಪ್ರಮಾಣ ಪತ್ರದಂತೆಯೇ ಪರಿಣಾಮಕಾರಿಯಾಗಿರತಕ್ಕದ್ದು.

**22ಎ. ಲೈಸೆನ್ಸುಗಳು.-** (1) ರಾಜ್ಯ ಸರ್ಕಾರವು, ಅದು ಸೂಕ್ತವೆಂದು ಭಾವಿಸಿದರೆ,-

(ಎ) 21ನೇ ಪ್ರಕರಣದ ಅಥವಾ 22ನೇ ಪ್ರಕರಣದ ಮೇರೆಗೆ ನೀಡಲಾದ ಎರಡನೇ ದರ್ಜೆ ನಾಯಕನ ಪ್ರಮಾಣ ಪತ್ರವನ್ನು ಹೊಂದಿರುವ ಮತ್ತು ಅಂಥ ಪ್ರಮಾಣಪತ್ರದ ಆಧಾರದ ಮೇಲೆ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ, ನಲ್ವತ್ತು ಅಥವಾ ಅದಕ್ಕಿಂತ ಹೆಚ್ಚಿನ ನಾಮಮಾತ್ರ ಅಶ್ವಶಕ್ತಿಯ ಇಂಜಿನ್‌ಗಳನ್ನು ಹೊಂದಿರುವ ಒಂದು ಒಳನಾಡು ಯಂತ್ರಚಾಲಿತ ನೌಕೆಯ ನಾಯಕನಾಗಿ ಕಾರ್ಯ ನಿರ್ವಹಿಸಿರುವ ಒಬ್ಬ ವ್ಯಕ್ತಿಗೆ; ಅಥವಾ

(ಬಿ) 21ನೇ ಪ್ರಕರಣದ ಅಥವಾ 22ನೇ ಪ್ರಕರಣದ ಮೇರೆಗೆ ನೀಡಲಾದ ಒಂದನೇ ದರ್ಜೆ ಇಂಜಿನ್ ಚಾಲಕನ ಅಥವಾ ವ್ಯಾಪಾರಿ ಹಡಗು ಅಧಿನಿಯಮ, 1958ರ (1958ರ 44) ಮೇರೆಗೆ ನೀಡಲಾದ ಅಥವಾ ನೀಡಲಾಗಿದೆಯೆಂದು ಭಾವಿಸಲಾದ ಒಂದು ಇಂಜಿನ್ ಚಾಲಕನ ಪ್ರಮಾಣ ಪತ್ರವನ್ನು ಹೊಂದಿರುವ ಮತ್ತು

ಅಂಥ ಪ್ರಮಾಣಪತ್ರದ ಆಧಾರದ ಮೇಲೆ ಐದು ವರ್ಷಗಳ ಅವಧಿಯವರೆಗೆ ಎಪ್ಪತ್ತಕ್ಕಿಂತ ಕಡಿಮೆಯಲ್ಲದ ನಾಮಮಾತ್ರ ಅಶ್ವಶಕ್ತಿಯ ಇಂಜಿನನ್ನು ಹೊಂದಿರುವ ಒಳನಾಡು ಯಂತ್ರಚಾಲಿತ ನೌಕೆಯ ಇಂಜಿನ್ ಚಾಲಕನಾಗಿ ಸೇವೆ ಸಲ್ಲಿಸಿರುವ ಆ ಪೈಕಿ ಎರಡೂವರೆ ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯವರೆಗೆ 26ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಅಂಥ ನೌಕೆಯ ಇಂಜಿನ್ ಚಾಲಕನಾಗಿರುವ ವ್ಯಕ್ತಿಗೆ ಒಂದು ನೂರು ಎಪ್ಪತ್ತು ನಾಮಮಾತ್ರ ಅಶ್ವಶಕ್ತಿಯ ಅಥವಾ ಅಂಥ ಸರ್ಕಾರವು ಹಾಗೆ ಸೂಕ್ತವೆಂದು ಭಾವಿಸಬಹುದಾದಂಥ ಕಡಿಮೆ ನಾಮಮಾತ್ರ ಅಶ್ವಶಕ್ತಿಯ ಇಂಜಿನ್‌ಗಳನ್ನು ಹೊಂದಿರುವ ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯ ನಾಯಕನಾಗಿ ಅಥವಾ ಸಂದರ್ಭಾನುಸಾರ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸಲು ಅಂಥ ವ್ಯಕ್ತಿಗೆ ಅಧಿಕಾರವನ್ನು ನೀಡುವ ಲೈಸೆನ್ಸನ್ನು ಕೂಡ ನೀಡಬಹುದು.

(2) ಅಂಥ ಯಾವುದೇ ಲೈಸೆನ್ಸನ್ನು ಹೊಂದಿರುವ ವ್ಯಕ್ತಿಯು ಅದನ್ನು ಸ್ವಾಧೀನದಲ್ಲಿ ಹೊಂದಿರಬಹುದಾದಷ್ಟು ಅವಧಿಯವರೆಗೆ ಅಥವಾ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಸ್ವರೂಪದ ನೌಕೆಯ ನಾಯಕನ ಅಥವಾ ಸಂದರ್ಭಾನುಸಾರ ಇಂಜಿನ್ ಚಾಲಕನ ಪ್ರಮಾಣಪತ್ರಕ್ಕೆ ಹಕ್ಕುಳ್ಳವನಾಗಿರುವವರೆಗೆ ಮಾತ್ರ ಆ ಲೈಸೆನ್ಸು ಜಾರಿಯಲ್ಲಿರತಕ್ಕದ್ದು:

ಪರಂತು, ರಾಜ್ಯ ಸರ್ಕಾರವು, ಸೂಕ್ತವೆಂದು ಭಾವಿಸಿದರೆ, ಅದು ಅಂಥ ಯಾವುದೇ ಲೈಸೆನ್ಸನ್ನು ಅಮಾನತುಗೊಳಿಸಬಹುದು, ರದ್ದುಗೊಳಿಸಬಹುದು ಅಥವಾ ಅದರ ಷರತ್ತುಗಳನ್ನು ವ್ಯತ್ಯಾಸಗೊಳಿಸಬಹುದು.

**23. ಪ್ರಮಾಣ ಪತ್ರಗಳನ್ನು ದ್ವಿಪ್ರತಿಯಲ್ಲಿ ತಯಾರಿಸುವುದು.–** ಈ ಅಧಿನಿಯಮದ ಮೇರೆಗೆ ನೀಡಲಾಗುವ ಪ್ರತಿಯೊಂದು ಸಕ್ಷಮತಾ ಅಥವಾ ಸೇವಾ ಪ್ರಮಾಣಪತ್ರ ಮತ್ತು ಪ್ರತಿಯೊಂದು ಲೈಸೆನ್ಸನ್ನು ದ್ವಿಪ್ರತಿಯಲ್ಲಿ ತಯಾರಿಸತಕ್ಕುದು ಮತ್ತು ಒಂದು ಪ್ರತಿಯನ್ನು ಪ್ರಮಾಣಪತ್ರಕ್ಕೆ ಅಥವಾ ಲೈಸೆನ್ಸಿಗೆ ಹಕ್ಕುಳ್ಳ ವ್ಯಕ್ತಿಗೆ ಕೊಡತಕ್ಕದ್ದು ಮತ್ತು ಇನ್ನೊಂದನ್ನು ನಿಯಮಿಸಲಾದ ರೀತಿಯಲ್ಲಿ ಇಡತಕ್ಕುದು ಮತ್ತು ದಾಖಲೆಗೆ ಸೇರಿಸತಕ್ಕದ್ದು.

**24. ಕೆಲವು ಸಂದರ್ಭಗಳಲ್ಲಿ ಪ್ರಮಾಣಪತ್ರ ಅಥವಾ ಲೈಸೆನ್ಸಿನ ಪ್ರತಿಯನ್ನು ನೀಡುವುದು.–** ಒಬ್ಬ ನಾಯಕನು ಅಥವಾ ಸೆರಾಂಗ್‌ನು ಅಥವಾ ಒಬ್ಬ ಇಂಜಿನಿಯರನು ಅಥವಾ ಇಂಜಿನ್ ಚಾಲಕನು, ಅವನಿಗೆ ಪ್ರಮಾಣ ಪತ್ರವನ್ನು ನೀಡಿದ ಪ್ರಾಧಿಕಾರಿಗೆ ಮನವರಿಕೆಯಾಗುವಂತೆ ಅಂಥ ಪ್ರಮಾಣಪತ್ರವು ಅಥವಾ ಲೈಸೆನ್ಸು ತನ್ನ ತಪ್ಪಿಲ್ಲದೆಯೇ ಕಳೆದುಹೋಗಿದೆ ಎಂದು ಅಥವಾ ಅದನ್ನು ಅಪಹರಿಸಲಾಗಿದೆ ಎಂದು ರುಜುವಾತು ಪಡಿಸಿದಾಗಲೆಲ್ಲ 23ನೇ ಪ್ರಕರಣದ ಮೇರೆಗೆ ಇಡಲಾದ ದಾಖಲೆಗನುಸಾರವಾಗಿ ಯಾವ ಪ್ರಮಾಣಪತ್ರ ಅಥವಾ ಲೈಸೆನ್ಸಿಗೆ ಹಕ್ಕುಳ್ಳವನಾಗಿರುವನೆಂದು ಕಂಡು ಬರುವುದೋ ಅದರ ಒಂದು ಪ್ರತಿಯನ್ನು ಅವನಿಗೆ ನೀಡತಕ್ಕದ್ದು ಮತ್ತು ಆ ಪ್ರತಿಯು ಮೂಲ ಪ್ರತಿಯಂತೆಯೇ ಪರಿಣಾಮವನ್ನು ಹೊಂದಿರತಕ್ಕದ್ದು.

**25. ಒಂದು ನೂರು ಅಥವಾ ಹೆಚ್ಚು ಅಶ್ವಶಕ್ತಿಯ ನೌಕೆಯ ನಾಯಕನು ಮತ್ತು ಇಂಜಿನಿಯರನು ಪ್ರಮಾಣ ಪತ್ರಗಳನ್ನು ಹೊಂದಿರುವುದು.–** ಒಂದು ನೂರು ಅಥವಾ ಅದಕ್ಕಿಂತ ಹೆಚ್ಚಿನ ನಾಮಮಾತ್ರ ಅಶ್ವಶಕ್ತಿಯ ಇಂಜಿನನ್ನು ಹೊಂದಿರುವ ಒಳನಾಡು ಯಂತ್ರಚಾಲಿತ ನೌಕೆಯು,–

(ಎ) ಈ ಅಧಿನಿಯಮದ ಮೇರೆಗೆ ನೀಡಲಾದ ಒಂದನೇ ವರ್ಗದ ನಾಯಕನ ಪ್ರಮಾಣ ಪತ್ರವನ್ನು ಅಥವಾ ವ್ಯಾಪಾರಿ ಹಡಗು ಅಧಿನಿಯಮ, 1958ರ (1958ರ 44) ಮೇರೆಗೆ ನೀಡಲಾದ ಅಥವಾ ನೀಡಲಾಗಿದೆ ಎಂದು ಭಾವಿಸಲಾದ ನಾಯಕನ ಪ್ರಮಾಣ ಪತ್ರವನ್ನು ಅಥವಾ 22ಎ ಪ್ರಕರಣದ ಮೇರೆಗೆ ನೀಡಲಾಗಿದ್ದು ಅಂಥ ನೌಕೆಗೆ ಅಥವಾ ಜಲಯಾನಕ್ಕೆ ಅನ್ವಯವಾಗುವ ನಾಯಕನ ಲೈಸೆನ್ಸನ್ನು ಹೊಂದಿರುವ ವ್ಯಕ್ತಿಯು ಅದರ ನಾಯಕನಾಗಿದ್ದ ಹೊರತು; ಮತ್ತು

(ಬಿ) ಈ ಅಧಿನಿಯಮದ ಮೇರೆಗೆ ನೀಡಲಾದ ಅಥವಾ ವ್ಯಾಪಾರಿ ಹಡಗು ಅಧಿನಿಯಮ, 1958 (1958ರ 44)ರ ಮೇರೆಗೆ ನೀಡಲಾದ ಅಥವಾ ನೀಡಲಾಗಿದೆ ಎಂದು ಭಾವಿಸಲಾದ ಇಂಜಿನಿಯರ್‌ನ ಪ್ರಮಾಣ ಪತ್ರವನ್ನು ಅಥವಾ 22ಎ ಪ್ರಕರಣದ ಮೇರೆಗೆ ನೀಡಲಾಗಿದ್ದು ಮತ್ತು ಅಂಥ ನೌಕೆಗೆ ಮತ್ತು ಜಲಯಾನಕ್ಕೆ ಅನ್ವಯವಾಗುವ ಇಂಜಿನ್ ಚಾಲಕನ ಲೈಸೆನ್ಸನ್ನು ಹೊಂದಿರುವ ವ್ಯಕ್ತಿಯು ಅದರ ಇಂಜಿನಿಯರ್‌ನಾಗಿದ್ದ ಹೊರತು

– ಯಾವುದೇ ಜಲಯಾನಕ್ಕೆ ಹೊರಡತಕ್ಕದ್ದಲ್ಲ.

**26. ನಲವತ್ತರಿಂದ ಒಂದುನೂರರವರೆಗಿನ ಅಶ್ವಶಕ್ತಿಯನ್ನು ಹೊಂದಿರುವ ನೌಕೆಯ ನಾಯಕನು ಮತ್ತು ಇಂಜಿನಿಯರನು ಹೊಂದಿರಬೇಕಾದ ಪ್ರಮಾಣ ಪತ್ರಗಳು.–** ನಲವತ್ತು ಅಥವಾ ಅದಕ್ಕಿಂತ ಹೆಚ್ಚಿನ ಆದರೆ ನೂರಕ್ಕಿಂತ ಕಡಿಮೆ ಇರುವ ನಾಮಮಾತ್ರ ಅಶ್ವಶಕ್ತಿಯ ಇಂಜಿನನ್ನು ಹೊಂದಿರುವ ಒಂದು ಒಳನಾಡು ಯಂತ್ರಚಾಲಿತ ನೌಕೆಯು,–

(ಎ) ಈ ಅಧಿನಿಯಮದ ಮೇರೆಗೆ ನೀಡಲಾದ ಎರಡನೇ ವರ್ಗದ ನಾಯಕನ ಪ್ರಮಾಣ ಪತ್ರವನ್ನು ಅಥವಾ 25ನೇ ಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ಪ್ರಮಾಣ ಪತ್ರವನ್ನು ಹೊಂದಿರುವ ಒಬ್ಬ ವ್ಯಕ್ತಿಯು ಅದರ ನಾಯಕನಾಗಿದ್ದ ಹೊರತು;

(ಬಿ) ಈ ಅಧಿನಿಯಮದ ಮೇರೆಗೆ ನೀಡಲಾದ ಒಂದನೇ ವರ್ಗದ ಇಂಜಿನ್ ಚಾಲಕನ ಪ್ರಮಾಣ ಪತ್ರವನ್ನು ಅಥವಾ ವ್ಯಾಪಾರಿ ಹಡಗು ಅಧಿನಿಯಮ, 1958ರ (1958ರ 44) ಮೇರೆಗೆ ನೀಡಲಾಗಿದೆ ಎಂದು ಭಾವಿಸಲಾದ ಇಂಜಿನ್ ಚಾಲಕನ ಪ್ರಮಾಣ ಪತ್ರವನ್ನು ಅಥವಾ 25ನೇ ಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಪ್ರಮಾಣ ಪತ್ರವನ್ನು ಹೊಂದಿರುವ ಒಬ್ಬ ವ್ಯಕ್ತಿಯು ಅದರ ಇಂಜಿನಿಯರ್‌ನಾಗಿದ್ದ ಹೊರತು

- ಯಾವುದೇ ಜಲಯಾನಕ್ಕೆ ಹೊರಡತಕ್ಕದ್ದಲ್ಲ:

ಪರಂತು, ಒಂದು ಯಂತ್ರಚಾಲಿತ ನೌಕೆಯು, ಈ ಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಲಾದ ಒಂದು ಪ್ರಮಾಣಪತ್ರ ಮತ್ತು (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಪ್ರಮಾಣಪತ್ರ – ಇವೆರಡನ್ನೂ ಹೊಂದಿರುವ ವ್ಯಕ್ತಿಯು ಅದರ ನಾಯಕ ಮತ್ತು ಇಂಜಿನಿಯರ್‌ನಾಗಿದ್ದರೆ ಅದು ಈ ಪ್ರಕರಣವನ್ನು ಪಾಲಿಸಿರುವುದಾಗಿ ಭಾವಿಸತಕ್ಕದ್ದು.

**27. ನಲವತ್ತು ಅಶ್ವಶಕ್ತಿಗಿಂತ ಕಡಿಮೆ ಇರುವ ನೌಕೆಯ ನಾಯಕ ಅಥವಾ ಇಂಜಿನಿಯರ್‌ನು ಹೊಂದಿರಬೇಕಾದ ಪ್ರಮಾಣ ಪತ್ರಗಳು.**– ನಲವತ್ತು ನಾಮಮಾತ್ರ ಅಶ್ವಶಕ್ತಿಗಿಂತ ಕಡಿಮೆ ಇರುವ ಇಂಜಿನನ್ನು ಹೊಂದಿರುವ ಒಳನಾಡು ಯಂತ್ರಚಾಲಿತ ನೌಕೆಯು,–

(ಎ) ಈ ಅಧಿನಿಯಮದ ಮೇರೆಗೆ ನೀಡಲಾದ ಸೆರಾಂಗ್‌ನ ಪ್ರಮಾಣಪತ್ರ ಅಥವಾ 26ನೇ ಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಪ್ರಮಾಣ ಪತ್ರವನ್ನು ಹೊಂದಿರುವ ಒಬ್ಬ ವ್ಯಕ್ತಿಯು ಅದರ ನಾಯಕನಾಗಿದ್ದ ಹೊರತು; ಮತ್ತು

(ಬಿ) ಈ ಅಧಿನಿಯಮದ ಮೇರೆಗೆ ನೀಡಲಾದ ಎರಡನೇ ದರ್ಜೆಯ ಇಂಜಿನ್ ಚಾಲಕರ ಪ್ರಮಾಣ ಪತ್ರವನ್ನು ಅಥವಾ 26ನೇ ಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಪ್ರಮಾಣ ಪತ್ರವನ್ನು ಹೊಂದಿರುವ ಒಬ್ಬ ವ್ಯಕ್ತಿಯು ಅದರ ಇಂಜಿನಿಯರ್ ಆಗಿದ್ದ ಹೊರತು

- ಯಾವುದೇ ಜಲಯಾನಕ್ಕೆ ಹೊರಡತಕ್ಕದ್ದಲ್ಲ:

ಪರಂತು, ಒಂದು ಯಂತ್ರಚಾಲಿತ ನೌಕೆಯು, ಈ ಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಲಾದ ಪ್ರಮಾಣಪತ್ರ ಮತ್ತು (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಪ್ರಮಾಣಪತ್ರ - ಇವೆರಡನ್ನೂ ಹೊಂದಿರುವ ಒಬ್ಬ ವ್ಯಕ್ತಿಯು ಅದರ ನಾಯಕ ಮತ್ತು ಇಂಜಿನಿಯರ್‌ನಾಗಿದ್ದರೆ, ಈ ಪ್ರಕರಣವನ್ನು ಪಾಲಿಸಿರುವುದಾಗಿ ಭಾವಿಸತಕ್ಕದ್ದು.

**28. ಇತರ ಪ್ರಮಾಣ ಪತ್ರಗಳೊಂದಿಗೆ ಈ ಅಧಿನಿಯಮದ ಮೇರೆಗೆ ನೀಡಲಾದ ಪ್ರಮಾಣ ಪತ್ರವನ್ನು ಹೊಂದಿರಲು ನಾಯಕನನ್ನು ಅಥವಾ ಇಂಜಿನಿಯರ್‌ನನ್ನು ಅಗತ್ಯಪಡಿಸಲು ರಾಜ್ಯ ಸರ್ಕಾರದ ಅಧಿಕಾರ.**– ಈ ಅಧ್ಯಾಯದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ,–

(ಎ) ವ್ಯಾಪಾರಿ ಹಡಗು ಅಧಿನಿಯಮ, 1958 (1958ರ 44)ರ ಮೇರೆಗೆ ನೀಡಲಾದ ಅಥವಾ ನೀಡಲಾಗಿದೆ ಎಂದು ಭಾವಿಸಲಾದ ನಾಯಕನ ಪ್ರಮಾಣಪತ್ರವನ್ನು ಹೊಂದಿರುವ;

(ಬಿ) ವ್ಯಾಪಾರಿ ಹಡಗು ಅಧಿನಿಯಮ, 1958 (1958ರ 44)ರ ಮೇರೆಗೆ ನೀಡಲಾದ ಅಥವಾ ನೀಡಲಾಗಿದೆ ಎಂದು ಭಾವಿಸಲಾದ ಇಂಜಿನಿಯರ್‌ನ ಅಥವಾ ಇಂಜಿನ್ ಚಾಲಕನ ಪ್ರಮಾಣ ಪತ್ರವನ್ನು ಹೊಂದಿರುವ ವ್ಯಕ್ತಿಯು,–

(i) (ಎ) ಸಂದರ್ಭದಲ್ಲಿ, ಈ ಅಧ್ಯಾಯದ ಮೇರೆಗೆ ಯಂತ್ರಚಾಲಿತ ನೌಕೆಯ ನಾಯಕನಾಗಿ ಕಾರ್ಯನಿರ್ವಹಿಸಲು ಅವನನ್ನು ಅರ್ಹಗೊಳಿಸುವಂತೆ ಈ ಅಧ್ಯಾಯದ ಮೇರೆಗೆ ನೀಡಲಾದ ನಾಯಕನ ಅಥವಾ ಸೆರಾಂಗನ ಪ್ರಮಾಣಪತ್ರವನ್ನು ಕೂಡ ಹೊಂದಿದ್ದ ಹೊರತು; ಅಥವಾ

(ii) (ಬಿ) ಸಂದರ್ಭದಲ್ಲಿ, ಈ ಅಧ್ಯಾಯದ ಮೇರೆಗೆ, ಯಂತ್ರಚಾಲಿತ ನೌಕೆಯ ಇಂಜಿನಿಯರ್‌ನಾಗಿ ಕಾರ್ಯ ನಿರ್ವಹಿಸಲು ಅವನನ್ನು ಅರ್ಹಗೊಳಿಸುವ ಈ ಅಧಿನಿಯಮದ ಮೇರೆಗೆ ನೀಡಲಾದ ಇಂಜಿನಿಯರ್ ಅಥವಾ ಇಂಜಿನ್ ಚಾಲಕನ ಪ್ರಮಾಣಪತ್ರವನ್ನು ಕೂಡ ಹೊಂದಿದ್ದ ಹೊರತು

– ಸಂದರ್ಭಾನುಸಾರ ಯಂತ್ರಚಾಲಿತ ನೌಕೆಯ ನಾಯಕನಾಗಿ ಅಥವಾ ಇಂಜಿನಿಯರ್‌ನಾಗಿ ಕಾರ್ಯನಿರ್ವಹಿಸತಕ್ಕದ್ದಲ್ಲ ಎಂದು ನಿರ್ದೇಶಿಸಬಹುದು:

ಪರಂತು, ಈ ಪ್ರಕರಣದ ಉದ್ದೇಶಗಳಿಗಾಗಿ, ರಾಜ್ಯ ಸರ್ಕಾರವು, ಅದು ಸೂಕ್ತವೆಂದು ಭಾವಿಸಿದರೆ ಯಾರೇ ವ್ಯಕ್ತಿಗೆ, ಅವನ ಸಂಬಂಧದಲ್ಲಿ ಯಾವುದೇ ಪರೀಕ್ಷೆಯನ್ನು ನಡೆಸದೆ ಈ ಅಧಿನಿಯಮದ ಮೇರೆಗಿನ ಒಬ್ಬ ನಾಯಕನ ಅಥವಾ ಸೆರಾಂಗನ ಅಥವಾ ಒಬ್ಬ ಇಂಜಿನಿಯರ್‌ನ ಅಥವಾ ಇಂಜಿನ್ ಚಾಲಕನ ಸಕ್ಷಮತಾ ಪ್ರಮಾಣಪತ್ರವನ್ನು ನೀಡಬಹುದು ಮತ್ತು ಅಂಥ ಪ್ರಮಾಣಪತ್ರವು, ಪರೀಕ್ಷೆಯ ನಂತರ ಈ ಅಧಿನಿಯಮದ ಮೇರೆಗೆ ನೀಡಲಾಗುವ ಸಕ್ಷಮತಾ ಪ್ರಮಾಣ ಪತ್ರದಂತೆಯೇ ಪರಿಣಾಮವನ್ನು ಹೊಂದಿರತಕ್ಕದ್ದು.

**29. ಸಕ್ಷಮತಾ ಪ್ರಮಾಣ ಪತ್ರಗಳನ್ನು ನೀಡುವ ಬಗ್ಗೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧ್ಯಾಯದ ಮೇರೆಗೆ ಸಕ್ಷಮತಾ ಪ್ರಮಾಣ ಪತ್ರಗಳನ್ನು ನೀಡುವುದನ್ನು ವಿನಿಯಮನಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಅಂಥ ನಿಯಮಗಳು ಕೆಳಕಂಡವುಗಳ ಬಗ್ಗೆ–

(ಎ) ಸಕ್ಷಮತಾ ಪ್ರಮಾಣ ಪತ್ರಗಳನ್ನು ಪಡೆಯಬಯಸುವ ವ್ಯಕ್ತಿಗಳ ಪರೀಕ್ಷೆಯನ್ನು ನಡೆಸುವ ಕಾಲಗಳು ಮತ್ತು ಸ್ಥಳಗಳು ಮತ್ತು ನಡೆಸುವ ರೀತಿ;

(ಬಿ) ಅಂಥ ಪ್ರಮಾಣ ಪತ್ರಗಳನ್ನು ಪಡೆಯಬಯಸುವ ವ್ಯಕ್ತಿಗಳು ಹೊಂದಿರಬೇಕಾದ ವಿದ್ಯಾರ್ಹತೆಗಳು;

(ಸಿ) ಅಂಥ ವ್ಯಕ್ತಿಗಳು ಸಂದಾಯ ಮಾಡಬೇಕಾದ ಪರೀಕ್ಷೆಯ ಫೀಜು; ಮತ್ತು

(ಡಿ) ಅಂಥ ಪ್ರಮಾಣ ಪತ್ರಗಳನ್ನು ಯಾವ ನಮೂನೆಗಳಲ್ಲಿ ರೂಪಿಸಬೇಕು ಮತ್ತು 23ನೇ ಪ್ರಕರಣದ ಮೇರೆಗೆ ಯಾವ ಪ್ರಾಧಿಕಾರಿಯು ಯಾವ ರೀತಿಯಲ್ಲಿ ಅವುಗಳ ಪ್ರತಿಗಳನ್ನು ಇಡಬೇಕು ಮತ್ತು ದಾಖಲಿಸಬೇಕು

– ಇವುಗಳ ಬಗ್ಗೆ ನಿಯಮಗಳನ್ನು ರಚಿಸಬಹುದು.

**30. ಸೇವಾ ಪ್ರಮಾಣ ಪತ್ರಗಳನ್ನು ನೀಡುವ ಬಗ್ಗೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** ರಾಜ್ಯ ಸರ್ಕಾರವು, 22ನೇ ಪ್ರಕರಣದ ಮೇರೆಗೆ ಸೇವಾ ಪ್ರಮಾಣ ಪತ್ರಗಳ ನೀಡಿಕೆಯನ್ನು ವಿನಿಯಮನಗೊಳಿಸಲು ಸಹ ನಿಯಮಗಳನ್ನು ರಚಿಸಬಹುದು ಮತ್ತು ಅಂಥ ನಿಯಮಗಳ ಮೂಲಕ ವಿಶೇಷವಾಗಿ–

(ಎ) ಅಂಥ ಪ್ರಮಾಣ ಪತ್ರಗಳಿಗಾಗಿ ಸಂದಾಯ ಮಾಡಬೇಕಾದ ಫೀಜು;

(ಬಿ) ಅಂಥ ಪ್ರಮಾಣ ಪತ್ರಗಳನ್ನು ಯಾವ ನಮೂನೆಗಳಲ್ಲಿ ರೂಪಿಸಬೇಕು ಮತ್ತು 23ನೇ ಪ್ರಕರಣದ ಮೇರೆಗೆ ಯಾವ ಪ್ರಾಧಿಕಾರಿಯು ಯಾವ ರೀತಿಯಲ್ಲಿ ಅವುಗಳ ಪ್ರತಿಗಳನ್ನು ಇಡಬೇಕು ಮತ್ತು ದಾಖಲಿಸಿ ಇಡಬೇಕು

– ಇವುಗಳ ಬಗ್ಗೆ ನಿಯಮಿಸಬಹುದು.

**30ಎ. ಲೈಸೆನ್ಸು ನೀಡಿಕೆಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** ರಾಜ್ಯ ಸರ್ಕಾರವು 22ಎ ಪ್ರಕರಣದ ಮೇರೆಗಿನ ಲೈಸೆನ್ಸು ನೀಡಿಕೆಯನ್ನು ವಿನಿಯಮಗೊಳಿಸಲು ಸಹ ನಿಯಮಗಳನ್ನು ರಚಿಸಬಹುದು, ಮತ್ತು ಅಂಥ ನಿಯಮಗಳ ಮೂಲಕ ವಿಶೇಷವಾಗಿ –

(ಎ) ಅಂಥ ಲೈಸೆನ್ಸುಗಳ ಬಗ್ಗೆ ಸಂದಾಯ ಮಾಡಬೇಕಾದ ಫೀಜುಗಳೇನಾದರೂ ಇದ್ದರೆ ಅಂಥ ಫೀಜು;

(ಬಿ) ಅಂಥ ಲೈಸೆನ್ಸುಗಳನ್ನು ಯಾವ ನಮೂನೆಗಳಲ್ಲಿ ರೂಪಿಸಬೇಕು ಮತ್ತು 23ನೇ ಪ್ರಕರಣದ ಮೇರೆಗೆ ಯಾವ ಪ್ರಾಧಿಕಾರಿಯು ಯಾವ ರೀತಿಯಲ್ಲಿ ಪ್ರತಿಗಳನ್ನು ಇಡಬೇಕು ಮತ್ತು ದಾಖಲಿಸಬೇಕು

– ಇವುಗಳ ಬಗ್ಗೆ ನಿಯಮಿಸಬಹುದು.

**31. ಯಾವ ಪ್ರದೇಶದಲ್ಲಿ ಸಕ್ಷಮತಾ ಅಥವಾ ಸೇವಾ ಪ್ರಮಾಣ ಪತ್ರಗಳು ಮತ್ತು ಲೈಸೆನ್ಸುಗಳು ಪರಿಣಾಮಕಾರಿ ಯಾಗತಕ್ಕದ್ದು.–** ಈ ಅಧ್ಯಾಯದ ಮೇರೆಗೆ ನೀಡಲಾದ ಸಕ್ಷಮತಾ ಅಥವಾ ಸೇವಾ ಪ್ರಮಾಣ ಪತ್ರಗಳು ಅಥವಾ ಲೈಸೆನ್ಸು, ಅದನ್ನು ಯಾವ ರಾಜ್ಯದಲ್ಲಿ ನೀಡಲಾಯಿತೋ ಆ ರಾಜ್ಯದಾದ್ಯಂತ ಪರಿಣಾಮಕಾರಿಯಾಗಿರತಕ್ಕದ್ದು:

ಪರಂತು, ಅಂಥ ಪ್ರಮಾಣಪತ್ರ ಅಥವಾ ಲೈಸೆನ್ಸನ್ನು ನೀಡುವ ಪ್ರಾಧಿಕಾರಿಯು ಅದರ ಮೇಲೆ ಹಿಂಬರಹ ಮಾಡುವ ಮೂಲಕ ಅಂಥ ಪ್ರಮಾಣಪತ್ರದ ಅಥವಾ ಲೈಸೆನ್ಸಿನ ಪರಿಣಾಮವನ್ನು ಅಂಥ ರಾಜ್ಯದ ಯಾವುದೇ ಭಾಗಕ್ಕೆ ನಿರ್ಬಂಧಿಸಬಹುದು:

ಮತ್ತೂ ಪರಂತು, ಅಂಥ ಪ್ರಮಾಣಪತ್ರ ಅಥವಾ ಲೈಸೆನ್ಸನ್ನು, ಯಾವುದೇ ಇತರ ರಾಜ್ಯದ ರಾಜ್ಯ ಸರ್ಕಾರ ಅಥವಾ ಅಂಥ ಇತರ ರಾಜ್ಯದ ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಮಂಜೂರಾತಿಯೊಂದಿಗೆ, ಅದನ್ನು ನೀಡುವ ಪ್ರಾಧಿಕಾರಿಯು, ಅಂಥ ಇತರ ರಾಜ್ಯ ಅಥವಾ ಅದರ ಯಾವುದೇ ಭಾಗದಲ್ಲಿ ಪರಿಣಾಮಕಾರಿಯಾಗುವಂತೆ ಅದರ ಮೇಲೆ ಹಿಂಬರಹ ಮಾಡಬಹುದು ಮತ್ತು ಆ ತರುವಾಯ ತದನುಸಾರವಾಗಿ ಅಂಥ ಪ್ರಮಾಣಪತ್ರ ಅಥವಾ ಲೈಸೆನ್ಸು ಪರಿಣಾಮ ಹೊಂದಿರತಕ್ಕದ್ದು.

## ಅಧ್ಯಾಯ – IV

## ಅಪಘಾತಗಳ ಬಗ್ಗೆ ತನಿಖೆ ನಡೆಸುವುದು

**32. ಅಪಘಾತಗಳ ವರದಿಯನ್ನು ಸಮೀಪದ ಪೊಲೀಸು ಠಾಣೆಗೆ ವರದಿಮಾಡುವುದು.–** (ಎ) ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯು ಭಗ್ನವಾದಾಗ, ಅದನ್ನು ಪರಿತ್ಯಜಿಸಲ್ಪಟ್ಟಾಗ ಅಥವಾ ಅದು ಗಣನೀಯವಾಗಿ ಹಾನಿಗೊಂಡಾಗ; ಅಥವಾ

(ಬಿ) ಯಾವುದೇ ಒಳನಾಡು ಯಂತ್ರಚಾಲಿತ ನೌಕೆಗೆ ಅಥವಾ ನೌಕೆಯಲ್ಲಿ ಯಾವುದೇ ಅಪಘಾತವು ಸಂಭವಿಸಿದ ಕಾರಣ ಜೀವಹಾನಿ ಉಂಟಾದಾಗ; ಅಥವಾ

(ಸಿ) ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯು ಯಾವುದೇ ಇತರ ನೌಕೆಗೆ ಗಣನೀಯವಾದ ನಷ್ಟ ಅಥವಾ ಹಾನಿ ಉಂಟು ಮಾಡಿದಾಗ

– ಯಂತ್ರಚಾಲಿತ ನೌಕೆಯ ನಾಯಕನು ಸಮೀಪದ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಗೆ ಆ ಕೂಡಲೇ ಭಗ್ನದ, ಪರಿತ್ಯಾಗದ, ಹಾನಿಯ, ಅಪಘಾತದ ಅಥವಾ ನಷ್ಟದ ಬಗ್ಗೆ ತಿಳಿಸತಕ್ಕದ್ದು.

**33. ತನಿಖಾ ನ್ಯಾಯಾಲಯವನ್ನು ನೇಮಕ ಮಾಡಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, 32ನೇ ಪ್ರಕರಣದ ಮೇರೆಗೆ ವರದಿ ಮಾಡಲಾದ ಅಥವಾ ಅನ್ಯಥಾ ಅದರ ಗಮನಕ್ಕೆ ತರಲಾದ ಯಾವುದೇ ಪ್ರಕರಣದ ವಾಸ್ತವಾಂಶಗಳ ಬಗ್ಗೆ ಔಪಚಾರಿಕ ತನಿಖೆಯನ್ನು ಮಾಡುವುದು ಅವಶ್ಯವಾಗಿದೆಯೆಂದು ಅಥವಾ ಯುಕ್ತವಾಗಿದೆಯೆಂದು ಅದಕ್ಕೆ ಮನದಟ್ಟಾದಾಗಲೆಲ್ಲಾ, ರಾಜ್ಯ ಸರ್ಕಾರವು,–

(ಎ) ಒಂದು ವಿಶೇಷ ನ್ಯಾಯಾಲಯವನ್ನು ನೇಮಕ ಮಾಡಬಹುದು ಮತ್ತು ಈ ಬಗ್ಗೆ ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದಂಥ ಸ್ಥಳದಲ್ಲಿ ತನಿಖೆ ಮಾಡುವಂತೆ ನ್ಯಾಯಾಲಯಕ್ಕೆ ನಿರ್ದೇಶಿಸಬಹುದು; ಅಥವಾ

(ಬಿ) ತನಿಖೆಯನ್ನು ಮಾಡಲು ಸಾಧಾರಣ ಕ್ರಿಮಿನಲ್ ಅಧಿಕಾರ ವ್ಯಾಪ್ತಿಯ ಯಾವುದೇ ಪ್ರಧಾನ ನ್ಯಾಯಾಲಯಕ್ಕೆ ಅಥವಾ ಯಾವುದೇ ಜಿಲ್ಲಾ ಮ್ಯಾಜಿಸ್ಟ್ರೇಟಿನ ನ್ಯಾಯಾಲಯಕ್ಕೆ ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ನೇಮಕ ಮಾಡಲಾದ ವಿಶೇಷ ನ್ಯಾಯಾಲಯವು, ಇಬ್ಬರಿಗಿಂತ ಕಡಿಮೆ ಇಲ್ಲದ ಅಥವಾ ನಾಲ್ವರಿಗಿಂತ ಹೆಚ್ಚಿಲ್ಲದಂಥ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು, ಮತ್ತು ಅವರಲ್ಲಿ ಒಬ್ಬನು ಮ್ಯಾಜಿಸ್ಟ್ರೇಟನಾಗಿರತಕ್ಕದ್ದು, ಒಬ್ಬನು ಕಡಲ ಸಂಬಂಧವಾದ ವ್ಯವಹಾರಗಳಲ್ಲಿ ಅಥವಾ ಒಳನಾಡು ಯಂತ್ರಚಾಲಿತ ನೌಕೆಗಳ ನೌಕಾ ಸಂಚಾರದಲ್ಲಿ ಪರಿಶ್ರಮವುಳ್ಳ ವ್ಯಕ್ತಿಯಾಗಿರತಕ್ಕದ್ದು, ಮತ್ತು ಇತರ ವ್ಯಕ್ತಿಯು ಅಥವಾ ಇತರ ವ್ಯಕ್ತಿಗಳು (ಯಾರಾದರೂ ಇದ್ದರೆ) ಕಡಲ ಸಂಬಂಧವಾದ ಅಥವಾ ವ್ಯಾಪಾರದ ವ್ಯವಹಾರಗಳಲ್ಲಿ ಅಥವಾ ಒಳನಾಡು ಯಂತ್ರಚಾಲಿತ ನೌಕೆಯ ನೌಕಾ ಸಂಚಾರದ ಸಂಬಂಧದಲ್ಲಿ ಪರಿಶ್ರಮವುಳ್ಳ ವ್ಯಕ್ತಿಯಾಗಿರತಕ್ಕದ್ದು.

**34. ಅಸಮರ್ಥತೆ ಅಥವಾ ದುರ್ನಡತೆಯ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ತನಿಖಾ ನ್ಯಾಯಾಲಯದ ಅಧಿಕಾರ.–** (1) 33ನೇ ಪ್ರಕರಣದ ಮೇರೆಗೆ ಒಂದು ತನಿಖೆಯನ್ನು ನಡೆಸುವ ಯಾವುದೇ ನ್ಯಾಯಾಲಯವು, ಅಧ್ಯಾಯ IIIರ ಮೇರೆಗೆ ನೀಡಲಾದ ಪ್ರಮಾಣ ಪತ್ರವನ್ನು ಹೊಂದಿರುವ ಯಾರೇ ನಾಯಕ, ಇಂಜಿನಿಯರು ಅಥವಾ ಇಂಜಿನ್ ಚಾಲಕ ಅಥವಾ ಯಾರೇ ವ್ಯಕ್ತಿಯ ವಿರುದ್ಧ ತನಿಖೆಯನ್ನು ನಡೆಸುವಾಗ ಗಮನಕ್ಕೆ ಬರುವ

ಅಸಮರ್ಥತೆ ಅಥವಾ ದುರ್ನಡತೆಯ ಬಗ್ಗೆ ಹಾಗೂ 32ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಹಾನಿಗೆ, ಅಪಘಾತಕ್ಕೆ ಅಥವಾ ನಷ್ಟಕ್ಕೆ ಕಾರಣನಾದ ಅವನ ಅಕೃತ್ಯ ಅಥವಾ ತಪ್ಪಿಗೆ ಸಂಬಂಧಪಟ್ಟ ಯಾವುದೇ ಆರೋಪದ ಬಗ್ಗೆ ವಿಚಾರಣೆ ನಡೆಸಬಹುದು.

(2) ಅಧ್ಯಾಯ IIIರ ಮೇರೆಗೆ ನೀಡಲಾದ ಪ್ರಮಾಣ ಪತ್ರವನ್ನು ಹೊಂದಿರುವ ಯಾರೇ ನಾಯಕ, ಇಂಜಿನಿಯರು ಅಥವಾ ಇಂಜಿನ್ ಚಾಲಕ ಅಥವಾ ಯಾರೇ ವ್ಯಕ್ತಿಯ ವಿರುದ್ಧ ತನಿಖೆಯ ಕ್ರಮದಲ್ಲಿ ಕಂಡುಬರುವ ಅಂಥ ಯಾವುದೇ ಆರೋಪವುಳ್ಳ ಪ್ರತಿಯೊಂದು ಪ್ರಕರಣದಲ್ಲಿ, ನ್ಯಾಯಾಲಯವು, ಆರೋಪದ ಬಗ್ಗೆ ವಿಚಾರಣೆಯನ್ನು ಪ್ರಾರಂಭಿಸುವುದಕ್ಕೆ ಮುಂಚೆ ಯಾವ ಪ್ರಕರಣದ ಬಗ್ಗೆ ತನಿಖೆಯನ್ನು ನಿರ್ದೇಶಿಸಲಾಗಿದೆಯೋ ಆ ಪ್ರಕರಣದ ವರದಿಯ ಅಥವಾ ವಿವರಣೆಯ ಒಂದು ಪ್ರತಿಯನ್ನು ಅವನಿಗೆ ಒದಗಿಸತಕ್ಕದ್ದು.

**35. 33ನೇ ಪ್ರಕರಣದ ಮೇರೆಗಲ್ಲದೆ ಬೇರೆ ರೀತಿಯಲ್ಲಿ ತನಿಖೆಯನ್ನು ನಿರ್ದೇಶಿಸಲು ರಾಜ್ಯ ಸರ್ಕಾರದ ಅಧಿಕಾರ.**- (1) ರಾಜ್ಯ ಸರ್ಕಾರವು, ಅಧ್ಯಾಯ IIIರ ಮೇರೆಗೆ ನೀಡಿದ ಪ್ರಮಾಣ ಪತ್ರವನ್ನು ಹೊಂದಿರುವ ಯಾರೇ ನಾಯಕ, ಇಂಜಿನಿಯರು ಅಥವಾ ಇಂಜಿನ್ ಚಾಲಕ ಅಥವಾ ಯಾರೇ ವ್ಯಕ್ತಿಯ ವಿರುದ್ಧ ಅಸಮರ್ಥತೆ ಅಥವಾ ದುರ್ನಡತೆಯ ಆರೋಪ ಹೊರಿಸಲು 33ನೇ ಪ್ರಕರಣದ ಮೇರೆಗಿನ ತನಿಖೆಯ ಕ್ರಮದಲ್ಲಲ್ಲದೆ ಬೇರೆ ರೀತಿಯಲ್ಲಿ ನಂಬಲು ಆಧಾರಗಳಿದ್ದರೆ, ಅದು ಆ ಪ್ರಕರಣದ ವಿವರಣೆಯನ್ನು ಸಾಧಾರಣ ಕ್ರಿಮಿನಲ್ ಅಧಿಕಾರ ವ್ಯಾಪ್ತಿಯ ಪ್ರಧಾನ ನ್ಯಾಯಾಲಯಕ್ಕೆ ಅಥವಾ ಪಕ್ಷಕಾರರು ಮತ್ತು ಸಾಕ್ಷಿದಾರರು ಹಾಜರಾಗಲು ಅನುಕೂಲವಾಗಬಹುದಾದ ಸ್ಥಳದಲ್ಲಿರುವ ಅಥವಾ ಅದಕ್ಕೆ ಸಮೀಪವಿರುವ ಜಿಲ್ಲಾ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕೆ ಕಳುಹಿಸಬಹುದು, ಮತ್ತು ಆರೋಪದ ಬಗ್ಗೆ ತನಿಖೆಯನ್ನು ಮಾಡುವಂತೆ ನ್ಯಾಯಾಲಯಕ್ಕೆ ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ತನಿಖೆಯನ್ನು ಪ್ರಾರಂಭಿಸುವುದಕ್ಕೆ ಮುಂಚೆ, ನ್ಯಾಯಾಲಯವು ಆರೋಪಿತ ವ್ಯಕ್ತಿಗೆ, ರಾಜ್ಯ ಸರ್ಕಾರವು ಕಳುಹಿಸಿದ ಪ್ರಕರಣದ ವಿವರಣೆಯ ಒಂದು ಪ್ರತಿಯನ್ನು ಒದಗಿಸುವಂತೆ ಮಾಡತಕ್ಕದ್ದು.

**36. ಆರೋಪಿತ ವ್ಯಕ್ತಿಯ ಅಹವಾಲನ್ನು ಕೇಳುವುದು.**- ಅಧ್ಯಾಯ IIIರ ಮೇರೆಗೆ ನೀಡಲಾದ ಪ್ರಮಾಣ ಪತ್ರವನ್ನು ಹೊಂದಿರುವ ಒಬ್ಬ ನಾಯಕ, ಇಂಜಿನಿಯರ್ ಅಥವಾ ಇಂಜಿನ್ ಚಾಲಕ ಅಥವಾ ಯಾರೇ ವ್ಯಕ್ತಿಯ ವಿರುದ್ಧದ ಯಾವುದೇ ಆರೋಪದ ಬಗ್ಗೆ ಈ ಅಧ್ಯಾಯದ ಮೇರೆಗೆ ತನಿಖೆಯನ್ನು ನಡೆಸುವ ಉದ್ದೇಶಕ್ಕಾಗಿ, ನ್ಯಾಯಾಲಯವು ಅವನು ಹಾಜರಾಗುವಂತೆ ಸಮನು ಮಾಡಬಹುದು ಮತ್ತು ಆತನಿಗೆ ಖುದ್ದಾಗಿ ಆಗಲಿ ಅಥವಾ ಬೇರೆ ರೀತಿಯಲ್ಲಿ, ಪ್ರತಿವಾದವನ್ನು ಮಾಡುವ ಪೂರ್ಣ ಅವಕಾಶವನ್ನು ಕೊಡತಕ್ಕದ್ದು.

**37. ನಿರ್ಧಾರಕರು.**- (1) ಈ ಅಧ್ಯಾಯದ ಮೇರೆಗೆ ಒಂದು ತನಿಖೆಯನ್ನು ಮಾಡುವ ನ್ಯಾಯಾಲಯದ ಅಭಿಪ್ರಾಯದಲ್ಲಿ ಆ ತನಿಖೆಯು, ಅಧ್ಯಾಯ IIIರ ಮೇರೆಗೆ ನೀಡಿದ ಪ್ರಮಾಣ ಪತ್ರವನ್ನು ಹೊಂದಿರುವ ನಾಯಕ, ಇಂಜಿನಿಯರ್ ಅಥವಾ ಇಂಜಿನ್ ಚಾಲಕ ಅಥವಾ ಯಾರೇ ವ್ಯಕ್ತಿಯ ಪ್ರಮಾಣ ಪತ್ರವನ್ನು ರದ್ದುಗೊಳಿಸುವುದಕ್ಕೆ ಅಥವಾ ಅಮಾನತುಗೊಳಿಸುವುದಕ್ಕೆ ಸಂಬಂಧಪಟ್ಟ ಯಾವುದೇ ಪ್ರಶ್ನೆಯನ್ನು ಒಳಗೊಂಡಿರುವಲ್ಲಿ ಅಥವಾ ಒಳಗೊಂಡಿರುವ ಸಂಭವವಿರುವುದಾಗಿ ಕಂಡುಬರುವಲ್ಲಿ, ನ್ಯಾಯಾಲಯವು ತನಿಖೆಯ ಉದ್ದೇಶಕ್ಕಾಗಿ ವ್ಯಾಪಾರಿ ಹಡಗು ಸೇವೆಯಲ್ಲಿ ಅಥವಾ ಒಳನಾಡು ಯಂತ್ರಚಾಲಿತ ನೌಕೆಗಳ ನೌಕಾ ಸಂಚಾರದ ಸಂಬಂಧದಲ್ಲಿ ಅನುಭವವನ್ನು ಹೊಂದಿರುವ ಇಬ್ಬರು ವ್ಯಕ್ತಿಗಳನ್ನು ನಿರ್ಧಾರಕರಾಗಿ ನೇಮಕ ಮಾಡತಕ್ಕದ್ದು.

(2) ಪ್ರತಿಯೊಂದು ಇತರ ತನಿಖೆಯಲ್ಲಿ, ನ್ಯಾಯಾಲಯವು, ಅದು ಸೂಕ್ತವೆಂದು ಭಾವಿಸಿದರೆ, ತನಿಖೆಯ ಉದ್ದೇಶಕ್ಕಾಗಿ, ಕಡಲ ಸಂಬಂಧವಾದ ವ್ಯವಹಾರಗಳಲ್ಲಿ ಅಥವಾ ಒಳನಾಡು ಯಂತ್ರಚಾಲಿತ ನೌಕೆಗಳ ನೌಕಾ ಸಂಚಾರದ ಸಂಬಂಧದಲ್ಲಿ ಪರಿಶ್ರಮವುಳ್ಳ ಮತ್ತು ನಿರ್ಧಾರಕನಾಗಿ ಕಾರ್ಯ ನಿರ್ವಹಿಸಲು ಇಚ್ಛಿಸುವ ಯಾರೇ ವ್ಯಕ್ತಿಯನ್ನು ಅದರ ನಿರ್ಧಾರಕನಾಗಿ ನೇಮಕ ಮಾಡಬಹುದು.

(3) ಈ ಪ್ರಕರಣದ ಮೇರೆಗೆ ನಿರ್ಧಾರಕನಾಗಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯು ತನಿಖೆಯ ಸಮಯದಲ್ಲಿ ಹಾಜರಾಗತಕ್ಕದ್ದು ಮತ್ತು ವ್ಯವಹರಣೆಗಳ ಬಗ್ಗೆ ತನ್ನ ಅಭಿಪ್ರಾಯವನ್ನು ದಾಖಲಿಸಿಕೊಳ್ಳುವುದಕ್ಕಾಗಿ ಬರಹದಲ್ಲಿ ಕೊಡತಕ್ಕದ್ದು.

**38. ಸಾಕ್ಷ್ಯ ಮತ್ತು ವ್ಯವಹರಣೆಗಳ ವಿನಿಯಮನಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಅಧಿಕಾರಗಳು.**- ಈ ಅಧ್ಯಾಯದ ಮೇರೆಗಿನ ಯಾವುದೇ ತನಿಖೆಯ ಉದ್ದೇಶಗಳಿಗಾಗಿ, ತನಿಖೆಯನ್ನು ಮಾಡುವ ನ್ಯಾಯಾಲಯವು, ಸಾಕ್ಷಿಗಳ ಹಾಜರಾತಿ ಮತ್ತು ಪರೀಕ್ಷೆಯನ್ನು ಒತ್ತಾಯಪಡಿಸುವುದಕ್ಕೆ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕೆ ಮತ್ತು ವ್ಯವಹರಣೆಗಳನ್ನು ವಿನಿಯಮನ ಗೊಳಿಸುವುದಕ್ಕೆ ಸಂಬಂಧಪಡುವಷ್ಟರಮಟ್ಟಿಗೆ,-

(ಎ) ಆ ನ್ಯಾಯಾಲಯವು ವಿಶೇಷ ನ್ಯಾಯಾಲಯವಾಗಿದ್ದರೆ ಯಾವ ಸ್ಥಳದಲ್ಲಿ ತನಿಖೆಯನ್ನು ಮಾಡಲಾಗುವುದೋ ಆ ಸ್ಥಳದ ಸಂಬಂಧದಲ್ಲಿ ಸಾಧಾರಣ ಕ್ರಿಮಿನಲ್ ಅಧಿಕಾರ ವ್ಯಾಪ್ತಿಯ ಪ್ರಧಾನ ನ್ಯಾಯಾಲಯವು ಚಲಾಯಿಸಬಹುದಾದಂಥವೇ ಅಧಿಕಾರಗಳನ್ನು, ಅಥವಾ

(ಬಿ) ಆ ನ್ಯಾಯಾಲಯವು ಸಾಧಾರಣ ಕ್ರಿಮಿನಲ್ ಅಧಿಕಾರ ವ್ಯಾಪ್ತಿಯುಳ್ಳ ಪ್ರಧಾನ ನ್ಯಾಯಾಲಯವಾಗಿದ್ದರೆ, ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯವಾಗಿದ್ದರೆ, ಅಂಥ ಪ್ರಧಾನ ನ್ಯಾಯಾಲಯವು ಅಥವಾ ಮ್ಯಾಜಿಸ್ಟ್ರೇಟನ ನ್ಯಾಯಾಲಯವು ಅವರ ಕ್ರಿಮಿನಲ್ ಅಧಿಕಾರ ವ್ಯಾಪ್ತಿಯ ನಿರ್ವಹಣೆಯಲ್ಲಿ ಚಲಾಯಿಸಬಹುದಾದಂಥವೇ ಅಧಿಕಾರಗಳನ್ನು

- ಹೊಂದಿರತಕ್ಕದ್ದು.

**39. ನೌಕೆಗಳನ್ನು ಪ್ರವೇಶಿಸುವಂತೆ ಮತ್ತು ಅವುಗಳನ್ನು ತಡೆಹಿಡಿದಿರಿಸುವಂತೆ ಮಾಡುವ ಮೂಲಕ ಸಾಕ್ಷಿದಾರರ ದಸ್ತಗಿರಿಯನ್ನು ಮಾಡಿಸಲು ನ್ಯಾಯಾಲಯದ ಅಧಿಕಾರ.**- (1) ಈ ಅಧ್ಯಾಯದ ಮೇರೆಗೆ ತನಿಖೆಯನ್ನು ನಡೆಸುವ ಯಾವುದೇ ನ್ಯಾಯಾಲಯವು, ಅದರ ಅಭಿಪ್ರಾಯದಲ್ಲಿ, ಯಾವ ವ್ಯಕ್ತಿಯ ಸಾಕ್ಷ್ಯವು ಅವಶ್ಯವಿರುವುದೋ ಆ ಯಾರೇ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಪಡಿಸಲು ದಸ್ತಗಿರಿಯ ವಾರಂಟನ್ನು ಹೊರಡಿಸಿದ್ದರೆ, ಆ ದಸ್ತಗಿರಿಯನ್ನು ಮಾಡಿಸುವ ಸಲುವಾಗಿ ಆದರೆ, ಈ ಬಗ್ಗೆ ರಾಜ್ಯ ಸರ್ಕಾರವು ನೀಡಿದ ಯಾವುವೇ ಸಾಮಾನ್ಯ ಅಥವಾ ವಿಶೇಷ ಸೂಚನೆಗಳಿಗೊಳಪಟ್ಟು, ಯಾವುದೇ ನೌಕೆಯನ್ನು ಪ್ರವೇಶಿಸಲು ಯಾರೇ ಅಧಿಕಾರಿಗೆ ಅಧಿಕಾರ ನೀಡಬಹುದು.

(2) ಯಾವುದೇ ನೌಕೆಯನ್ನು ಪ್ರವೇಶಿಸಲು ಹಾಗೆ ಅಧಿಕಾರ ಪಡೆದ ಒಬ್ಬ ಅಧಿಕಾರಿಯು, ಪ್ರವೇಶಿಸುವ ಉದ್ದೇಶಕ್ಕಾಗಿ, ಅವನಿಗೆ ಸಹಾಯ ಮಾಡಲು ಪೊಲೀಸು ಅಥವಾ ಸೀಮಾ ಸುಂಕದ ಯಾರೇ ಅಧಿಕಾರಿಗಳನ್ನು ಅಥವಾ ಯಾರೇ ಇತರ ವ್ಯಕ್ತಿಗಳನ್ನು ಕರೆಯಬಹುದು ಮತ್ತು ದಸ್ತಗಿರಿಯನ್ನು ಜಾರಿಗೊಳಿಸಲು ಯುಕ್ತವಾಗಿ ಅವಶ್ಯವಾದಂಥ ಕಾಲದವರೆಗೆ ನೌಕೆಯನ್ನು ವಶಪಡಿಸಿಕೊಂಡು ಅದನ್ನು ತಡೆಹಿಡಿದಿಡಬಹುದು; ಮತ್ತು ಪ್ರತಿಯೊಬ್ಬ ಅಂಥ ಅಧಿಕಾರಿ ಅಥವಾ ಇತರ ವ್ಯಕ್ತಿಯನ್ನು, ಭಾರತ ದಂಡ ಸಂಹಿತೆಯ ಅರ್ಥವ್ಯಾಪ್ತಿಯೊಳಗೆ ಲೋಕನೌಕರ ಎಂಬುದಾಗಿ ಭಾವಿಸತಕ್ಕದ್ದು.

(3) ಯಾರೇ ವ್ಯಕ್ತಿಯನ್ನು ಈ ಪ್ರಕರಣದ ಮೇರೆಗೆ ನಲ್ವತ್ತೆಂಟು ಗಂಟೆಗಳಿಗಿಂತ ಹೆಚ್ಚಿನ ಅವಧಿಯವರೆಗೆ ತಡೆಹಿಡಿದಿಡತಕ್ಕದ್ದಲ್ಲ.

**40. ಸಾಕ್ಷಿದಾರರನ್ನು ಅಧಿವಿಚಾರಣೆಗೆ ಒಪ್ಪಿಸಲು ಮತ್ತು ಅವರಿಂದ ಮುಚ್ಚಳಿಕೆ ಬರೆಸಿಕೊಳ್ಳಲು ನ್ಯಾಯಾಲಯದ ಅಧಿಕಾರ.**- ಈ ಅಧ್ಯಾಯದ ಮೇರೆಗೆ ತನಿಖೆಯನ್ನು ಮಾಡುವಾಗ, ತನಿಖೆಯನ್ನು ಮಾಡುವ ನಡೆಸುವ ನ್ಯಾಯಾಲಯಕ್ಕೆ, ಯಾರೇ ವ್ಯಕ್ತಿಯು, ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯಕ್ಷೇತ್ರಗಳೊಳಗೆ, ಅಂಥ ರಾಜ್ಯ ಕ್ಷೇತ್ರಗಳಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ದಂಡನಾರ್ಹವಾದ ಒಂದು ಅಪರಾಧವನ್ನು ಎಸಗಿದ್ದಾನೆಂದು ಕಂಡುಬಂದಲ್ಲಿ, ತನಿಖೆ ನಡೆಸುವ ಆ ನ್ಯಾಯಾಲಯವು, ಈ ಬಗ್ಗೆ ಉಚ್ಚ ನ್ಯಾಯಾಲಯವು ಕಾಲಕಾಲಕ್ಕೆ ಮಾಡಬಹುದಾದಂಥ ಮತ್ತು ಈ ಅಧಿನಿಯಮಕ್ಕೆ ಸಂಗತವಾಗಿರುವಂಥ ನಿಯಮಗಳಿಗೆ ಒಳಪಟ್ಟು,-

(ಎ) ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಿಸಬಹುದು;

(ಬಿ) ಯುಕ್ತ ನ್ಯಾಯಾಲಯದ ಮುಂದೆ ಅವನ ಅಧಿವಿಚಾರಣೆಯನ್ನು ನಡೆಸಲು ಆತನನ್ನು ಒಪ್ಪಿಸಬಹುದು ಅಥವಾ ಅವನ ಜಾಮೀನನ್ನು ತೆಗೆದುಕೊಳ್ಳಬಹುದು;

(ಸಿ) ಅಂಥ ಅಧಿವಿಚಾರಣೆಯಲ್ಲಿ ಸಾಕ್ಷ್ಯವನ್ನು ಕೊಡುವಂತೆ ಯಾರೇ ಇತರ ವ್ಯಕ್ತಿಯಿಂದ ಮುಚ್ಚಳಿಕೆ ತೆಗೆದುಕೊಳ್ಳಬಹುದು;

(ಡಿ) ಈ ಪ್ರಕರಣದ ಉದ್ದೇಶಕ್ಕಾಗಿ, ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟನ ಅಥವಾ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನ ಎಲ್ಲಾ ಅಧಿಕಾರಗಳನ್ನು ಚಲಾಯಿಸಬಹುದು.

**41. ಗೈರುಹಾಜರಾಗಿರುವ ಸಾಕ್ಷಿಗಳ ಸಾಕ್ಷ್ಯ .**- (1) 40ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಅಧಿವಿಚಾರಣೆಯನ್ನು ನಡೆಸುವಾಗ, ವಸ್ತು ವಿಷಯದ ಸಂಬಂಧದಲ್ಲಿ ಯಾರೇ ಸಾಕ್ಷಿದಾರನ ಸಾಕ್ಷ್ಯವು ಅಗತ್ಯವಿರುವಾಗಲೆಲ್ಲ, ಈ ಅಧ್ಯಾಯದ ಮೇರೆಗೆ ತನಿಖೆಯನ್ನು ಮಾಡುವ ಯಾವುದೇ ನ್ಯಾಯಾಲಯದ ಮುಂದೆ ಅದೇ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಅವನು ಈ ಹಿಂದೆ ನೀಡಿರುವ ಯಾವುದೇ ಸಾಕ್ಷ್ಯವು, ಅದನ್ನು ಅಂಥ ನ್ಯಾಯಾಲಯದ ಮ್ಯಾಜಿಸ್ಟ್ರೇಟನು ಅಥವಾ ಪೀಠಾಸೀನ ನ್ಯಾಯಾಧೀಶನು ಸಹಿ ಹಾಕಿ ಅಧಿಪ್ರಮಾಣಿಸಿದರೆ ಅದನ್ನು,-

(ಎ) ಯಾವ ನ್ಯಾಯಾಲಯದ ಮುಂದೆ ಅಧಿವಿಚಾರಣೆಯು ನಡೆಯುವುದೋ ಅದರ ಅಧಿಕಾರ ವ್ಯಾಪ್ತಿಯೊಳಗೆ ಆ ಸಾಕ್ಷಿದಾರನನ್ನು ಕಂಡುಹಿಡಿಯಲು ಸಾಧ್ಯವಿಲ್ಲವೆಂದು; ಮತ್ತು

(ಬಿ) ಆಪಾದಿತ ವ್ಯಕ್ತಿಯ ಸಮಕ್ಷಮದಲ್ಲಿ ಸಾಕ್ಷ್ಯವನ್ನು ಕೊಡಲಾಯಿತು ಮತ್ತು ಆಪಾದಿತನು ಸಾಕ್ಷಿದಾರನಿಗೆ ಪಾಟಿ ಸವಾಲು ಹಾಕುವ ಅವಕಾಶ ಹೊಂದಿದ್ದನೆಂದು

- ರುಜುವಾತಾದ ಮೇಲೆ ಸಾಕ್ಷ್ಯವಾಗಿ ಅಂಗೀಕರಿಸಬಹುದು.

(2) ಆಪಾದಿತನ ಸಮಕ್ಷಮದಲ್ಲಿ ಸಾಕ್ಷ್ಯವನ್ನು ಕೊಡಲಾಯಿತೆಂದು ಮತ್ತು ಅವನು ಸಾಕ್ಷಿಗಳನ್ನು ಪಾಟೀ ಸವಾಲು ಮಾಡುವ ಅವಕಾಶವನ್ನು ಹೊಂದಿದ್ದನೆಂದು ಅಂಥ ಮ್ಯಾಜಿಸ್ಟ್ರೇಟನು ಅಥವಾ ಪೀಠಾಸೀನ ನ್ಯಾಯಾಧೀಶನು ಸಹಿ ಮಾಡಿ ನೀಡಿದ ಪ್ರಮಾಣಪತ್ರವು, ತದ್ವಿರುದ್ಧವಾದುದನ್ನು ಸಾಬೀತುಪಡಿಸಿದ ಹೊರತು, ಅದನ್ನು ಹಾಗೆ ಮಾಡಲಾಯಿತೆಂಬ ಮತ್ತು ಆಪಾದಿತನು ಅಂಥ ಅವಕಾಶವನ್ನು ಹೊಂದಿದ್ದನೆಂಬ ಬಗ್ಗೆ ಪರ್ಯಾಪ್ತ ಸಾಕ್ಷ್ಯವಾಗಿರತಕ್ಕದ್ದು.

**42. ನ್ಯಾಯಾಲಯವು ರಾಜ್ಯ ಸರ್ಕಾರಕ್ಕೆ ವರದಿ ಮಾಡುವುದು.-** ನ್ಯಾಯಾಲಯವು ಈ ಅಧ್ಯಾಯದ ಮೇರೆಗಿನ ಪ್ರತಿಯೊಂದು ತನಿಖೆಯ ಸಂದರ್ಭದಲ್ಲಿ, ಆ ತನಿಖೆಯ ನಿರ್ಣಯಗಳನ್ನು ಕುರಿತ ಒಂದು ಪೂರ್ಣ ವರದಿಯನ್ನು ದಾಖಲು ಮಾಡಿಕೊಂಡ ಸಾಕ್ಷ್ಯ ಹಾಗೂ ಯಾರೇ ನಿರ್ಧಾರಕನ ಲಿಖಿತ ಅಭಿಪ್ರಾಯದ ಜೊತೆ ರಾಜ್ಯ ಸರ್ಕಾರಕ್ಕೆ ಕಳುಹಿಸಿ ಕೊಡತಕ್ಕದ್ದು.

**43. ನ್ಯಾಯಾಲಯವು ಮೌಲ್ಯ ನಿರ್ಣಾಯಕದಾರರಿದ್ದಾಗ್ಯೂ ಸ್ವತಂತ್ರವಾಗಿ ಅಧಿಕಾರಗಳನ್ನು ಚಲಾಯಿಸುವುದು.-** ಈ ಅಧ್ಯಾಯದ ಮೇರೆಗೆ ತನಿಖೆಯನ್ನು ಮಾಡುವ ನ್ಯಾಯಾಲಯವು 37ನೇ ಪ್ರಕರಣದ ಮೇರೆಗೆ ಮೌಲ್ಯ ನಿರ್ಧಾರಕನ ಅಥವಾ ಮೌಲ್ಯ ನಿರ್ಧಾರಕರನ್ನು ನೇಮಿಸಿದಾಗ್ಯೂ, ಈ ಅಧಿನಿಯಮದ ಮೂಲಕ ಅಂಥ ನ್ಯಾಯಾಲಯಕ್ಕೆ ಪ್ರದಾನ ಮಾಡಲಾದ ಎಲ್ಲ ಅಧಿಕಾರಗಳನ್ನು ಆ ನ್ಯಾಯಾಲಯವು ಮಾತ್ರವೇ ಚಲಾಯಿಸತಕ್ಕದ್ದು.

**44. ಯಂತ್ರಚಾಲಿತ ನೌಕೆಯಲ್ಲಿ ಉಂಟಾದ ಆಸ್ಫೋಟದ ಕಾರಣಗಳ ಬಗ್ಗೆ ತನಿಖೆಗಳನ್ನು ನಡೆಸುವಂತೆ ನಿರ್ದೇಶಿಸಲು ರಾಜ್ಯ ಸರ್ಕಾರದ ಅಧಿಕಾರ.-** (1) ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಯಾವುದೇ ಆಸ್ಫೋಟ ಉಂಟಾದಾಗ, ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅದು ನೇಮಿಸಬಹುದಾದಂಥ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಆ ಆಸ್ಫೋಟನೆಯ ಕಾರಣವನ್ನು ಕುರಿತು ತನಿಖೆ ನಡೆಸುವಂತೆ ನಿರ್ದೇಶಿಸಬಹುದು.

(2) ಹಾಗೆ ನೇಮಕಗೊಂಡ ವ್ಯಕ್ತಿ ಅಥವಾ ವ್ಯಕ್ತಿಗಳು, ತನಿಖೆಯ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲ ಕೆಲಸಗಾರರು ಮತ್ತು ಕಾರ್ಮಿಕರೊಂದಿಗೆ ಯಂತ್ರಚಾಲಿತ ನೌಕೆಯ ಒಳಗೆ ಅಥವಾ ಅದರ ಮೇಲೆ ಪ್ರವೇಶಿಸಬಹುದು ಮತ್ತು ಯಂತ್ರಚಾಲಿತ ನೌಕೆಯ ಅದರ ಯಂತ್ರ ಸಾಮಗ್ರಿಯ ಯಾವುದೇ ಭಾಗವನ್ನು ತೆಗೆದುಹಾಕಬಹುದು ಮತ್ತು ಅವನ ಅಥವಾ ಅವರ ಅಭಿಪ್ರಾಯದಲ್ಲಿ ಆ ಆಸ್ಫೋಟ ಯಾವ ಕಾರಣದಿಂದ ಉಂಟಾಯಿತು ಎಂಬ ಬಗ್ಗೆ ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

(3) ಈ ಪ್ರಕರಣದ ಮೇರೆಗೆ ತನಿಖೆಯನ್ನು ಮಾಡುವ ಪ್ರತಿಯೊಬ್ಬ ವ್ಯಕ್ತಿಯನ್ನು ಭಾರತ ದಂಡ ಸಂಹಿತೆಯ ಅರ್ಥವ್ಯಾಪ್ತಿಯೊಳಗೆ ಒಬ್ಬ ಲೋಕನೌಕರನೆಂಬುದಾಗಿ ಭಾವಿಸತಕ್ಕದ್ದು.

## ಅಧ್ಯಾಯ - IVಎ

## ನೌಕಾ ಸಂಚಾರದಲ್ಲಿನ ಅಡ್ಡಿಗಳನ್ನು ಮತ್ತು ಅದೇ ಬಗೆಯ ಅಪಾಯಗಳನ್ನು ತೆಗೆದುಹಾಕುವುದು

**44ಎ. ನೌಕಾ ಸಂಚಾರಕ್ಕೆ ಅಡ್ಡಿಯಾಗುವ ಭಗ್ನಾವಶೇಷಗಳನ್ನು ಮೇಲಕ್ಕೆತ್ತುವುದು ಅಥವಾ ತೆಗೆದುಹಾಕುವುದು, ಇತ್ಯಾದಿ.-** (1) ಯಾವುದೇ ಯಂತ್ರಚಾಲಿತ ನೌಕೆಯು ಅಥವಾ ಇತರ ನೌಕೆಯು ಯಾವುದೇ ಒಳನಾಡು ಜಲಮಾರ್ಗದಲ್ಲಿ ಭಗ್ನವಾಗಿ ಅಥವಾ ಇಕ್ಕಟ್ಟಿಗೆ ಸಿಕ್ಕಿ ಅಥವಾ ಮುಳುಗಿದ್ದು ಸುರಕ್ಷಾ ಮತ್ತು ಅನುಕೂಲಕರ ನೌಕಾ ಸಂಚಾರಕ್ಕೆ ಅಥವಾ ಒಳನಾಡು ಜಲಮಾರ್ಗ ಅಥವಾ ನಿಲ್ದಾಣ ಸ್ಥಳದ ಅಥವಾ ಹಡಗು ಹತ್ತುವ ಸ್ಥಳದ ಅಥವಾ ಅದರ ಭಾಗದ ಉಪಯೋಗಕ್ಕೆ ಅಡಚಣೆ, ಅಡ್ಡಿ ಅಥವಾ ಅಪಾಯವಾದರೆ ಅಥವಾ ಆಗುವ ಸಂಭವವಿದ್ದರೆ, ರಾಜ್ಯ ಸರ್ಕಾರವು ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಧಿಕಾರ ನೀಡಿದ (ಈ ಅಧ್ಯಾಯದಲ್ಲಿ ಇನ್ನು ಮುಂದೆ ಸಕ್ಷಮ ಅಧಿಕಾರಿ ಎಂದು ಉಲ್ಲೇಖಿಸಲಾಗುವ) ಯಾರೇ ಅಧಿಕಾರಿಯು ಸನ್ನಿವೇಶಗಳಿಗೆ ತಕ್ಕ ಹಾಗೆ ನೌಕೆಯನ್ನು ಮೇಲೆತ್ತುವಂತೆ ಅಥವಾ ಅವುಗಳನ್ನು ತೆಗೆದುಹಾಕುವಂತೆ, ಒಡೆದು ಹಾಕುವಂತೆ ಅಥವಾ ಬೇರೆ ರೀತಿಯಲ್ಲಿ ನಾಶಪಡಿಸುವಂತೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ, ಕಾರ್ಯನಿರ್ವಹಿಸುತ್ತಿರುವ ಸಕ್ಷಮ ಅಧಿಕಾರಿಯು, ವಶಪಡಿಸಿಕೊಂಡ ಯಾವುದೇ ಸ್ವತ್ತನ್ನು ಯಾರಾದರೂ ಕ್ಲೇಮು ಮಾಡದಿದ್ದರೆ ಅಥವಾ ಅದನ್ನು ಕ್ಲೇಮು ಮಾಡುವ ವ್ಯಕ್ತಿಯು ಆ ಉಪಪ್ರಕರಣದ ಮೇರೆಗೆ ಸಕ್ಷಮ ಅಧಿಕಾರಿಯು ವಹಿಸಿದ ಯುಕ್ತ ವೆಚ್ಚಗಳನ್ನು ಮತ್ತು ಅಂಥ ವೆಚ್ಚಗಳ ಮೊಬಲಗಿನ ಶೇಕಡಾ ಇಪ್ಪತ್ತೈದರಷ್ಟು ಹೆಚ್ಚಿನ ಮೊತ್ತವನ್ನು ಸಂದಾಯ ಮಾಡಲು ವಿಫಲನಾದರೆ ಸಕ್ಷಮ ಅಧಿಕಾರಿಯು ಆ ಸ್ವತ್ತು ನಾಶವಾಗುವ ಸ್ವರೂಪದ್ದಾಗಿದ್ದರೆ, ಅದನ್ನು ಆ ಕೂಡಲೇ ಮತ್ತು ನಾಶವಾಗದ ಸ್ವರೂಪದ್ದಾದರೆ, ಅದನ್ನು ವಶಪಡಿಸಿಕೊಂಡ ತರುವಾಯ ಎರಡು ತಿಂಗಳಿಗಿಂತ ಕಡಿಮೆ ಇಲ್ಲದ ಅವಧಿಯ ಯಾವುದೇ ಕಾಲದಲ್ಲಿ ಆ ಸ್ವತ್ತನ್ನು ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಬಹುದು.

(3) ವೆಚ್ಚಗಳನ್ನು ಮತ್ತು ಮೇಲೆ ಹೇಳಿದ ಹೆಚ್ಚಿನ ಮೊತ್ತವನ್ನು ಸ್ವತ್ತಿನ ಮಾರಾಟದ ಉತ್ಪತ್ತಿಯಿಂದ ಸಕ್ಷಮ ಅಧಿಕಾರಿಗೆ ಸಂದಾಯ ಮಾಡತಕ್ಕದ್ದು ಮತ್ತು ಶಿಲ್ಕನ್ನು ಸ್ವಾಧೀನ ಮಾಡಿಕೊಂಡ ಸ್ವತ್ತಿಗೆ ಹಕ್ಕುಳ್ಳ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು ಅಥವಾ ಅಂಥ ವ್ಯಕ್ತಿ ಕಂಡುಬರದಿದ್ದರೆ ಮತ್ತು ಶಿಲ್ಕನ್ನು ಕ್ಲೇಮು ಮಾಡದಿದ್ದರೆ, ತದನಂತರ ಅದರ ಬಗ್ಗೆ ತನ್ನ ಹಕ್ಕನ್ನು ಸ್ಥಾಪಿಸುವ ವ್ಯಕ್ತಿಗೆ ಅದನ್ನು ಬಡ್ಡಿ ಇಲ್ಲದೆ ಸಂದಾಯ ಮಾಡುವುದಕ್ಕಾಗಿ ಠೇವಣಿ ಇರಿಸತಕ್ಕದ್ದು:

ಪರಂತು, ಆ ವ್ಯಕ್ತಿಯು ಮಾರಾಟದ ದಿನಾಂಕದಿಂದ ಮೂರು ವರ್ಷಗಳೊಳಗೆ ಅವನ ಕ್ಲೇಮನ್ನು ಮಾಡಿರಬೇಕು.

(4) ಸ್ವತ್ತಿನ ಮಾರಾಟದ ಉತ್ಪತ್ತಿಯು, ವೆಚ್ಚಗಳನ್ನು ಮತ್ತು ಮೇಲೆ ಹೇಳಿದ ಹೆಚ್ಚಿನ ಮೊತ್ತವನ್ನು ಭರಿಸಲು ಸಾಕಾಗದಿದ್ದರೆ, ನೌಕೆಯು ಭಗ್ನವಾದ, ಇಕ್ಕಟ್ಟಿಗೆ ಸಿಕ್ಕಿದ ಅಥವಾ ಮುಳುಗಿಹೋದ ಕಾಲದಲ್ಲಿ ಆ ನೌಕೆಯ ಒಡೆಯನಾಗಿದ್ದವನು ಆ ಕೊರತೆಯನ್ನು ತಗಾದೆ ಮಾಡಿದ ಮೇಲೆ ಸಕ್ಷಮ ಅಧಿಕಾರಿಗೆ ಸಂದಾಯ ಮಾಡಲು ಬದ್ಧನಾಗತಕ್ಕದ್ದು, ಮತ್ತು ಹಾಗೆ ತಗಾದೆ ಮಾಡಿದ ಮೇಲೆ ಒಂದು ತಿಂಗಳೊಳಗೆ ಕೊರತೆಯನ್ನು ಸಂದಾಯ ಮಾಡದಿದ್ದರೆ, ಸಕ್ಷಮ ಅಧಿಕಾರಿಯು, ಆ ಕೊರತೆಯು ಭೂಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ಅಂಥ ಒಡೆಯನಿಂದ ಅದನ್ನು ವಸೂಲಿ ಮಾಡಬಹುದು.

**44ಬಿ. ಒಳನಾಡು ಜಲಮಾರ್ಗದಲ್ಲಿನ ಅಡ್ಡಿಗಳನ್ನು ತೆಗೆದುಹಾಕುವುದು.–** (1) ಸಕ್ಷಮ ಅಧಿಕಾರಿಯು, ಒಳನಾಡು ಜಲಮಾರ್ಗದ ಯಾವುದೇ ಭಾಗದಲ್ಲಿ ತೇಲುತ್ತಿರುವ ಅಥವಾ ಅವನ ಅಭಿಪ್ರಾಯದಲ್ಲಿ ನೌಕೆಯ ಮುಕ್ತ ಯಾನಕ್ಕೆ ಅಥವಾ ಯಾವುದೇ ಹಡಗು ಇಳಿದಾಣ ಸ್ಥಳ, ಹತ್ತುವ ಸ್ಥಳ ಅಥವಾ ಅದರ ಭಾಗದ ಕಾನೂನು ಸಮ್ಮತ ಉಪಯೋಗಕ್ಕೆ ಅಡ್ಡಿ ಉಂಟುಮಾಡುವ ಅಥವಾ ತಡೆಯುಂಟು ಮಾಡುವ ಯಾವುದೇ ಚೌಬೀನೆಯನ್ನು, ತೆಪ್ಪವನ್ನು ಅಥವಾ ಇತರ ವಸ್ತುವನ್ನು ತೆಗೆದುಹಾಕಬಹುದು ಅಥವಾ ತೆಗೆಸಿಹಾಕಬಹುದು.

(2) ಅಂಥ ಚೌಬೀನೆಯ, ತೆಪ್ಪದ ಅಥವಾ ಇತರ ವಸ್ತುವಿನ ಒಡೆಯನು, ಅದನ್ನು ತೆಗೆದುಹಾಕುವ ಯುಕ್ತ ವೆಚ್ಚಗಳನ್ನು ಸಂದಾಯ ಮಾಡಲು ಬದ್ಧನಾಗತಕ್ಕುದು ಮತ್ತು ಅಂಥ ಒಡೆಯನು ಅಥವಾ ಯಾರೇ ಇತರ ವ್ಯಕ್ತಿಯು, ಕಾನೂನುಬದ್ಧ ಕಾರಣವಿಲ್ಲದೆ ಅಂಥ ಯಾವುದೇ ಅಡ್ಡಿಯನ್ನು ಅಥವಾ ತಡೆಯನ್ನು ಉಂಟುಮಾಡಿದ್ದರೆ ಅಥವಾ ಅಂಥ ಮುಕ್ತ ನೌಕಾಯಾನ ಅಥವಾ ಕಾನೂನು ಸಮ್ಮತ ಉಪಯೋಗಕ್ಕೆ ಬಾಧಕವಾಗುವಂಥ ಅಥವಾ ಬಾಧಕವಾಗಬಹುದಾದ ಸಂಭವವಿರುವ ಯಾವುದೇ ಸಾರ್ವಜನಿಕ ಉಪದ್ರವಕ್ಕೆ ಕಾರಣನಾದರೆ ಅವನು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ ದಂಡನೀಯನಾಗತಕ್ಕದ್ದು.

(3) ಸಕ್ಷಮ ಅಧಿಕಾರಿಯು ಅಥವಾ ಅಪರಾಧಕ್ಕೆ ಸಂಬಂಧಿಸಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಯಾರೇ ಮ್ಯಾಜಿಸ್ಟ್ರೇಟನು ಯಾವುದೇ ಅಂಥ ಉಪದ್ರವವನ್ನು ಕೊನೆಗೊಳಿಸುವಂತೆ ಮಾಡತಕ್ಕದ್ದು.

**44ಸಿ. ತೆಗೆದು ಹಾಕುವುದಕ್ಕೆ ತಗುಲಿದ ವೆಚ್ಚಗಳ ವಸೂಲಿ.–** ಅಂಥ ಯಾವುದೇ ಚೌಬೀನೆಯ, ತೆಪ್ಪದ ಅಥವಾ ಇತರ ವಸ್ತುವಿನ ಒಡೆಯನು ಅಥವಾ ಅಂಥ ಯಾವುದೇ ಅಡ್ಡಿಗೆ, ತಡೆಗೆ ಅಥವಾ ಸಾರ್ವಜನಿಕ ಉಪದ್ರವಕ್ಕೆ ಕಾರಣನಾದ ಯಾರೇ ವ್ಯಕ್ತಿಯು, ಅದನ್ನು ತೆಗೆದುಹಾಕಲು ವಹಿಸಿದ ಯುಕ್ತ ವೆಚ್ಚಗಳನ್ನು, ತಗಾದೆಯ ತರುವಾಯ ಒಂದು ವಾರದೊಳಗೆ ಅಥವಾ ಹಾಗೆ ತೆಗೆದುಹಾಕಿರುವುದನ್ನು ರಾಜಪತ್ರದಲ್ಲಿ ಅಧಿಸೂಚಿಸಿದ ತರುವಾಯ ಹದಿನಾಲ್ಕು ದಿವಸಗಳೊಳಗೆ ಅಥವಾ ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶಿಸಬಹುದಾದಂಥ ಇತರ ರೀತಿಯಲ್ಲಿ ಸಂದಾಯ ಮಾಡಲು ನಿರ್ಲಕ್ಷಿಸಿದರೆ, ಸಕ್ಷಮ ಅಧಿಕಾರಿಯು, ಹಾಗೆ ತೆಗೆದು ಹಾಕಿದ ಚೌಬೀನೆ, ತೆಪ್ಪ ಅಥವಾ ಇತರ ವಸ್ತುಗಳು ಅಥವಾ ಸಾರ್ವಜನಿಕ ಉಪದ್ರವದ ಸಾಮಗ್ರಿಗಳನ್ನು ಅಥವಾ ಅದರ ಪೈಕಿ ಅವಶ್ಯವಿರಬಹುದಾದಷ್ಟನ್ನು ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡುವ ವ್ಯವಸ್ಥೆ ಮಾಡಬಹುದು, ಮತ್ತು ಆ ಮಾರಾಟದ ಉತ್ಪತ್ತಿಯೊಳಗಿಂದ ಅಂಥ ತೆಗೆದುಹಾಕುವಿಕೆಗೆ ಮತ್ತು ಮಾರಾಟಕ್ಕೆ ತಗುಲಿದ ಎಲ್ಲ ವೆಚ್ಚಗಳನ್ನು ತನ್ನ ಬಳಿ ಇಟ್ಟುಕೊಳ್ಳಬಹುದು ಮತ್ತು ಅಂಥ ಉತ್ಪತ್ತಿಗಳ ಹೆಚ್ಚುವರಿಯನ್ನು ಅಥವಾ ಆ ವಸ್ತುವಿನ ಅಥವಾ ಸಾಮಗ್ರಿಗಳ ಮಾರಾಟವಾಗದೇ ಉಳಿದಿರುವಷ್ಟು ಭಾಗವನ್ನು, ಅದನ್ನು ಸ್ವೀಕರಿಸಲು ಹಕ್ಕುಳ್ಳವನಾದ ವ್ಯಕ್ತಿಗೆ ಸಂದಾಯ ಮಾಡತಕ್ಕುದು ಅಥವಾ ಒಪ್ಪಿಸತಕ್ಕದ್ದು ಮತ್ತು ಅಂಥ ವ್ಯಕ್ತಿಗಳು ಕಂಡುಬಾರದಿದ್ದಲ್ಲಿ, ರಾಜ್ಯ ಸರ್ಕಾರವು ನಿರ್ದೇಶಿಸುವಂಥ ರೀತಿಯಲ್ಲಿ ಅದನ್ನು ಇಡುವಂತೆ ಅಥವಾ ಠೇವಣಿ

ಮಾಡುವಂತೆ ವ್ಯವಸ್ಥೆ ಮಾಡತಕ್ಕದ್ದು ಮತ್ತು ಅಗತ್ಯವಿದ್ದರೆ ಅದನ್ನು ಇಟ್ಟುಕೊಳ್ಳುವ ವೆಚ್ಚಗಳನ್ನು ಆ ವಸ್ತುವಿನ ಅಥವಾ ಸಾಮಗ್ರಿಗಳ ಮಾರಾಟವಾಗದೆ ಉಳಿಯಬಹುದಾದಷ್ಟನ್ನು ಮಾರಾಟ ಮಾಡಲು ಅಥವಾ ಇನ್ನೂ ಹೆಚ್ಚಿನ ಮಾರಾಟ ಮಾಡಲು ತಗಲುವ ವೆಚ್ಚಗಳನ್ನು ಕಾಲಕಾಲಕ್ಕೆ ವಸೂಲು ಮಾಡಬಹುದು.

**44ಡಿ. ಕಾನೂನು ಸಮ್ಮತ ಅಡ್ಡಿಯನ್ನು ತೆಗೆದುಹಾಕುವುದು.**- (1) ಯಾವುದೇ ಒಳನಾಡು ಜಲಮಾರ್ಗದಲ್ಲಿನ ನೌಕಾಯಾನಕ್ಕೆ ಯಾವುದೇ ಅಡ್ಡಿಯನ್ನು ಅಥವಾ ತಡೆಯನ್ನು ಕಾನೂನುಸಮ್ಮತವಾಗಿ ಮಾಡಿರುವಲ್ಲಿ ಅಥವಾ ಅಂಥ ಅಡ್ಡಿಯು ಅಥವಾ ತಡೆಯು ದೀರ್ಘ ಕಾಲದಿಂದಲೂ ಮುಂದುವರಿದಿರುವ ಕಾರಣದಿಂದಾಗಿ ಅಥವಾ ಬೇರೆ ಕಾರಣದಿಂದಾಗಿ ಅದು ಕಾನೂನು ಸಮ್ಮತವಾಗಿರುವಲ್ಲಿ, ಸಕ್ಷಮ ಅಧಿಕಾರಿಯು, ರಾಜ್ಯ ಸರ್ಕಾರದ ಮಾಹಿತಿಗಾಗಿ ಅದನ್ನು ವರದಿ ಮಾಡತಕ್ಕದ್ದು ಮತ್ತು ರಾಜ್ಯ ಸರ್ಕಾರದ ಮಂಜೂರಾತಿಯನ್ನು ಪಡೆದು, ಅದನ್ನು ತೆಗೆದು ಹಾಕುವಂತೆ ಅಥವಾ ಬದಲಾಯಿಸುವಂತೆ ಮಾಡತಕ್ಕದ್ದು ಮತ್ತು ಅಂಥ ತೆಗೆದುಹಾಕುವಿಕೆ ಅಥವಾ ಬದಲಾವಣೆಯಿಂದ ಹಾನಿಯನ್ನು ಅನುಭವಿಸುವ ವ್ಯಕ್ತಿಗೆ ಯುಕ್ತ ನಷ್ಟ ಪರಿಹಾರವನ್ನು ನೀಡತಕ್ಕದ್ದು.

(2) ಅಂಥ ನಷ್ಟ ಪರಿಹಾರದಿಂದ ಅಥವಾ ಅದಕ್ಕೆ ಸಂಬಂಧಿಸಿ ಉದ್ಭವಿಸುವ ಯಾವುದೇ ವಿವಾದವನ್ನು ಸಾರ್ವಜನಿಕ ಉದ್ದೇಶಗಳಿಗಾಗಿ ಅಗತ್ಯವಾಗಿರುವ ಭೂ ಪ್ರಕರಣಗಳಲ್ಲಿನ ವಿವಾದಗಳನ್ನು ನಿರ್ಧರಿಸುವಂಥ ಕಾನೂನಿಗೆ ಅನುಸಾರವಾಗಿ ನಿರ್ಧರಿಸತಕ್ಕದ್ದು.

**44ಇ. ಸರ್ಕಾರಿ ಲಂಗರುಗಳಿಗೆ ತೊಡರಿಕೊಳ್ಳುವುದು.**- (1) ಯಾವುದೇ ಯಂತ್ರಚಾಲಿತ ನೌಕೆಯು, ಒಳನಾಡು ಜಲಮಾರ್ಗದ ಯಾವುದೇ ಭಾಗದಲ್ಲಿ ರಾಜ್ಯ ಸರ್ಕಾರ ಅಥವಾ ಅದರ ಪ್ರಾಧಿಕಾರವು ಇಟ್ಟಿರುವ ಯಾವುದೇ ತೇಲುವೆಗಳಲ್ಲಿ, ಅಥವಾ ಲಂಗರುಗಳಲ್ಲಿ ಸಿಕ್ಕಿಕೊಂಡರೆ ಅಥವಾ ತೊಡರಿಕೊಂಡರೆ, ಅಂಥ ನೌಕೆಯ ನಾಯಕನಾಗಲಿ ಅಥವಾ ಯಾರೇ ಇತರ ವ್ಯಕ್ತಿಯಾಗಲಿ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಹೊರತು ಸಕ್ಷಮ ಅಧಿಕಾರಿಯ ಸಹಾಯವಿಲ್ಲದೆ ಅದರ ಸಿಕ್ಕನ್ನು ಬಿಡಿಸುವ ಅಥವಾ ತೊಡಕನ್ನು ತೆಗೆದುಹಾಕುವ ಉದ್ದೇಶಕ್ಕಾಗಿ ಆ ತೇಲುವೆಗಳನ್ನು ಅಥವಾ ಲಂಗರನ್ನು ಎತ್ತಿಹಾಕತಕ್ಕದ್ದಲ್ಲ.

(2) ಸಕ್ಷಮ ಅಧಿಕಾರಿಯು, ಅಂಥ ದುರ್ಘಟನೆಯ ಮಾಹಿತಿಯನ್ನು ಸ್ವೀಕರಿಸಿದ ತಕ್ಷಣ ಅಂಥ ನೌಕೆಯನ್ನು ಬಿಡಿಸಲು ನೆರವು ನೀಡತಕ್ಕದ್ದು ಮತ್ತು ಆ ಬಗ್ಗೆ ಅಧೀಕ್ಷಣೆ ನಡೆಸತಕ್ಕದ್ದು ಮತ್ತು ನೌಕೆಯನ್ನು ಬಿಡಿಸುವ ಬಗ್ಗೆ ವಹಿಸಿರಬಹುದಾದಂಥ ಯುಕ್ತ ವೆಚ್ಚಗಳನ್ನು ತಗಾದೆ ಮಾಡಿದ ಮೇಲೆ ಅದರ ನಾಯಕನು ಸಂದಾಯ ಮಾಡತಕ್ಕದ್ದು.

(3) ಈ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಅಪರಾಧವನ್ನು ಎಸಗುವ ಯಾರೇ ನಾಯಕನು ಅಥವಾ ಇತರ ವ್ಯಕ್ತಿಯು ಅಂಥ ಪ್ರತಿಯೊಂದು ಅಪರಾಧಕ್ಕಾಗಿ, ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

## ಅಧ್ಯಾಯ -V

### ಈ ಅಧಿನಿಯಮದ ಮೇರೆಗೆ ನೀಡಿದ ಪ್ರಮಾಣ ಪತ್ರಗಳ ಅಮಾನತು ಅಥವಾ ರದ್ದಿಯಾತಿ

**45. ಕೆಲವು ಸಂದರ್ಭಗಳಲ್ಲಿ ಪ್ರಮಾಣ ಪತ್ರಗಳನ್ನು ಅಮಾನತುಗೊಳಿಸಲು ಅಥವಾ ರದ್ದುಪಡಿಸಲು ರಾಜ್ಯ ಸರ್ಕಾರದ ಅಧಿಕಾರ.**- ಅಧ್ಯಾಯ IIIರ ಮೇರೆಗೆ ನೀಡಲಾದ ಯಾವುದೇ ಪ್ರಮಾಣಪತ್ರ ಅಥವಾ ಮಾಡಿದ ಯಾವುದೇ ಹಿಂಬರಹವನ್ನು, ಯಾವ ರಾಜ್ಯದಲ್ಲಿ ಪ್ರಮಾಣ ಪತ್ರವನ್ನು ನೀಡಲಾಯಿತೋ ಅಥವಾ ಅಂಥ ಸಂದರ್ಭಾನುಸಾರ ಯಾವ ರಾಜ್ಯದ ಸಂಬಂಧದಲ್ಲಿ ಹಿಂಬರಹವನ್ನು ಮಾಡಲಾಯಿತೋ ಆ ರಾಜ್ಯ ಸರ್ಕಾರವು, ಈ ಕೆಳಕಂಡ ಸಂದರ್ಭಗಳಲ್ಲಿ ಅಮಾನತುಗೊಳಿಸಬಹುದು ಅಥವಾ ರದ್ದುಪಡಿಸಬಹುದು:-

(ಎ) ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ತನಿಖೆಯ ತರುವಾಯ ನ್ಯಾಯಾಲಯವು ಅಂಥ ಪ್ರಮಾಣಪತ್ರದ ಧಾರಕನ ತಪ್ಪುಕೃತ್ಯ ಅಥವಾ ತಪ್ಪಿತದಿಂದ ಯಾವುದೇ ನೌಕೆಯ ಭಗ್ನವು ಅಥವಾ ಪರಿತ್ಯಾಗವು ಅಥವಾ ನಷ್ಟವು ಅಥವಾ ಹಾನಿಯು ಅಥವಾ ಪ್ರಾಣಹಾನಿಯು ಉಂಟಾಗಿದೆಯೆಂದು, ಅಥವಾ ಅಂಥ ಪ್ರಮಾಣಪತ್ರದ ಧಾರಕನು ಸಕ್ಷಮನಾಗಿಲ್ಲವೆಂದು ಅಥವಾ ಕುಡಿತದ, ಉಪದ್ರವದ ಅಥವಾ ಇತರ ದುರ್ನಡತೆಯ ಯಾವುವೇ ಒರಟು ಕೃತ್ಯದ ತಪ್ಪಿತಸ್ಥನಾಗಿರುವನೆಂದು ವರದಿ ಮಾಡಿದರೆ; ಅಥವಾ

(ಬಿ) ಅಂಥ ಪ್ರಮಾಣಪತ್ರದ ಧಾರಕನು, ಯಾವುದೇ ಜಾಮೀನಿನ ಮೇಲೆ ಬಿಡಲಾಗದ ಅಪರಾಧದ ಸಂಬಂಧದಲ್ಲಿ ಅಪರಾಧಿಯೆಂದು ನಿರ್ಣೀತನಾಗಿದ್ದಾನೆಂದು ಸಾಬೀತಾದರೆ; ಅಥವಾ

(ಬಿಬಿ) ಅಂಥ ಪ್ರಮಾಣಪತ್ರದ ಧಾರಕನು, ಅವನ ನೌಕೆಯನ್ನು ತೊರೆದು ಹೋಗಿರುವನೆಂದು ಅಥವಾ ರಜೆ ಹಾಕದೆ ಮತ್ತು ಸಾಕಷ್ಟು ಕಾರಣವಿಲ್ಲದೆ ಅವನ ನೌಕೆಯಿಂದ ಅಥವಾ ಅವನ ಕರ್ತವ್ಯದಿಂದ ಗೈರು ಹಾಜರಾಗಿದ್ದನೆಂದು ಸಾಬೀತಾದರೆ; ಅಥವಾ

(ಸಿ) ಎರಡನೇ ದರ್ಜೆಯ ನಾಯಕನಾಗಿ ಅಥವಾ ಸೆರಾಂಗ್‌ನಾಗಿ ಅಥವಾ ಇಂಜಿನ್ ಚಾಲಕನಾಗಿ, ಸಕ್ಷಮತಾ ಅಥವಾ ಸೇವಾ ಪ್ರಮಾಣ ಪತ್ರವನ್ನು ಹೊಂದಿರುವ ಒಬ್ಬ ವ್ಯಕ್ತಿಯ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ಅಂಥ ವ್ಯಕ್ತಿಯು, ಸಂದರ್ಭಾನುಸಾರ, ಎರಡನೇ ದರ್ಜೆಯ ನಾಯಕನಾಗಿ ಅಥವಾ ಸೆರಾಂಗ್‌ನಾಗಿ ಅಥವಾ ಇಂಜಿನ್ ಚಾಲಕನಾಗಿ ಕಾರ್ಯ ನಿರ್ವಹಿಸಲು ಅನರ್ಹನಾಗಿದ್ದರೆ ಅಥವಾ ಅನರ್ಹನಾದರೆ:

ಪರಂತು, ರಾಜ್ಯ ಸರ್ಕಾರವು, ತನಿಖೆಯ ಪ್ರಾರಂಭಕ್ಕೆ ಮುಂಚೆ 34ನೇ ಪ್ರಕರಣ ಅಥವಾ ಸಂದರ್ಭಾನುಸಾರ 35ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಪ್ರಕರಣದ ವರದಿಯ ಅಥವಾ ವಿವರಣೆಯ ಒಂದು ಪ್ರತಿಯನ್ನು ಪ್ರಮಾಣಪತ್ರ ಧಾರಕನಿಗೆ ಒದಗಿಸಲಾಗಿದೆ ಎಂದು ಮನದಟ್ಟು ಮಾಡಿಕೊಂಡ ಹೊರತು, (ಎ) ಖಂಡದ ಮೇರೆಗೆ, ಪ್ರಮಾಣ ಪತ್ರವನ್ನು ಅಥವಾ ಹಿಂಬರಹವನ್ನು ಅಮಾನತ್ತುಗೊಳಿಸತಕ್ಕದ್ದಲ್ಲ ಅಥವಾ ರದ್ದುಪಡಿಸತಕ್ಕದ್ದಲ್ಲ.

**46. ಅಮಾನತ್ತುಗೊಳಿಸಲಾದ ಅಥವಾ ರದ್ದುಪಡಿಸಲಾದ ಪ್ರಮಾಣ ಪತ್ರವನ್ನು ಒಪ್ಪಿಸಲು ಬಾಧ್ಯತೆ.–** ಈ ಅಧ್ಯಾಯದ ಮೇರೆಗೆ ಯಾವ ವ್ಯಕ್ತಿಯ ಪ್ರಮಾಣ ಪತ್ರವನ್ನು ಅಮಾನತುಗೊಳಿಸಲಾಗಿದೆಯೋ ಅಥವಾ ರದ್ದುಪಡಿಸಲಾಗಿದೆಯೋ ಅಂಥ ಪ್ರತಿಯೊಬ್ಬ ವ್ಯಕ್ತಿಯು, ಅದನ್ನು ಅಮಾನತುಗೊಳಿಸಿದ ಅಥವಾ ರದ್ದುಪಡಿಸಿದ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿಗೆ ಒಪ್ಪಿಸತಕ್ಕದ್ದು.

**47. ಇತರ ರಾಜ್ಯ ಸರ್ಕಾರಕ್ಕೆ ವರದಿ ಮಾಡುವುದು.–** ಒಂದು ರಾಜ್ಯ ಸರ್ಕಾರವು, ಈ ಅಧ್ಯಾಯದ ಮೇರೆಗೆ ಒಂದು ಹಿಂಬರಹವನ್ನು ಅಮಾನತುಗೊಳಿಸಿದರೆ ಅಥವಾ ರದ್ದುಪಡಿಸಿದರೆ, ಯಾವ ರಾಜ್ಯ ಸರ್ಕಾರದಿಂದ ಅಥವಾ ಯಾವ ರಾಜ್ಯ ಸರ್ಕಾರದ ಪ್ರಾಧಿಕಾರದ ಮೇರೆಗೆ ಆ ಪ್ರಮಾಣ ಪತ್ರವನ್ನು ನೀಡಲಾಗಿತ್ತೋ ಆ ರಾಜ್ಯ ಸರ್ಕಾರಕ್ಕೆ ನಡವಳಿಗಳನ್ನು ಮತ್ತು ಅಮಾನತಿನ ಅಥವಾ ರದ್ದಿಯಾತಿಯ ಸಂಗತಿಯನ್ನು ವರದಿ ಮಾಡತಕ್ಕದ್ದು.

**48. ಅಮಾನತನ್ನು ಅಥವಾ ರದ್ದಿಯಾತಿಯನ್ನು ಹಿಂತೆಗೆದುಕೊಳ್ಳಲು ಮತ್ತು ಹೊಸ ಪ್ರಮಾಣ ಪತ್ರವನ್ನು ನೀಡಲು ರಾಜ್ಯ ಸರ್ಕಾರದ ಅಧಿಕಾರ.–** (1) ಯಾವುದೇ ರಾಜ್ಯ ಸರ್ಕಾರವು, ಯಾವುದೇ ಸಮಯದಲ್ಲಿ, ಈ ಅಧ್ಯಾಯದ ಮೇರೆಗೆ ಅದು ಮಾಡಿರಬಹುದಾದ ಅಮಾನತಿನ ಅಥವಾ ರದ್ದಿಯಾತಿಯ ಯಾವುದೇ ಆದೇಶವನ್ನು ಯಾವುದೇ ಕಾಲದಲ್ಲಿ ಹಿಂತೆಗೆದುಕೊಳ್ಳಬಹುದು ಅಥವಾ ಯಾವ ವ್ಯಕ್ತಿಯ ಪ್ರಮಾಣ ಪತ್ರವನ್ನು ಹಾಗೆ ರದ್ದುಪಡಿಸಲಾಗಿದೆಯೋ ಆ ಯಾರೇ ವ್ಯಕ್ತಿಗೆ ಆ ಸಂಬಂಧದಲ್ಲಿ ಪರೀಕ್ಷೆ ನಡೆಸದೆ ಒಂದು ಹೊಸ ಪ್ರಮಾಣ ಪತ್ರವನ್ನು ನೀಡಬಹುದು.

(2) ಹಾಗೆ ನೀಡಲಾದ ಪ್ರಮಾಣ ಪತ್ರವೂ ಪರೀಕ್ಷೆಯ ನಂತರ, ಈ ಅಧಿನಿಯಮದ ಮೇರೆಗೆ ನೀಡಿದ ಸಕ್ಷಮತಾ ಪ್ರಮಾಣ ಪತ್ರದಂತೆಯೇ ಪರಿಣಾಮವನ್ನು ಹೊಂದಿರತಕ್ಕದ್ದು.

## ಅಧ್ಯಾಯ – VI

## ಒಳನಾಡು ಯಂತ್ರಚಾಲಿತ ನೌಕೆಗಳಲ್ಲಿ ಪ್ರಯಾಣಿಕರನ್ನು ಸಂರಕ್ಷಿಸುವುದು ಮತ್ತು ಒಯ್ಯುವುದು

**49. ಅಪಾಯಕಾರಿ ಸರಕುಗಳೆಂದು ಘೋಷಿಸಲು ರಾಜ್ಯ ಸರ್ಕಾರದ ಅಧಿಕಾರ.–** ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಕ್ಕಾಗಿ, ಯಾವ ಸರಕುಗಳನ್ನು ಅಪಾಯಕಾರಿ ಸರಕುಗಳೆಂದು ಭಾವಿಸತಕ್ಕುದು ಎಂಬುದನ್ನು ಘೋಷಿಸಬಹುದು.

**50. ಅಪಾಯಕಾರಿ ಸರಕುಗಳ ಸಾಗಣೆ.–** (1) ಯಾರೇ ವ್ಯಕ್ತಿಯು,–

(ಎ) ಒಂದು ಒಳನಾಡು ಯಂತ್ರಚಾಲಿತ ನೌಕೆಯ ಒಡೆಯನಿಗೆ ಅಥವಾ ನಾಯಕನಿಗೆ, ಯಾವುದೇ ಅಪಾಯಕಾರಿ ಸರಕುಗಳ ಸ್ವರೂಪವನ್ನು ತಿಳಿಸಿದ ಹೊರತು ಅವುಗಳನ್ನು ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಅವನೊಂದಿಗೆ ಒಯ್ಯತಕ್ಕದ್ದಲ್ಲ, ಅಥವಾ

(ಬಿ) ಅಂಥ ಯಂತ್ರಚಾಲಿತ ನೌಕೆಯಲ್ಲಿ ಯಾವುದೇ ಅಪಾಯಕಾರಿ ಸರಕುಗಳನ್ನು ಸಾಗಿಸುವುದಕ್ಕಾಗಿ, ಅಂಥ ವಿಷಯವನ್ನು ತಿಳಿಸಿದ ಹೊರತು ಮತ್ತು ಸರಕುಗಳನ್ನು ಒಳಗೊಂಡಿರುವ ಪಾರ್ಸಲ್ಲಿನ ಹೊರಭಾಗದ ಮೇಲೆ ಅದರ ಸ್ವರೂಪವನ್ನು ಎದ್ದುಕಾಣುವಂತೆ ಗುರುತು ಮಾಡಿದ ಹೊರತು ಒಪ್ಪಿಸತಕ್ಕದ್ದಲ್ಲ ಅಥವಾ ಕೊಡತಕ್ಕದ್ದಲ್ಲ.

(2) ಒಂದು ಒಳನಾಡು ಯಂತ್ರಚಾಲಿತ ನೌಕೆಯ ಒಡೆಯನು ಅಥವಾ ನಾಯಕನು ಯಂತ್ರಚಾಲಿತ ನೌಕೆಯಲ್ಲಿ ಸಾಗಿಸುವುದಕ್ಕಾಗಿ ತೆಗೆದುಕೊಂಡ, ತನಗೆ ಒಪ್ಪಿಸಲಾದ ಅಥವಾ ಕೊಡಲಾದ ಯಾವುದೇ ಲಗೇಜು ಅಥವಾ ಪಾರ್ಸಲ್ಲು ಅಪಾಯಕಾರಿ ಸರಕುಗಳನ್ನು ಒಳಗೊಂಡಿದೆ ಎಂದು ಸಂಶಯಪಟ್ಟರೆ ಅಥವಾ ಅವನಿಗೆ ಹಾಗೆಂದು ನಂಬಲು ಕಾರಣವಿದ್ದರೆ ಅವನು,–

(i) ಯಂತ್ರಚಾಲಿತ ನೌಕೆಯಲ್ಲಿ ಅದನ್ನು ಸಾಗಿಸಲು ನಿರಾಕರಿಸಬಹುದು; ಅಥವಾ

(ii) ಅದರಲ್ಲಿ ಒಳಗೊಂಡಿರುವ ವಸ್ತುಗಳ ಸ್ವರೂಪವನ್ನು ಗೊತ್ತುಮಾಡಿಕೊಳ್ಳಲು ಅವುಗಳನ್ನು ತೆರೆದು ತೋರಿಸುವಂತೆ ಅಗತ್ಯಪಡಿಸಬಹುದು; ಅಥವಾ

(iii) ಅದನ್ನು ಸಾಗಿಸುವುದಕ್ಕಾಗಿ ಸ್ವೀಕರಿಸಲಾಗಿದ್ದರೆ, ಅದರಲ್ಲಿ ಒಳಗೊಂಡಿರುವ ವಸ್ತುಗಳ ಸ್ವರೂಪದ ಬಗ್ಗೆ ಮನದಟ್ಟು ಮಾಡಿಕೊಳ್ಳುವವರೆಗೂ ಅದರ ರವಾನೆಯನ್ನು ನಿಲ್ಲಿಸಬಹುದು.

**51. ನೌಕೆಯಲ್ಲಿರುವ ಅಪಾಯಕಾರಿ ಸರಕುಗಳನ್ನು ಕೆಳಗೆ ಎಸೆಯಲು ಯಂತ್ರಚಾಲಿತ ನೌಕೆಯ ಒಡೆಯನ ಅಥವಾ ನಾಯಕನ ಅಧಿಕಾರ.**– 50ನೇ ಪ್ರಕರಣವನ್ನು ಉಲ್ಲಂಘಿಸಿ, ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯಲ್ಲಿ, ಯಾವುದೇ ಅಪಾಯಕಾರಿ ಸರಕುಗಳನ್ನು ರವಾನೆಗಾಗಿ ತೆಗೆದುಕೊಂಡಿರುವಲ್ಲಿ ಅಥವಾ ಒಪ್ಪಿಸಿರುವಲ್ಲಿ, ಆ ಯಂತ್ರಚಾಲಿತ ನೌಕೆಯ ಒಡೆಯನು ಅಥವಾ ನಾಯಕನು ಸೂಕ್ತವೆಂದು ಯೋಚಿಸಿದರೆ ಆ ಸರಕುಗಳನ್ನು ಒಳಗೊಂಡಿರುವ ಯಾವುದೇ ಪ್ಯಾಕೇಜ್ ಅಥವಾ ಪಾತ್ರೆಯ ಸಮೇತ ಅವುಗಳನ್ನು ನೌಕೆಯಿಂದಾಚೆ ಎಸೆಯುವಂತೆ ಮಾಡಬಹುದು; ಮತ್ತು ಒಡೆಯನಾಗಲಿ ಅಥವಾ ನಾಯಕನಾಗಲಿ ಹಾಗೆ ಆ ಸರಕುಗಳನ್ನು ನೌಕೆಯಿಂದಾಚೆ ಎಸೆಯಲು ಅವನು ಕಾರಣನಾಗಿರುವ ಸಂಬಂಧದಲ್ಲಿ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ಹೊಣೆಗಾರಿಕೆಗೆ ಗುರಿಯಾಗತಕ್ಕದ್ದಲ್ಲ.

**52. ಅಪಘಾತಗಳಿಂದ ಒಳನಾಡು ಯಂತ್ರಚಾಲಿತ ನೌಕೆಗಳ ರಕ್ಷಣೆಗಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.**– (1) ರಾಜ್ಯ ಸರ್ಕಾರವು, ಸ್ಫೋಟ, ಬೆಂಕಿ, ಡಿಕ್ಕಿ – ಇವುಗಳಿಂದ ಉಂಟಾಗುವ ಅಪಘಾತಗಳ ಮತ್ತು ಇತರ ಅಪಘಾತಗಳ ಸಂಬಂಧದಲ್ಲಿ ಒಳನಾಡು ಯಂತ್ರಚಾಲಿತ ನೌಕೆಗಳ ಸಂರಕ್ಷಣೆಗಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು,–

(ಎ) ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಅಪಾಯಕಾರಿ ಸರಕುಗಳನ್ನು ಯಾವ ಷರತ್ತುಗಳ ಮೇರೆಗೆ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಸಾಗಿಸಬಹುದೆಂಬುದನ್ನು ನಿಯಮಿಸಬಹುದು;

(ಬಿ) ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಸ್ಫೋಟಗಳನ್ನು ಅಥವಾ ಅಗ್ನಿ ಅಪಘಾತಗಳನ್ನು ತಡೆಯುವುದಕ್ಕಾಗಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ನಿಯಮಿಸಬಹುದು;

(ಸಿ) ಬೆಂಕಿಯನ್ನು ನಂದಿಸುವ ಉದ್ದೇಶಕ್ಕಾಗಿ ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಇಡಬೇಕಾಗಿರುವ ಸಲಕರಣೆಗಳ ಬಗ್ಗೆ ನಿಯಮಿಸಬಹುದು;

(ಡಿ) ಶಬ್ದಸಂಕೇತ ಮಾಡುವುದನ್ನು ವಿನಿಯಮಿಸಬಹುದು;

(ಇ) ಒಳನಾಡು ಯಂತ್ರಚಾಲಿತ ನೌಕೆಗಳು ದೀಪಗಳನ್ನು ಒಯ್ಯುವುದು ಮತ್ತು ಅವುಗಳನ್ನು ಪ್ರದರ್ಶಿಸುವುದು – ಇವುಗಳ ಬಗ್ಗೆ ವಿನಿಯಮಿಸಬಹುದು;

(ಎಫ್) ಯಂತ್ರಚಾಲಿತ ನೌಕೆಗಳು ನಿರ್ದಿಷ್ಟಪಡಿಸಿದ ಯಾವ ಒಳನಾಡು ಜಲಮಾರ್ಗಗಳಲ್ಲಿ ಸಂಚರಿಸುತ್ತವೆಯೋ ಆ ಒಳನಾಡು ಜಲಮಾರ್ಗದ ಮೇಲೆ ಇತರ ನೌಕೆಗಳು ದೀಪಗಳನ್ನು ಒಯ್ಯುವುದು ಮತ್ತು ಪ್ರದರ್ಶಿಸುವುದು– ಇವುಗಳ ಬಗ್ಗೆ ವಿನಿಯಮಿಸಬಹುದು;

(ಜಿ) ಪಾಲಿಸಬೇಕಾದ ಚಾಲನ ನಿಯಮಗಳನ್ನು ನಿಯಮಿಸಬಹುದು;

(ಎಚ್) ಹಿಂಭಾಗದಿಂದ ಅಥವಾ ಅಕ್ಕಪಕ್ಕದಲ್ಲಿ ನೌಕೆಗಳನ್ನು ಎಳೆದುಕೊಂಡು ಹೋಗುವುದನ್ನು ವಿನಿಯಮಗೊಳಿಸಬಹುದು;

(ಐ) ಒಳನಾಡು ಯಂತ್ರಚಾಲಿತ ನೌಕೆಗಳು ನಿರ್ದಿಷ್ಟಪಡಿಸಿದ ಪ್ರದೇಶಗಳಲ್ಲಿ ಯಾವ ವೇಗದಲ್ಲಿ ಸಂಚರಿಸಬಹುದು ಎಂಬುದನ್ನು ನಿಯಮಿಸಬಹುದು;

(ಜೆ) ಇತರ ನೌಕೆಗಳಿಗೆ ಅಥವಾ ದಡ, ಕಡಲು ಕಾಲುವೆಗಳು, ನೌಕಾಯಾನ ಗುರುತುಗಳು ಅಥವಾ ನೌಕಾಯಾನದ ಕಡಲು ಕಾಲುವೆಗಳಲ್ಲಿನ ಅಥವಾ ಸುತ್ತಮುತ್ತಲಿನ ಯಾವುದೇ ಚರ ಅಥವಾ ಸ್ಥಿರ ಸ್ವತ್ತಿಗೆ ಉಂಟಾಗುವ ಅಪಾಯವನ್ನು ತಡೆಗಟ್ಟಲು ಒಳನಾಡು ಯಂತ್ರಚಾಲಿತ ನೌಕೆಗಳ ಸಂಚಾರವನ್ನು ವಿನಿಯಮಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು, ಉಲ್ಲಂಘಿಸುವ ಯಾರೇ ವ್ಯಕ್ತಿಯು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದೆಂಬ ಉಪಬಂಧವನ್ನು ಅಂಥ ನಿಯಮವು ಒಳಗೊಂಡಿರಬಹುದು.

**53. ಒಳನಾಡು ಯಂತ್ರಚಾಲಿತ ನೌಕೆಗಳಲ್ಲಿ ಪ್ರಯಾಣಿಕರನ್ನು ಒಯ್ಯುವ ಬಗ್ಗೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಒಳನಾಡು ಯಂತ್ರಚಾಲಿತ ನೌಕೆಗಳಲ್ಲಿ ಪ್ರಯಾಣಿಕರನ್ನು ಒಯ್ಯುವುದನ್ನು ವಿನಿಯಮಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು,–

(ಎ) ಯಾವ ಸಂದರ್ಭಗಳಲ್ಲಿ ಪ್ರಯಾಣಿಕರು ಒಳನಾಡು ಯಂತ್ರಚಾಲಿತ ನೌಕೆಯೊಳಗೆ ಪ್ರವೇಶಿಸುವುದನ್ನು ನಿರಾಕರಿಸಬಹುದೋ ಅಥವಾ ಅಲ್ಲಿಂದ ಹೊರಹೋಗುವಂತೆ ಅವರನ್ನು ಅಗತ್ಯಪಡಿಸಬಹುದೋ, ಆ ಸಂದರ್ಭಗಳನ್ನು ನಿಯಮಿಸಬಹುದು.

(ಬಿ) ಒಳನಾಡು ಯಂತ್ರಚಾಲಿತ ನೌಕೆಗಳಲ್ಲಿ ಪ್ರಯಾಣಿಕರು ಪ್ರಯಾಣ ದರಗಳನ್ನು ಸಂದಾಯ ಮಾಡುವುದಕ್ಕಾಗಿ ಮತ್ತು ಅವರು ಪ್ರಯಾಣ ದರಗಳನ್ನು ಸಂದಾಯ ಮಾಡಿರುವುದನ್ನು ಸೂಚಿಸುವ ಟಿಕೇಟುಗಳು ಅಥವಾ ರಸೀತಿಗಳು (ಯಾವುವಾದರೂ ಇದ್ದರೆ) ಅವುಗಳನ್ನು ತೋರಿಸುವುದಕ್ಕಾಗಿ ಉಪಬಂಧ ಕಲ್ಪಿಸಬಹುದು, ಮತ್ತು

(ಸಿ) ಸಾಮಾನ್ಯವಾಗಿ ಒಳನಾಡು ಯಂತ್ರಚಾಲಿತ ನೌಕೆಗಳಲ್ಲಿನ ಪ್ರಯಾಣಿಕರ ವರ್ತನೆಯನ್ನು ವಿನಿಯಮಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಇಪ್ಪತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದೆಂಬ ಉಪಬಂಧವನ್ನು ಅಂಥ ನಿಯಮವು ಒಳಗೊಂಡಿರಬಹುದು.

(4) ಒಂದು ಒಳನಾಡು ಯಂತ್ರಚಾಲಿತ ನೌಕೆಯ ನಾಯಕನು ಅಥವಾ ಯಾರೇ ಇತರ ಅಧಿಕಾರಿಯು ಮತ್ತು ಅವನು ತನ್ನ ನೆರವಿಗೆ ಕರೆಯುವ ಯಾರೇ ವ್ಯಕ್ತಿಯು, ಈ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸಿದ ಯಾರೇ ವ್ಯಕ್ತಿಯನ್ನು, ಅಂಥ ವ್ಯಕ್ತಿಯ ಹೆಸರು ಮತ್ತು ವಿಳಾಸವು ಆ ನಾಯಕ ಅಥವಾ ಅಂಥ ಇತರ ಅಧಿಕಾರಿಗೆ ಗೊತ್ತಿಲ್ಲದಿದ್ದರೆ, ಬಂಧಿಸಬಹುದು.

(5) ಖಾಸಗಿ ವ್ಯಕ್ತಿಗಳು ಮಾಡಿದ ಬಂಧನದ ಸಂದರ್ಭದಲ್ಲಿ ದಂಡ ಪ್ರಕ್ರಿಯಾ ಸಂಹಿತೆ, 1973ರ 43ನೇ ಪ್ರಕರಣದ ಮೂಲಕ ನಿಯಮಿಸಲಾದ ಪ್ರಕ್ರಿಯೆಯು ಹೇಗೆ ಅನ್ವಯವಾಗುತ್ತದೆಯೋ ಹಾಗೆಯೇ ಈ ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಬಂಧನಕ್ಕೂ ಅನ್ವಯವಾಗತಕ್ಕದ್ದು.

**54. ಪ್ರಯಾಣಿಕರನ್ನು ರಕ್ಷಿಸುವುದಕ್ಕಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಒಳನಾಡು ಯಂತ್ರಚಾಲಿತ ನೌಕೆಗಳಲ್ಲಿನ ಪ್ರಯಾಣಿಕರನ್ನು ರಕ್ಷಿಸುವುದಕ್ಕಾಗಿ ನಿಯಮಗಳನ್ನು ಸಹ ರಚಿಸಬಹುದು ಮತ್ತು ಅಂಥ ನಿಯಮಗಳು,–

(ಎ) ಪ್ರಯಾಣಿಕರ ಟಿಕೇಟುಗಳ ಮೇಲೆ ಮುದ್ರಿಸಬೇಕಾದ ಅಥವಾ ಅಂಥ ಟಿಕೇಟುಗಳ ಮೇಲೆ ಅನ್ಯಥಾ ಸೂಚಿಸಬೇಕಾದ ಬೆಲೆಗಳನ್ನು; ಮತ್ತು

(ಬಿ) ಅಂಥ ಪ್ರಯಾಣಿಕರ ಉಪಯೋಗಕ್ಕಾಗಿ ಸಾಕಷ್ಟು ಪ್ರಮಾಣದ ಸಿಹಿ ನೀರನ್ನು ಉಚಿತವಾಗಿ ಪೂರೈಸುವುದನ್ನು

– ಅಗತ್ಯಪಡಿಸಬಹುದು.

(2) ಈ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದೆಂಬ ಉಪಬಂಧವನ್ನು ಅಂಥ ನಿಯಮವು ಒಳಗೊಂಡಿರಬಹುದು.

**54ಎ. ಪ್ರಯಾಣ ದರಗಳ ಮತ್ತು ಸರಕು ಸಾಗಣೆ ದರಗಳ ಗರಿಷ್ಠ ಮತ್ತು ಕನಿಷ್ಠ ದರಗಳನ್ನು ನಿಗದಿಪಡಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಒಳನಾಡು ಜಲಮಾರ್ಗಗಳ ಯಾವುದೇ ವ್ಯವಸ್ಥೆ ಅಥವಾ ಒಳನಾಡು ಜಲಮಾರ್ಗದ ಯಾವುದೇ ಹರಹು ಅಥವಾ ಒಂದು ಒಳನಾಡು ಜಲಮಾರ್ಗದ ಮೇಲಿನ ಯಾವುದೇ ಎರಡು ನಿಲ್ದಾಣಗಳ ನಡುವಣ ಸಂಚಾರ ಭಾಗ – ಇವುಗಳ ಸಂಬಂಧದಲ್ಲಿ ಅದು ಅವಶ್ಯವೆಂದು ಪರಿಗಣಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ,–

(ಎ) ಒಳನಾಡು ಯಂತ್ರಚಾಲಿತ ನೌಕೆಗಳಲ್ಲಿ ಪ್ರಯಾಣ ಮಾಡುವ ಯಾವುದೇ ವರ್ಗದ ಪ್ರಯಾಣಿಕರಿಗೆ ಪ್ರಯಾಣ ದರಗಳಾಗಿ ಪ್ರತಿ ಕಿಲೋ ಮೀಟರ್‌ಗೆ ವಿಧಿಸಬಹುದಾಗಿರುವ ಗರಿಷ್ಠ ಅಥವಾ ಕನಿಷ್ಠ ದರವನ್ನು ನಿಗದಿಪಡಿಸಬಹುದು;

(ಬಿ) ಒಳನಾಡು ಯಂತ್ರಚಾಲಿತ ನೌಕೆಗಳಲ್ಲಿ ಒಯ್ಯುವ ಯಾವುದೇ ಬಗೆಯ ಸರಕುಗಳ ಮೇಲೆ ಸರಕು ಸಾಗಣೆ ದರವಾಗಿ ಪ್ರತಿ ಕಿಲೋಮೀಟರ್‌ಗೆ ವಿಧಿಸಬಹುದಾಗಿರುವ ಗರಿಷ್ಠ ದರವನ್ನು ನಿಗದಿಪಡಿಸಬಹುದು;

(ಸಿ) ಒಳನಾಡು ಯಂತ್ರಚಾಲಿತ ನೌಕೆಗಳಲ್ಲಿ ಒಯ್ಯುವ ಯಾವುದೇ ಬಗೆಯ ಸರಕುಗಳ ಮೇಲೆ ಸರಕು ಸಾಗಣೆಯ ದರವಾಗಿ ಪ್ರತಿ ಕಿಲೋಮೀಟರ್‌ಗೆ ವಿಧಿಸಬಹುದಾಗಿರುವ ಕನಿಷ್ಠ ದರವನ್ನು ನಿಗದಿಪಡಿಸಬಹುದು;

(ಡಿ) ಈ ಪ್ರಕರಣದ ಮೇರೆಗೆ ಗರಿಷ್ಠ ಅಥವಾ ಕನಿಷ್ಠ ದರಗಳನ್ನು ನಿಗದಿಪಡಿಸಿರುವ ಸಂದರ್ಭಗಳಲ್ಲಿ, ಪ್ರಯಾಣ ದರಗಳನ್ನು ಅಥವಾ ಸರಕು ಸಾಗಣೆಯ ದರಗಳನ್ನು ಲೆಕ್ಕ ಮಾಡುವ ಉದ್ದೇಶಕ್ಕಾಗಿ ಒಂದು ಒಳನಾಡು ಜಲಮಾರ್ಗದ ಮೇಲಿನ ಯಾವುವೇ ಎರಡು ನಿಲ್ದಾಣಗಳ ನಡುವಣ ಅಂತರವು ಎಷ್ಟು ಇರತಕ್ಕುದು ಎಂಬುದನ್ನು ಘೋಷಿಸಬಹುದು.

(2) ರಾಜ್ಯ ಸರ್ಕಾರವು, ಯಾವುದೇ ವರ್ಗದ ಪ್ರಯಾಣಿಕರ ಅಥವಾ ಯಾವುದೇ ಬಗೆಯ ಸರಕುಗಳ ಸಂಬಂಧದಲ್ಲಿ ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ವಿಧಿಸಲಾಗುವ ದರಗಳನ್ನು ಯಾವುದೇ ಇತರ ಒಳನಾಡು ಯಂತ್ರಚಾಲಿತ ನೌಕೆಯು ಅಥವಾ ಅಂಥ ನೌಕೆಗಳ ಸಮೂಹವು ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಒಯ್ಯುವುದನ್ನು ನಿಲ್ಲಿಸುವಷ್ಟರ ಮಟ್ಟಿಗೆ ತಗ್ಗಿಸಲಾಗಿದೆ ಎಂದು ಮನದಟ್ಟು ಮಾಡಿಕೊಂಡ ಹೊರತು, ಯಾವುದೇ ಜಲಮಾರ್ಗಗಳ ವ್ಯವಸ್ಥೆಯ ಮೇಲೆ ಅಥವಾ ಯಾವುದೇ ಜಲಮಾರ್ಗದ ಹರಹಿನ ಮೇಲೆ ಅಥವಾ ಯಾವುದೇ ಒಳನಾಡು ಜಲಮಾರ್ಗದ ಯಾವುವೇ ಎರಡು ನಿಲ್ದಾಣಗಳ ನಡುವಣ ಸಂಚಾರ ಭಾಗದ ಮೇಲೆ ಒಯ್ಯಲಾಗುವ ಅಂಥ ಪ್ರಯಾಣಿಕರ ಅಥವಾ ಸರಕುಗಳ ಸಂಬಂಧದಲ್ಲಿ 1ನೇ ಉಪಪ್ರಕರಣದ (ಎ) ಖಂಡದ ಅಥವಾ (ಬಿ) ಖಂಡದ ಮೇರೆಗೆ ಯಾವುದೇ ಕನಿಷ್ಠ ದರವನ್ನು ನಿಗದಿಪಡಿಸತಕ್ಕದ್ದಲ್ಲ.

(3) ಎರಡು ರಾಜ್ಯಗಳಲ್ಲಿರುವ ಯಾವುವೇ ಎರಡು ನಿಲ್ದಾಣಗಳ ನಡುವೆ ಸಂಚರಿಸುವ ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಒಯ್ಯಲಾಗುವ ಯಾವುದೇ ವರ್ಗದ ಪ್ರಯಾಣಿಕರ ಅಥವಾ ಯಾವುದೇ ಬಗೆಯ ಸರಕುಗಳ ಸಂಬಂಧದಲ್ಲಿ ಪ್ರತಿ ಕಿಲೋಮೀಟರ್‌ಗೆ ವಿಧಿಸಬಹುದಾದ ಗರಿಷ್ಠ ಅಥವಾ ಕನಿಷ್ಠ ದರದ ನಿಗದಿಗೆ ಸಂಬಂಧಿಸಿ ಯಾವುದೇ ವಿವಾದ ಉಂಟಾದ ಸಂದರ್ಭದಲ್ಲಿ ಯಾವುದೇ ಒಂದು ರಾಜ್ಯವು ವಿಷಯವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಬಹುದು ಮತ್ತು ಕೇಂದ್ರ ಸರ್ಕಾರವು ಆ ವಿವಾದವನ್ನು ತೀರ್ಮಾನಿಸತಕ್ಕದ್ದು.

**54ಬಿ. ಸಲಹಾ ಸಮಿತಿಗಳ ನೇಮಕಕ್ಕೆ ಉಪಬಂಧ ಕಲ್ಪಿಸುವ ನಿಯಮಗಳನ್ನು ರಚಿಸಲು ಅಧಿಕಾರ.–** ರಾಜ್ಯ ಸರ್ಕಾರವು ಪ್ರಯಾಣಿಕರ ಮತ್ತು ಹಡಗು ಸಾಗಣೆದಾರರ ಹಿತಾಸಕ್ತಿಗೆ ಸಂಬಂಧಪಡುವ ವಿಷಯಗಳ ಮೇಲೆ, ಒಳನಾಡು ಯಂತ್ರಚಾಲಿತ ನೌಕೆಗಳ ಒಡೆಯರು, ಏಜೆಂಟರುಗಳು ಮತ್ತು ಸನ್ನದುದಾರರು – ಇವರುಗಳಿಗೆ ಸಲಹೆ ನೀಡಲು ಸಮಿತಿಯ ನೇಮಕ, ರಚನೆ, ಕಾರ್ಯ ವಿಧಾನ ಮತ್ತು ಪ್ರಕಾರ್ಯಗಳಿಗಾಗಿ ಉಪಬಂಧವನ್ನು ಕಲ್ಪಿಸುವ ನಿಯಮಗಳನ್ನು ರಚಿಸಬಹುದು.

## ಅಧ್ಯಾಯ - VIಎ

### ಮೂರನೇ ಪಕ್ಷಕಾರನ ಅಪಾಯ ಸಂಭವಗಳಿಗೆ ಸಂಬಂಧಪಟ್ಟಂತೆ ಯಂತ್ರಚಾಲಿತ ನೌಕೆಗಳ ವಿಮೆ

**54ಸಿ. ಯಂತ್ರಚಾಲಿತ ನೌಕೆಗಳ ವಿಮೆ ಸಂಬಂಧದಲ್ಲಿ ಮೋಟಾರು ವಾಹನಗಳ ಅಧಿನಿಯಮ, 1939ರ VIIIನೇ ಅಧ್ಯಾಯದ ಅನ್ವಯ.**- ಮೋಟಾರು ವಾಹನಗಳ ಅಧಿನಿಯಮ, 1939ರ VIIIನೇ ಅಧ್ಯಾಯದ ಉಪಬಂಧಗಳು ಮೋಟಾರು ವಾಹನಗಳ ಸಂಬಂಧದಲ್ಲಿ ಅನ್ವಯವಾಗುವಂತೆಯೇ, ಮೂರನೇ ಪಕ್ಷಕಾರನ ಅಪಾಯ ಸಂಭವಗಳಿಗೆ ಸಂಬಂಧಪಟ್ಟಂತೆ, ಯಂತ್ರಚಾಲಿತ ನೌಕೆಗಳ ವಿಮೆಯ ಸಂಬಂಧದಲ್ಲಿ, ಈ ಮುಂದಿನ ಮಾರ್ಪಾಟುಗಳಿಗೊಳಪಟ್ಟು, ಮತ್ತು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು, ಎಂದರೆ:-

(ಎ) ಅಧ್ಯಾಯ VIIIರ ಆದ್ಯಂತವಾಗಿ,-

(i) "ಮೋಟಾರು ವಾಹನ" ಅಥವಾ "ವಾಹನ" ಎಂಬ ಉಲ್ಲೇಖಗಳನ್ನು "ಯಂತ್ರಚಾಲಿತ ನೌಕೆ" ಯ ಉಲ್ಲೇಖಗಳಂತೆ ಅರ್ಥ ಮಾಡಿಕೊಳ್ಳತಕ್ಕದ್ದು;

(ii) "ಸಾರ್ವಜನಿಕ ಸ್ಥಳ" ಎಂಬ ಉಲ್ಲೇಖಗಳನ್ನು "ಒಳನಾಡು ಜಲಮಾರ್ಗ"ದ ಉಲ್ಲೇಖಗಳಂತೆ ಅರ್ಥಮಾಡಿಕೊಳ್ಳತಕ್ಕದ್ದು;

ಮತ್ತು ವ್ಯಾಕರಣದ ನಿಯಮಗಳು ಅಗತ್ಯಪಡಿಸಬಹುದಾದಂಥ ಇತರ ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡತಕ್ಕದ್ದು.

(ಬಿ) 94ನೇ ಪ್ರಕರಣದಲ್ಲಿ,-

(i) (3)ನೇ ಉಪಪ್ರಕರಣದಲ್ಲಿ (ಸಿ) ಖಂಡದ ಬದಲಾಗಿ ಈ ಮುಂದಿನ ಖಂಡವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಸಿ) ಒಳನಾಡು ಜಲಮಾರ್ಗ ಸಾರಿಗೆ ಸೇವೆಯನ್ನು ಒದಗಿಸುವ ಯಾವುದೇ ರಾಜ್ಯ ಜಲಮಾರ್ಗ ಸಾರಿಗೆ ಉದ್ಯಮವನ್ನು,-

(i) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು;

(ii) ಕೇಂದ್ರ ಸರ್ಕಾರ ಅಥವಾ ಒಂದು ಅಥವಾ ಹೆಚ್ಚು ರಾಜ್ಯ ಸರ್ಕಾರಗಳ ಒಡೆತನದ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ನಿಗಮ ಅಥವಾ ಕಂಪನಿಯು ಅಥವಾ ಕೇಂದ್ರ ಸರ್ಕಾರ ಅಥವಾ ಒಂದು ಅಥವಾ ಹೆಚ್ಚು ರಾಜ್ಯ ಸರ್ಕಾರಗಳು ನಡೆಸುತ್ತಿರುವ

- ಅಂಥ ಯಾವುದೇ ಉದ್ಯಮ;

ವಿವರಣೆಯ (iii)ನೇ ಬಾಬಿನಲ್ಲಿ, "ರಾಜ್ಯ ಸಾರಿಗೆ" ಎಂಬ ಪದಗಳಿಗೆ ಬದಲು "ರಾಜ್ಯ ಜಲಮಾರ್ಗ ಸಾರಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) 95ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ,-

(ಎ) (ಬಿ) ಖಂಡದ (ii)ನೇ ಉಪಖಂಡದಲ್ಲಿ, "ಒಂದು ಸಾರ್ವಜನಿಕ ಸೇವಾ ವಾಹನದ" ಎಂಬ ಪದಗಳ ಬದಲಾಗಿ, (ಇದರಲ್ಲಿ ಇನ್ನು ಮುಂದೆ ಒಂದು ಸಾರ್ವಜನಿಕ ಸೇವಾ ನೌಕೆ ಎಂಬುದಾಗಿ ಉಲ್ಲೇಖಿಸಲಾಗುವ) ಬಾಡಿಗೆ ಅಥವಾ ಪ್ರತಿಫಲಕ್ಕಾಗಿ ಪ್ರಯಾಣಿಕರನ್ನು ಒಯ್ಯುವುದಕ್ಕಾಗಿ ಉಪಯೋಗಿಸಿದ ಅಥವಾ ಉಪಯೋಗಿಸಲು ಅಳವಡಿಸಿಕೊಳ್ಳಲಾದ ಒಂದು ಯಂತ್ರಚಾಲಿತ ನೌಕೆಯ" ಎಂಬ ಪದಗಳು ಮತ್ತು ಆವರಣಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಪರಂತುಕದಲ್ಲಿ, ಖಂಡ (1) ರಲ್ಲಿ (ಬಿ) ಮತ್ತು (ಸಿ) ಉಪಖಂಡದ ಬದಲಾಗಿ ಈ ಕೆಳಕಂಡ ಉಪಖಂಡಗಳನ್ನು ಪ್ರತಿಯೋಜಿಸತಕ್ಕದ್ದು:-

"(ಬಿ) ಅದು ಒಂದು ಸಾರ್ವಜನಿಕ ಸೇವಾ ನೌಕೆಯಾಗಿದ್ದರೆ, ನೌಕೆಯ ಕಂಡಕ್ಟರನಾಗಿ ಅಥವಾ ನೌಕೆಯಲ್ಲಿ ಟಿಕೇಟುಗಳನ್ನು ಪರೀಕ್ಷಿಸುವವನಾಗಿ ತೊಡಗಿರುವ; ಅಥವಾ

(ಸಿ) (ಇದರಲ್ಲಿ ಇನ್ನು ಮುಂದೆ ಸರಕುಗಳ ಸೇವಾ ನೌಕೆ ಎಂಬುದಾಗಿ ಉಲ್ಲೇಖಿಸಲಾಗುವ) ಅದು ಏಕಮಾತ್ರವಾಗಿ ಅಥವಾ ಪ್ರಯಾಣಿಕರ ಜೊತೆಯಲ್ಲಿ ಸರಕುಗಳನ್ನು ಒಯ್ಯುವುದಕ್ಕಾಗಿ ಉಪಯೋಗಿಸಿದ ಅಥವಾ ಅಳವಡಿಸಿಕೊಳ್ಳಲಾದ ಒಂದು ನೌಕೆಯಾಗಿದ್ದರೆ ನೌಕೆಯಲ್ಲಿ ಒಯ್ಯುವುದು; ಅಥವಾ"

(ii) (2)ನೇ ಉಪಪ್ರಕರಣದಲ್ಲಿ,-

(ಎ) ಖಂಡದಲ್ಲಿ, "ಸರಕು ವಾಹನ, ಐವತ್ತು ಸಾವಿರ ರೂಪಾಯಿಗಳ ಪರಿಮಿತಿ" ಎಂಬ ಪದಗಳಿಗೆ ಬದಲಾಗಿ "ಸರಕುಗಳ ಸೇವಾ ನೌಕೆ, ಎರಡು ಲಕ್ಷ ಐವತ್ತು ಸಾವಿರ ರೂಪಾಯಿಗಳ ಪರಿಮಿತಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) (ಬಿ) ಖಂಡದಲ್ಲಿ,-

(1) (i)ನೇ ಉಪಖಂಡದಲ್ಲಿ "ಐವತ್ತು ಸಾವಿರ ರೂಪಾಯಿ" ಎಂಬ ಪದಗಳಿಗೆ ಬದಲಾಗಿ "ಎರಡು ಲಕ್ಷ ಐವತ್ತು ಸಾವಿರ ರೂಪಾಯಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(2) (ii)ನೇ ಉಪಖಂಡದಲ್ಲಿ,-

(ಎ) (3)ನೇ ಪ್ಯಾರಾದಲ್ಲಿ "ಒಂದು ಲಕ್ಷ" ಎಂಬ ಪದಗಳಿಗೆ ಬದಲಾಗಿ "ಐದು ಲಕ್ಷಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) (4)ನೇ ಪ್ಯಾರಾದಲ್ಲಿ "ವಾಹನವು ಒಂದು ಮೋಟಾರ್ ಕ್ಯಾಬ್ ಆಗಿರುವಲ್ಲಿ ಮತ್ತು ಯಾವುದೇ ಇತರ ಸಂದರ್ಭದಲ್ಲಿ, ಪ್ರತಿಯೊಬ್ಬ ಪ್ರಯಾಣಿಕನಿಗೆ ಐದು ಸಾವಿರ ರೂಪಾಯಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಸಿ) (ಡಿ) ಖಂಡದಲ್ಲಿ "ಎರಡು ಸಾವಿರ ರೂಪಾಯಿಗಳ ಪರಿಮಿತಿ" ಎಂಬ ಪದಗಳಿಗೆ ಬದಲಾಗಿ "ಹತ್ತು ಸಾವಿರ ರೂಪಾಯಿಗಳ ಪರಿಮಿತಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಡಿ) 96ನೇ ಪ್ರಕರಣದಲ್ಲಿ,-

(i) (2)ನೇ ಉಪಪ್ರಕರಣದ (ಬಿ) ಖಂಡದಲ್ಲಿ,-

(ಎ) ಉಪಖಂಡ (i)ರ ಬದಲಾಗಿ ಈ ಕೆಳಕಂಡ ಉಪಖಂಡವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(i) ಯಂತ್ರಚಾಲಿತ ನೌಕೆಯ ಉಪಯೋಗವನ್ನು ಈ ಕೆಳಕಂಡವುಗಳಿಗಾಗಿ ಹೊರತುಪಡಿಸುವ ಷರತ್ತು,-

(ಎ) ನೌಕೆಯು ವಿಮೆಯ ಕರಾರಿನ ದಿನಾಂಕದಂದು ಪ್ರಮಾಣ ಪತ್ರವನ್ನು ಹೊಂದಿಲ್ಲದ ನೌಕೆಯಾಗಿರುವಲ್ಲಿ, ಬಾಡಿಗೆ ಅಥವಾ ಪ್ರತಿಫಲಕ್ಕಾಗಿ, ಅಥವಾ

(ಬಿ) ಸಂಘಟಿಸಿದ ಓಟದ ಪಂದ್ಯ ಅಥವಾ ವೇಗ ಪರೀಕ್ಷೆಗಾಗಿ, ಅಥವಾ

(ಸಿ) ನೌಕೆಯು ಒಂದು ಸಾರ್ವಜನಿಕ ಸೇವಾ ನೌಕೆ ಅಥವಾ ಒಂದು ಸರಕು ಸೇವಾ ನೌಕೆಯಾಗಿರುವಲ್ಲಿ, ನೌಕೆಯನ್ನು ಯಾವ ನೋಂದಣಿ ಪ್ರಮಾಣ ಪತ್ರದ ಮೇರೆಗೆ ಉಪಯೋಗಿಸಲಾಗುತ್ತಿರುವುದೋ ಆ ನೋಂದಣಿ ಪ್ರಮಾಣ ಪತ್ರವು ಅನುಮತಿಸದಿರುವ ಉದ್ದೇಶಕ್ಕಾಗಿ; ಅಥವಾ"

(ಬಿ) (ii)ನೇ ಉಪಖಂಡದಲ್ಲಿ,-

(1) "ಯುಕ್ತವಾಗಿ ಲೈಸೆನ್ಸು ಪಡೆದಿಲ್ಲದ" ಎಂಬ ಪದಗಳಿಗೆ ಬದಲಾಗಿ "ಒಳನಾಡು ನೌಕೆಗಳ ಅಧಿನಿಯಮ, 1917 (1917ರ 1)ರ ಅಧ್ಯಾಯ IIIರ ಮೇರೆಗೆ ನೀಡಲಾದ ಪ್ರಮಾಣ ಪತ್ರವನ್ನು ಹೊಂದಿಲ್ಲದ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು;

(2) "ಚಾಲಕನ ಲೈಸೆನ್ಸು" ಎಂಬ ಪದಗಳ ಬದಲಾಗಿ "ಒಳನಾಡು ನೌಕೆಗಳ ಅಧಿನಿಯಮ, 1917 (1917ರ 1)ರ IIIನೇ ಅಧ್ಯಾಯದ ಮೇರೆಗೆ ನೀಡಲಾದ ಪ್ರಮಾಣ ಪತ್ರ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು;

(ii) (2ಎ) ಉಪಪ್ರಕರಣದಲ್ಲಿ, "ಒಂದು ನ್ಯಾಯಾಲಯದಿಂದ ಪಡೆದುಕೊಂಡ" ಎಂಬ ಪದಗಳ ತರುವಾಯ, "ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು;

(iii) (2ಎ) ಉಪಪ್ರಕರಣ ಮತ್ತು (6)ನೇ ಉಪಪ್ರಕರಣದ ಪರಂತುಕದಲ್ಲಿ "ಸಂವಾದಿ ಕಾನೂನು" ಎಂಬ ಪದಗಳ ತರುವಾಯ "ಜಮ್ಮು ಮತ್ತು ಕಾಶ್ಮೀರ ರಾಜ್ಯದ ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಇ) 105ನೇ ಪ್ರಕರಣದ ತರುವಾಯ ಈ ಕೆಳಕಂಡ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"105ಎ. ಒಬ್ಬ ವ್ಯಕ್ತಿಗೆ ಅಪಘಾತ ಮತ್ತು ಕ್ಷತಿಯು ಉಂಟಾದ ಸಂದರ್ಭದಲ್ಲಿ ಚಾಲಕನ ಕರ್ತವ್ಯ:- ಒಂದು ಒಳನಾಡು ಯಂತ್ರಚಾಲಿತ ನೌಕೆಯು ದುರ್ಘಟನೆಯಲ್ಲಿ ಒಳಗೊಂಡಿದ್ದರ ಪರಿಣಾಮವಾಗಿ ಯಾರೇ ವ್ಯಕ್ತಿಯು ಕ್ಷತಿಗೊಂಡಿರುವಾಗ ಅಥವಾ ಮೂರನೇ ಪಕ್ಷಕಾರನ ಯಾವುದೇ ಸ್ವತ್ತಿಗೆ ಹಾನಿ ಉಂಟಾಗಿರುವಾಗ ನೌಕೆಯ ನಾಯಕನು ಅಥವಾ ಚಾಲಕನು ಅಥವಾ ನೌಕೆಯ ಪ್ರಭಾರದಲ್ಲಿರುವ ಇತರ ವ್ಯಕ್ತಿಯು,-

(ಎ) ಕ್ಷತಿಗೊಂಡ ವ್ಯಕ್ತಿಗೆ ವೈದ್ಯಕೀಯ ಉಪಚಾರವನ್ನು ದೊರಕಿಸಿಕೊಡುವ ಎಲ್ಲಾ ಯುಕ್ತ ಕ್ರಮಗಳನ್ನು ಕೈಗೊಳ್ಳತಕ್ಕದು ಮತ್ತು ಅವಶ್ಯವಿದ್ದರೆ, ಕ್ಷತಿಗೊಂಡ ವ್ಯಕ್ತಿಯು ಅಥವಾ ಅಪ್ರಾಪ್ತ ವಯಸ್ಕನಾಗಿರುವ ಸಂದರ್ಭದಲ್ಲಿ, ಅವನ ಪೋಷಕನು ಅನ್ಯಥಾ ಅಪೇಕ್ಷಿಸಿದ ಹೊರತು, ಅವನನ್ನು ಸಮೀಪದ ಆಸ್ಪತ್ರೆಗೆ ಸಾಗಿಸತಕ್ಕದ್ದು;

(ಬಿ) ಯಾರೇ ಪೊಲೀಸು ಅಧಿಕಾರಿಯು ಮಾಹಿತಿ ಒದಗಿಸುವಂತೆ ತಗಾದೆ ಮಾಡಿದರೆ, ಅವನಿಗೆ ಅಗತ್ಯವಿರುವ ಯಾವುದೇ ಮಾಹಿತಿಯನ್ನು ನೀಡತಕ್ಕದ್ದು ಅಥವಾ ಯಾರೇ ಪೊಲೀಸು ಅಧಿಕಾರಿಯು ಹಾಜರಿರದಿದ್ದರೆ, ಆ ಘಟನೆಯ ಸಂದರ್ಭಗಳನ್ನು ಸಾಧ್ಯವಾದಷ್ಟು ಬೇಗನೆ ಸಮೀಪದ ಪೊಲೀಸು ಠಾಣೆಗೆ ಮತ್ತು ಯಾವುದೇ ಸಂದರ್ಭದಲ್ಲಿ, ಘಟನೆಯು ಸಂಭವಿಸಿದ ಇಪ್ಪತ್ತನಾಲ್ಕು ಘಂಟೆಯೊಳಗಾಗಿ ವರದಿ ಮಾಡತಕ್ಕದ್ದು;

(ಎಫ್) 106ನೇ ಪ್ರಕರಣದಲ್ಲಿ,-

(ಎ) (2)ನೇ ಉಪಪ್ರಕರಣದಲ್ಲಿ "ಪ್ರಕರಣ 89" ಎಂಬ ಪದ ಮತ್ತು ಅಂಕಿಗಳಿಗೆ ಬದಲಾಗಿ "ಪ್ರಕರಣ 105ಎ" ಎಂಬ ಪದ, ಅಂಕಿಗಳು ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕದ್ದು;

(ಬಿ) (2ಎ) ಉಪಪ್ರಕರಣದ ಪರಂತುಕದಲ್ಲಿ "ಸಾರಿಗೆ ವಾಹನ" ಎಂಬ ಪದಗಳಿಗೆ ಬದಲಾಗಿ "ಸಾರ್ವಜನಿಕ ಸೇವಾ ನೌಕೆ ಅಥವಾ ಸರಕುಗಳ ಸೇವಾ ನೌಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಜಿ) ಪ್ರಕರಣ 107 ರಲ್ಲಿ "ಒಂದು ಸಾರ್ವಜನಿಕ ಸ್ಥಳದಲ್ಲಿ ವಾಹನವನ್ನು ಉಪಯೋಗಿಸುವ ಅಧಿಕಾರವನ್ನು ಪಡೆಯಲು ಪ್ರಾಧಿಕಾರಕ್ಕೆ ತೆರಿಗೆ ಸಂದಾಯ ಮಾಡುವ ಮೂಲಕವಾಗಲಿ ಅಥವಾ ಅನ್ಯಥಾ ಅಷ್ಟುಮಟ್ಟಿಗೆ ಅಂತಹ ನಿಯಮಗಳು ನಿಯಮಿಸಬಹುದಾದಂಥ ಸಾಕ್ಷ್ಯವನ್ನು ಹಾಜರುಪಡಿಸಲು" ಎಂಬ ಪದಗಳಿಗೆ ಬದಲಾಗಿ "ಅಂಥ ನೌಕೆಯ ಸಂಬಂಧದಲ್ಲಿನ ಮೋಜಣಿ ಪ್ರಮಾಣ ಪತ್ರ ಅಥವಾ ನೋಂದಣಿ ಪ್ರಮಾಣ ಪತ್ರಕ್ಕಾಗಿ, ಅಷ್ಟರಮಟ್ಟಿಗೆ ನಿಯಮಿಸಬಹುದಾದಂಥ ಸಾಕ್ಷ್ಯವನ್ನು ಹಾಜರುಪಡಿಸಲು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಹೆಚ್) 108ನೇ ಪ್ರಕರಣದಲ್ಲಿ,-

(ಎ) "ಸಾರಿಗೆ ವಾಹನ" ಎಂಬ ಪದಗಳು ಬರುವೆಡೆಯಲ್ಲೆಲ್ಲ "ಸಾರ್ವಜನಿಕ ಸೇವಾ ನೌಕೆ ಅಥವಾ ಸರಕುಗಳ ಸೇವಾ ನೌಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕುದು ಮತ್ತು ವ್ಯಾಕರಣ ನಿಯಮಗಳು ಅಗತ್ಯಪಡಿಸಬಹುದಾದಂಥ ಇತರ ಆನುಷಂಗಿಕ ತಿದ್ದುಪಡಿಗಳನ್ನು ಕೂಡ ಮಾಡತಕ್ಕದ್ದು.

(ಬಿ) (1)ನೇ ಉಪಪ್ರಕರಣದ (ಎ) ಖಂಡದಲ್ಲಿ,-

(1) "ಮೊದಲ ಐವತ್ತು ವಾಹನಗಳಿಗೆ ಇಪ್ಪತ್ತೈದು ಸಾವಿರ ರೂಪಾಯಿ" ಎಂಬ ಪದಗಳಿಗೆ ಬದಲಾಗಿ "ಮೊದಲ ಐವತ್ತು ಯಂತ್ರಚಾಲಿತ ನೌಕೆಗಳಿಗೆ ಒಂದು ಲಕ್ಷ ರೂಪಾಯಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) "ಒಂದು ನೂರಾ ಐವತ್ತು ಸಾವಿರ ರೂಪಾಯಿ" ಎಂಬ ಪದಗಳಿಗೆ ಬದಲಾಗಿ "ಎರಡು ಲಕ್ಷದ ಐವತ್ತು ಸಾವಿರ ರೂಪಾಯಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಐ) ಪ್ರಕರಣ 110 ರಿಂದ ಪ್ರಕರಣ 110ಬಿ ವರೆಗೆ, ಈ ಮುಂದಿನ ಪ್ರಕರಣಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು, ಎಂದರೆ:-

"**110. ಕ್ಲೇಮುಗಳ ನ್ಯಾಯಾಧಿಕರಣ.–** (1) ರಾಜ್ಯ ಸರ್ಕಾರವು, ಯಂತ್ರಚಾಲಿತ ನೌಕೆಗಳ ಬಳಕೆಯಿಂದ ಉಂಟಾಗುವ ವ್ಯಕ್ತಿಗಳ ಸಾವು ಅಥವಾ ದೈಹಿಕ ಕ್ಷತಿಯನ್ನೊಳಗೊಂಡ ಅಪಘಾತಗಳ ಸಂಬಂಧದಲ್ಲಿ ಅಥವಾ ಮೂರನೇ ಪಕ್ಷಕಾರನ ಯಾವುದೇ ಸ್ವತ್ತಿಗೆ ಹಾಗೆ ಉಂಟಾಗುವ ಹಾನಿಯ ಸಂಬಂಧದಲ್ಲಿ ಅಥವಾ ಅವೆರಡರ ಸಂಬಂಧದಲ್ಲಿ ನಷ್ಟ ಪರಿಹಾರದ ಕ್ಲೇಮುಗಳ ನ್ಯಾಯ ನಿರ್ಣಯ ಮಾಡುವ ಉದ್ದೇಶಕ್ಕಾಗಿ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಕ್ಕಾಗಿ ಒಂದು ಅಥವಾ ಹೆಚ್ಚು ಒಳನಾಡು ನೌಕಾ ಅಪಘಾತ ಕ್ಲೇಮುಗಳ ನ್ಯಾಯಾಧಿಕರಣಗಳನ್ನು (ಇದರಲ್ಲಿ ಇನ್ನು ಮುಂದೆ ಕ್ಲೇಮುಗಳ ನ್ಯಾಯಾಧಿಕರಣಗಳೆಂದು ಉಲ್ಲೇಖಿಸಲಾಗಿದೆ) ರಚಿಸಬಹುದು:

ಪರಂತು, ಅಂಥ ಕ್ಲೇಮು ಸ್ವತ್ತಿಗೆ ಉಂಟಾದ ಹಾನಿಯ ಸಂಬಂಧದಲ್ಲಿ ಹತ್ತು ಸಾವಿರ ರೂಪಾಯಿಗಳಿಗೂ ಹೆಚ್ಚಿನ ನಷ್ಟ ಪರಿಹಾರದ ಕ್ಲೇಮನ್ನು ಒಳಗೊಂಡಿರುವಲ್ಲಿ, ಕ್ಲೇಮುದಾರನು ತನ್ನ ಇಚ್ಛೆಯ ಮೇರೆಗೆ ಒಂದು ಸಿವಿಲ್ ನ್ಯಾಯಾಲಯಕ್ಕೆ ಕ್ಲೇಮನ್ನು ನ್ಯಾಯ ನಿರ್ಣಯಕ್ಕೆ ಒಪ್ಪಿಸಬಹುದು, ಮತ್ತು ಕ್ಲೇಮನ್ನು ಹಾಗೆ ಒಪ್ಪಿಸಿರುವಲ್ಲಿ ಅಂಥ ಕ್ಲೇಮಿಗೆ ಸಂಬಂಧಿಸಿದ ಯಾವುದೇ ಪ್ರಶ್ನೆಯನ್ನು ಸ್ವೀಕರಿಸಲು ಕ್ಲೇಮುಗಳ ನ್ಯಾಯಾಧಿಕರಣಕ್ಕೆ, ಯಾವುದೇ ಅಧಿಕಾರ ವ್ಯಾಪ್ತಿಯು ಇರತಕ್ಕದ್ದಲ್ಲ.

(2) ಒಂದು ಕ್ಲೇಮುಗಳ ನ್ಯಾಯಾಧಿಕರಣವು, ರಾಜ್ಯ ಸರ್ಕಾರವು ನೇಮಿಸಲು ಯೋಗ್ಯವೆಂದು ಭಾವಿಸಬಹುದಾದಂಥ ಸಂಖ್ಯೆಯ ಸದಸ್ಯರನ್ನು ಒಳಗೊಂಡಿರತಕ್ಕುದು ಮತ್ತು ಅದು ಎರಡು ಅಥವಾ ಹೆಚ್ಚು ಸದಸ್ಯರನ್ನು ಒಳಗೊಂಡಿರುವಲ್ಲಿ ಅವರಲ್ಲಿ ಒಬ್ಬನನ್ನು ಅದರ ಅಧ್ಯಕ್ಷನನ್ನಾಗಿ ನೇಮಕ ಮಾಡತಕ್ಕದ್ದು.

(3) ಒಬ್ಬ ವ್ಯಕ್ತಿಯು,–

(ಎ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಹೊರತು, ಅಥವಾ

(ಬಿ) ಜಿಲ್ಲಾ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಹೊರತು, ಅಥವಾ

(ಸಿ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳಲು ಅರ್ಹನಾಗಿರುವ ಹೊರತು

– ಕ್ಲೇಮುಗಳ ನ್ಯಾಯಾಧಿಕರಣದ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

(4) ಯಾವುದೇ ಪ್ರದೇಶಕ್ಕಾಗಿ ಎರಡು ಅಥವಾ ಹೆಚ್ಚು ಕ್ಲೇಮುಗಳ ನ್ಯಾಯಾಧಿಕರಣಗಳನ್ನು ರಚಿಸಿರುವಲ್ಲಿ, ರಾಜ್ಯ ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಅವುಗಳಲ್ಲಿ ವ್ಯವಹಾರದ ಹಂಚುವಿಕೆಯನ್ನು ವಿನಿಯಮನಗೊಳಿಸಬಹುದು.

**110ಎ. ನಷ್ಟ ಪರಿಹಾರಕ್ಕಾಗಿ ಅರ್ಜಿ.–** (1) 110ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸ್ವರೂಪದ ಅಪಘಾತದಿಂದ ಉದ್ಭವಿಸುವ ನಷ್ಟ ಪರಿಹಾರಕ್ಕಾಗಿ ಕೆಳಕಂಡವರು ಅರ್ಜಿ ಸಲ್ಲಿಸಬಹುದು:–

(ಎ) ಕ್ಷತಿಗೆ ಒಳಗಾದ ವ್ಯಕ್ತಿ, ಅಥವಾ

(ಬಿ) ಅಪಘಾತದಿಂದ ಮರಣ ಉಂಟಾಗಿದ್ದರೆ, ಮೃತನ ಎಲ್ಲ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ಸಂದರ್ಭಾನುಸಾರ ಅವರಲ್ಲಿ ಯಾರಾದರೂ, ಅಥವಾ

(ಸಿ) ಕ್ಷತಿಗೊಳಗಾದ ವ್ಯಕ್ತಿಯು ಯುಕ್ತವಾಗಿ ಅಧಿಕಾರ ನೀಡಿದ ಯಾರೇ ಏಜೆಂಟನು ಅಥವಾ ಸಂದರ್ಭಾನುಸಾರ ಮೃತನ ಎಲ್ಲ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ಅವರಲ್ಲಿ ಯಾರಾದರೂ ಒಬ್ಬನು:

ಪರಂತು, ನಷ್ಟ ಪರಿಹಾರಕ್ಕೆ ಸಲ್ಲಿಸಿದ ಯಾವುದೇ ಅಂಥ ಅರ್ಜಿಗೆ ಮೃತನ ಎಲ್ಲ ಕಾನೂನುಸಮ್ಮತ ಪ್ರತಿನಿಧಿಗಳು ಸೇರದಿರುವಲ್ಲಿ, ಮೃತನ ಎಲ್ಲ ಕಾನೂನುಸಮ್ಮತ ಪ್ರತಿನಿಧಿಗಳ ಪರವಾಗಿ ಅಥವಾ ಅವರ ಪ್ರಯೋಜನಕ್ಕಾಗಿ ಅರ್ಜಿಯನ್ನು ಸಲ್ಲಿಸತಕ್ಕುದು ಮತ್ತು ಹಾಗೆ ಸೇರದಿರುವ ಕಾನೂನುಸಮ್ಮತ ಪ್ರತಿನಿಧಿಗಳನ್ನು ಪ್ರತ್ಯರ್ಜಿದಾರರನ್ನಾಗಿ ಸೇರಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು, ಅಪಘಾತ ನಡೆದ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕ್ಲೇಮುಗಳ ನ್ಯಾಯಾಧಿಕರಣಕ್ಕೆ ಸಲ್ಲಿಸತಕ್ಕದ್ದು ಮತ್ತು ಅದು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ವಿವರಣೆಗಳನ್ನು ಒಳಗೊಂಡಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ, ನಷ್ಟ ಪರಿಹಾರ ಕೋರಿ ಸಲ್ಲಿಸಲಾದ ಅರ್ಜಿಯನ್ನು, ಅಪಘಾತ ನಡೆದ ಆರು ತಿಂಗಳೊಳಗೆ ಸಲ್ಲಿಸಿದ್ದ ಹೊರತು ಅದನ್ನು ಪುರಸ್ಕರಿಸತಕ್ಕದ್ದಲ್ಲ:

ಪರಂತು, ಸಾಕಷ್ಟು ಕಾರಣಗಳಿಂದಾಗಿ ಸಕಾಲದಲ್ಲಿ ಅರ್ಜಿಯನ್ನು ಸಲ್ಲಿಸಲು ಅರ್ಜಿದಾರನಿಗೆ ಸಾಧ್ಯವಾಗಲಿಲ್ಲವೆಂಬುದಾಗಿ ಕ್ಲೇಮುಗಳ ನ್ಯಾಯಾಧಿಕರಣಕ್ಕೆ ಮನದಟ್ಟಾದರೆ, ಸದರಿ ಆರು ತಿಂಗಳು ಮುಗಿದ ನಂತರವೂ ಅದು ಅರ್ಜಿಯನ್ನು ಸ್ವೀಕರಿಸಬಹುದು.

**110ಎಎ. ಕೆಲವು ಸಂದರ್ಭಗಳಲ್ಲಿ ನಷ್ಟ ಪರಿಹಾರದ ಕ್ಲೇಮುಗಳ ಬಗ್ಗೆ ಆಯ್ಕೆಯ ಅವಕಾಶ.**- ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮ, 1923 (1923ರ 8) ರಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮತ್ತು ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮ, 1923ರ ಮೇರೆಗೆ ಕೂಡ ಯಾರೇ ವ್ಯಕ್ತಿಯ ಮರಣ ಅಥವಾ ದೈಹಿಕ ಕ್ಷತಿಯಿಂದಾಗಿ ನಷ್ಟ ಪರಿಹಾರದ ಕ್ಲೇಮು ಉಂಟಾದರೆ, ಆ ನಷ್ಟ ಪರಿಹಾರಕ್ಕೆ ಹಕ್ಕುಳ್ಳ ವ್ಯಕ್ತಿಯು ಆ ಅಧಿನಿಯಮಗಳಲ್ಲಿ ಯಾವುದೇ ಒಂದರ ಮೇರೆಗೆ ಅಂಥ ನಷ್ಟ ಪರಿಹಾರವನ್ನು ಕ್ಲೇಮು ಮಾಡಬಹುದೇ ಹೊರತು ಎರಡೂ ಅಧಿನಿಯಮಗಳ ಮೇರೆಗೆ ನಷ್ಟ ಪರಿಹಾರವನ್ನು ಕ್ಲೇಮು ಮಾಡತಕ್ಕದ್ದಲ್ಲ.

**110ಬಿ. ಕ್ಲೇಮುಗಳ ನ್ಯಾಯಾಧಿಕರಣದ ಐತೀರ್ಪು.**- 110ಎ ಪ್ರಕರಣದ ಮೇರೆಗೆ ಸಲ್ಲಿಸಲಾದ ನಷ್ಟ ಪರಿಹಾರದ ಅರ್ಜಿಯನ್ನು ಸ್ವೀಕರಿಸಿದ ನಂತರ, ಕ್ಲೇಮುಗಳ ನ್ಯಾಯಾಧಿಕರಣವು ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಕ್ಲೇಮಿನ ಬಗ್ಗೆ ವಿಚಾರಣೆ ನಡೆಸತಕ್ಕುದು ಮತ್ತು ಅದಕ್ಕೆ ನ್ಯಾಯ ಸಮ್ಮತವೆಂದು ಕಂಡುಬರುವ ನಷ್ಟ ಪರಿಹಾರದ ಮೊಬಲಗನ್ನು ನಿರ್ಧರಿಸಿ ಮತ್ತು ಯಾವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ನಷ್ಟ ಪರಿಹಾರವು ಸಂದಾಯವಾಗತಕ್ಕದ್ದು ಎಂಬುದನ್ನು ನಿರ್ದಿಷ್ಟಪಡಿಸಿ ಐತೀರ್ಪನ್ನು ನೀಡಬಹುದು ಮತ್ತು ಐತೀರ್ಪನ್ನು ನೀಡುವಾಗ ಕ್ಲೇಮುಗಳ ನ್ಯಾಯಾಧಿಕರಣವು, ಸಂದರ್ಭಾನುಸಾರ, ಅಪಘಾತಕ್ಕೆ ಒಳಗಾದ ನೌಕೆಯ ವಿಮಾಕರ್ತ ಅಥವಾ ಒಡೆಯನು ಅಥವಾ ನಾಯಕನು ಅಥವಾ ಚಾಲಕನು - ಇವರೆಲ್ಲರೂ ಅಥವಾ ಅವರಲ್ಲಿ ಯಾರಾದರೂ ಒಬ್ಬರು ಎಷ್ಟು ಮೊಬಲಗನ್ನು ಸಂದಾಯ ಮಾಡತಕ್ಕದೆಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು.

(ಜೆ) 110 ಸಿ ಪ್ರಕರಣದಲ್ಲಿ "ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5) ರ ಪ್ರಕರಣ 195 ಮತ್ತು ಅಧ್ಯಾಯ XXXV" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರಗಳಿಗೆ ಬದಲಾಗಿ, "ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಪ್ರಕರಣ 195 ಮತ್ತು ಅಧ್ಯಾಯ XXVI" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

## ಅಧ್ಯಾಯ - VII

## ದಂಡಗಳು ಮತ್ತು ಕಾನೂನು ವ್ಯವಹರಣೆಗಳು

**55. ಸಮೀಕ್ಷಾ ಪ್ರಮಾಣ ಪತ್ರವಿಲ್ಲದೆ ಜಲಯಾನ ಮಾಡಿದ ಬಗ್ಗೆ ದಂಡ.**- ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯು 3ನೇ ಪ್ರಕರಣವನ್ನು ಅಥವಾ 19ಎ ಪ್ರಕರಣವನ್ನು ಉಲ್ಲಂಘಿಸಿ ಜಲಯಾನವನ್ನು ಮುಂದುವರಿಸಿದರೆ, ಯಂತ್ರಚಾಲಿತ ನೌಕೆಯ ಒಡೆಯನು ಮತ್ತು ನಾಯಕನು ತಲಾ ಒಂದು ಸಾವಿರ ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2) 3ನೇ ಪ್ರಕರಣವನ್ನು ಅಥವಾ 19ಎ ಪ್ರಕರಣವನ್ನು ಉಲ್ಲಂಘಿಸಿ ಜಲಯಾನವನ್ನು ಕೈಗೊಳ್ಳುವ ಒಂದು ಒಳನಾಡು ಯಂತ್ರಚಾಲಿತ ನೌಕೆಯ ನಾಯಕನು ಅಥವಾ ಯಾರೇ ಇತರ ಅಧಿಕಾರಿಯು, ಲೈಸೆನ್ಸನ್ನು ಹೊಂದಿರುವ ನೌಕಾ ಚಾಲಕನಾಗಿದ್ದರೆ, ಅವನು ರಾಜ್ಯ ಸರ್ಕಾರದ ಮೂಲಕ ಯಾವುದೇ ಅವಧಿಯವರೆಗೆ ಅವನ ನೌಕಾಚಾಲಕ ಲೈಸೆನ್ಸು ಅಮಾನತಾಗುವ ಅಥವಾ ರದ್ದಾಗುವ ಶಿಕ್ಷೆಗೆ ಗುರಿಯಾಗಲು ಬದ್ಧರಾಗತಕ್ಕದ್ದು.

**56. ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಸಮೀಕ್ಷೆ ಪ್ರಮಾಣ ಪತ್ರ ಅಂಟಿಸಲು ಉಪೇಕ್ಷೆ ಮಾಡುವುದಕ್ಕಾಗಿ ದಂಡ.**- 10ನೇ ಪ್ರಕರಣವು ಅಗತ್ಯಪಡಿಸಿರುವಂತೆ ಒಂದು ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಸಮೀಕ್ಷಾ ಪ್ರಮಾಣ ಪತ್ರವನ್ನು ಅಂಟಿಸಿರದಿದ್ದರೆ, ಅಥವಾ 19ಹೆಚ್ ಪ್ರಕರಣವು ಅಗತ್ಯಪಡಿಸಿರುವಂತೆ ನೋಂದಣಿ ಗುರುತನ್ನು ಪ್ರದರ್ಶಿಸಿಲ್ಲದಿದ್ದರೆ, ಆ ಯಂತ್ರಚಾಲಿತ ನೌಕೆಯ ಒಡೆಯನು ಅಥವಾ ನಾಯಕನು ತಲಾ ಒಂದು ನೂರು ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯರಾಗತಕ್ಕದ್ದು.

**57. ಸಮೀಕ್ಷಾ ಅಥವಾ ನೋಂದಣಿ ಪ್ರಮಾಣಪತ್ರಗಳನ್ನು ಒಪ್ಪಿಸಲು ಅಥವಾ ವಾಪಸ್ಸು ಕೊಡಲು ಉಪೇಕ್ಷೆ ಮಾಡುವುದಕ್ಕೆ ಅಥವಾ ನಿರಾಕರಿಸುವುದಕ್ಕೆ ದಂಡ.**- ಒಂದು ಒಳನಾಡು ಯಂತ್ರಚಾಲಿತ ನೌಕೆಯ ಅಥವಾ ನಾಯಕನು ಯುಕ್ತ ಕಾರಣವಿಲ್ಲದೆ,-

(ಎ) 14ನೇ ಪ್ರಕರಣದ ಮೇರೆಗೆ ಸಮೀಕ್ಷಾ ಪ್ರಮಾಣ ಪತ್ರವನ್ನು ಒಪ್ಪಿಸಿಬಿಡಲು ಅಗತ್ಯಪಡಿಸಿರುವಾಗ, ಹಾಗೆ ಮಾಡಲು; ಅಥವಾ

(ಬಿ) 19ಎನ್ ಪ್ರಕರಣದ ಮೇರೆಗೆ ನೋಂದಣಿ ಪ್ರಮಾಣ ಪತ್ರವನ್ನು ಒಪ್ಪಿಸಿಬಿಡಲು ಅಗತ್ಯಪಡಿಸಿರುವಾಗ, ಹಾಗೆ ಮಾಡಲು; ಅಥವಾ

(ಸಿ) 19ಓ ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ನೋಂದಣಿ ಪ್ರಮಾಣ ಪತ್ರವನ್ನು ವಾಪಸ್ಸು ಕೊಡಲು

– ಉಪೇಕ್ಷೆ ಮಾಡಿದರೆ ಅಥವಾ ನಿರಾಕರಿಸಿದರೆ, ಅವನು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**58. ನೌಕೆಯಲ್ಲಿ ಮಿತಿಮೀರಿದ ಸಂಖ್ಯೆಯ ಪ್ರಯಾಣಿಕರನ್ನು ಒಯ್ಯುವುದಕ್ಕೆ ದಂಡ.**– ಒಂದು ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ, ಸಮೀಕ್ಷಾದಾರನ ತೀರ್ಪಿನಲ್ಲಿ, ಆ ನೌಕೆಯಲ್ಲಿ ಅಥವಾ ಅದರ ಭಾಗದಲ್ಲಿ, ಒಯ್ಯಲು ಯುಕ್ತವಾದ ಪ್ರಯಾಣಿಕರ ಸಂಖ್ಯೆ ಎಂಬುದಾಗಿ ಸಮೀಕ್ಷಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯ ಪ್ರಯಾಣಿಕರಿದ್ದರೆ, ಅದರ ಒಡೆಯ ಮತ್ತು ನಾಯಕ – ಇವರಿಬ್ಬರೂ ಆ ಸಂಖ್ಯೆಯನ್ನು ಮೀರುವ ಪ್ರತಿಯೊಬ್ಬ ಹೆಚ್ಚಿನ ಪ್ರಯಾಣಿಕನಿಗೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯರಾಗತಕ್ಕದ್ದು.

**58ಎ. ನೌಕೆಯಲ್ಲಿ ಮಿತಿಮೀರಿದ ಪ್ರಮಾಣದ ಸರಕನ್ನು ಒಯ್ಯುವುದಕ್ಕೆ ದಂಡ.**– ಒಂದು ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಸಮೀಕ್ಷಕನ ವಿವೇಚನೆಯ ಮೇರೆಗೆ ಆ ನೌಕೆಯಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಒಯ್ಯಲು ಯುಕ್ತವಾದ ಸರಕಿನ ಪ್ರಮಾಣ ಎಂಬುದಾಗಿ ಸಮೀಕ್ಷಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸರಕಿನ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದ ಸರಕು ಇದ್ದರೆ, ಒಡೆಯ ಮತ್ತು ನಾಯಕ ಇವರಿಬ್ಬರೂ, 58ನೇ ಪ್ರಕರಣದ ಉಪಬಂಧಗಳ ಮೇರೆಗೆ ಅವರು ಯಾವ ದಂಡಕ್ಕೆ ಗುರಿಯಾಗುವರೋ ಆ ದಂಡದ ಜೊತೆಗೆ, ಕೆಳಕಂಡಂತೆ ವಿಸ್ತರಿಸಬಹುದಾದ ಜುಲ್ಮಾನೆಯಿಂದಲೂ ದಂಡನೀಯರಾಗತಕ್ಕದ್ದು:–

(ಎ) ಮೊದಲನೆಯ ಅಪರಾಧದ ಸಂದರ್ಭದಲ್ಲಿ, ಐದು ನೂರು ರೂಪಾಯಿ;

(ಬಿ) ಯಾವುದೇ ಎರಡನೆಯ ಅಥವಾ ತರುವಾಯದ ಅಪರಾಧದ ಸಂದರ್ಭದಲ್ಲಿ, ಒಂದು ಸಾವಿರ ರೂಪಾಯಿ.

**59. ಪ್ರಮಾಣ ಪತ್ರವಿಲ್ಲದೆ ನಾಯಕನಾಗಿ ಅಥವಾ ಇಂಜಿನಿಯರ್‌ನಾಗಿ ಸೇವೆ ಸಲ್ಲಿಸಿದ್ದಕ್ಕೆ ಅಥವಾ ಸೇವೆ ಸಲ್ಲಿಸಲು ಒಬ್ಬ ವ್ಯಕ್ತಿಯನ್ನು ಗೊತ್ತುಮಾಡಿದ್ದಕ್ಕೆ ದಂಡ.**– ಯಾರೇ ವ್ಯಕ್ತಿಯು,–

(ಎ) ಈ ಅಧಿನಿಯಮದ ಮೇರೆಗೆ ಅಗತ್ಯಪಡಿಸಿರುವಂತೆ, ಸಂದರ್ಭಾನುಸಾರ, ನಾಯಕನ ಅಥವಾ ಸೆರಾಂಗ್‌ನ ಅಥವಾ ಇಂಜಿನಿಯರ್‌ನ ಅಥವಾ ಇಂಜಿನ್ ಚಾಲಕನ ಪ್ರಮಾಣ ಪತ್ರಕ್ಕೆ ಅಥವಾ ನಾಯಕನ ಅಥವಾ ಇಂಜಿನ್ ಚಾಲಕನ ಲೈಸೆನ್ಸಿಗೆ ಅರ್ಹನಾಗಿಲ್ಲದ ಅಥವಾ ಅದನ್ನು ಹೊಂದಿಲ್ಲದ ಸಮಯದಲ್ಲಿ ಒಂದು ಒಳನಾಡು ಯಂತ್ರಚಾಲಿತ ನೌಕೆಯ ನಾಯಕನಾಗಿ ಅಥವಾ ಇಂಜಿನಿಯರ್‌ನಾಗಿ ಯಾವುದೇ ಸಮುದ್ರಯಾನವನ್ನು ಕೈಗೊಂಡರೆ; ಅಥವಾ

(ಬಿ) ಯಾರೇ ವ್ಯಕ್ತಿಯನ್ನು ಒಂದು ಒಳನಾಡು ಯಂತ್ರಚಾಲಿತ ನೌಕೆಯ ನಾಯಕನಾಗಿ ಅಥವಾ ಇಂಜಿನಿಯರ್‌ನಾಗಿ ನಿಯೋಜಿಸಿಕೊಳ್ಳುವ ಸಮಯದಲ್ಲಿ ಅವನು ಅಂಥ ಪ್ರಮಾಣ ಪತ್ರಕ್ಕೆ ಅಥವಾ ಲೈಸೆನ್ಸಿಗೆ ಅರ್ಹನಾಗಿದ್ದಾನೆಂದು ಮತ್ತು ಅದನ್ನು ಹೊಂದಿದ್ದಾನೆಂದು ಖಚಿತಪಡಿಸಿಕೊಳ್ಳದೆ ಅವನನ್ನು ಹಾಗೆ ನಿಯೋಜಿಸಿಕೊಂಡರೆ

– ಅವನು ಒಂದು ನೂರು ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**60. ನೌಕೆಯ ಭಗ್ನತೆ ಅಥವಾ ಅಪಘಾತದ ಬಗ್ಗೆ ತಿಳಿಸಲು ತಪ್ಪಿದ್ದಕ್ಕೆ ನಾಯಕನಿಗೆ ದಂಡ.**– ಯಾರೇ ನಾಯಕನು, 32ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಿದಂತೆ ಯಾವುದೇ ನೌಕೆಯ ಭಗ್ನ, ಪರಿತ್ಯಾಗ, ಹಾನಿ, ಅಪಘಾತ ಅಥವಾ ನಷ್ಟದ ಬಗ್ಗೆ ತಿಳಿಸಲು ಉದ್ದೇಶಪೂರ್ವಕವಾಗಿ ತಪ್ಪಿದರೆ, ಅವನು ಐದು ನೂರು ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಅಂಥ ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ದಂಡನೀಯನಾಗತಕ್ಕದ್ದು.

**61. ಅಮಾನತುಗೊಳಿಸಿದ ಅಥವಾ ರದ್ದುಪಡಿಸಿದ ಪ್ರಮಾಣ ಪತ್ರವನ್ನು ಒಪ್ಪಿಸಲು ತಪ್ಪಿದ್ದಕ್ಕೆ ದಂಡ.**– ಈ ಅಧಿನಿಯಮದ ಮೇರೆಗೆ ಯಾವ ವ್ಯಕ್ತಿಯ ಪ್ರಮಾಣ ಪತ್ರವನ್ನು ಅಮಾನತುಗೊಳಿಸಲಾಗಿದೆಯೋ ಅಥವಾ ರದ್ದುಪಡಿಸಲಾಗಿದೆಯೋ ಆ ಯಾರೇ ವ್ಯಕ್ತಿಯು, 46ನೇ ಪ್ರಕರಣವು ಅಗತ್ಯಪಡಿಸಿದಂತೆ ಪ್ರಮಾಣ ಪತ್ರವನ್ನು ಒಪ್ಪಿಸಲು ತಪ್ಪಿದರೆ, ಅವನು ಐದು ನೂರು ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**62. ತಿಳಿಸದೆ ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಅಪಾಯಕರ ಸರಕುಗಳನ್ನು ಒಯ್ಯಲು ತೆಗೆದುಕೊಂಡಿದ್ದಕ್ಕೆ ಅಥವಾ ಕೊಟ್ಟಿದ್ದಕ್ಕೆ ಅಥವಾ ಒಪ್ಪಿಸಿದ್ದಕ್ಕೆ ದಂಡ.–** ಯಾರೇ ವ್ಯಕ್ತಿಯು 50ನೇ ಪ್ರಕರಣವನ್ನು ಉಲ್ಲಂಘಿಸಿ, ಯಾವುದೇ ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಒಯ್ಯುವುದಕ್ಕಾಗಿ ಯಾವುವೇ ಅಪಾಯಕಾರಿ ಸರಕುಗಳನ್ನು ತೆಗೆದುಕೊಂಡರೆ ಅಥವಾ ಒಪ್ಪಿಸಿದರೆ ಅಥವಾ ಕೊಟ್ಟರೆ ಅವನು ಎರಡು ನೂರು ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು ಮತ್ತು ಆ ಸರಕುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

**62ಎ. ಅಪಘಾತಕ್ಕೆ ಸಂಬಂಧಪಡುವ ಅಪರಾಧಗಳಿಗೆ ದಂಡನೆ.–** ಒಳನಾಡು ಯಂತ್ರಚಾಲಿತ ನೌಕೆಯ ನಾಯಕ ಅಥವಾ ಚಾಲಕ ಅಥವಾ ಅದರ ಪ್ರಭಾರದಲ್ಲಿರುವ ಇತರ ವ್ಯಕ್ತಿಯು, VIಎ ಅಧ್ಯಾಯದ ಮೇರೆಗೆ ಅಗತ್ಯಪಡಿಸಿದಂತೆ ಯಾವ ಅಪಘಾತದಲ್ಲಿ ಅವನ ನೌಕೆಯು ಒಳಗೊಂಡಿರುವುದೋ ಆ ಅಪಘಾತದ ಬಗ್ಗೆ ವರದಿ ಮಾಡಲು ತಪ್ಪಿದರೆ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು, ಅಥವಾ ಈ ಪ್ರಕರಣದ ಮೇರೆಗಿನ ಒಂದು ಅಪರಾಧಕ್ಕಾಗಿ ಹಿಂದೆ ಅಪರಾಧಿಯೆಂದು ನಿರ್ಣೀತನಾಗಿದ್ದು ಮತ್ತೆ ಈ ಪ್ರಕರಣದ ಮೇರೆಗಿನ ಒಂದು ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರೆಡರಿಂದಲೂ ದಂಡನೀಯನಾಗತಕ್ಕದ್ದು.

**62ಬಿ. ವಿಮೆ ಮಾಡಿಸಿಲ್ಲದ ಯಂತ್ರಚಾಲಿತ ನೌಕೆಯನ್ನು ಉಪಯೋಗಿಸುವುದಕ್ಕಾಗಿ ದಂಡ.–** ಯಾರೇ ವ್ಯಕ್ತಿಯು, VIಎ ಅಧ್ಯಾಯದ ಅಗತ್ಯತೆಗಳಿಗೆ ಅನುಗುಣವಾಗಿರುವ ವಿಮಾ ಪಾಲಿಸಿ ಇಲ್ಲದೆ ಯಂತ್ರಚಾಲಿತ ನೌಕೆಯನ್ನು ಉಪಯೋಗಿಸಿದರೆ, ಅಥವಾ ಅದನ್ನು ಉಪಯೋಗಿಸಲು ಕಾರಣನಾದರೆ ಅಥವಾ ಅದಕ್ಕೆ ಅನುಮತಿ ನೀಡಿದರೆ, ಅವನು ಒಂದು ಸಾವಿರ ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**62ಸಿ. ವಿಮೆಯ ಬಗ್ಗೆ ಮಾಹಿತಿ ನೀಡಲು ಅಥವಾ ವಿಮಾ ಪ್ರಮಾಣ ಪತ್ರವನ್ನು ಹಾಜರುಪಡಿಸಲು ನಿರ್ಲಕ್ಷಿಸಿದ್ದಕ್ಕೆ ಅಥವಾ ನಿರಾಕರಿಸಿದ್ದಕ್ಕೆ ದಂಡ.–** ಯಾರೇ ವ್ಯಕ್ತಿಯು, ಯುಕ್ತ ಕಾರಣವಿಲ್ಲದೆ, VIಎ ಅಧ್ಯಾಯದಲ್ಲಿ ಒಳಗೊಂಡಿರುವ ಉಪಬಂಧಗಳ ಮೇರೆಗೆ, ವಿಮೆಯ ಬಗ್ಗೆ ಮಾಹಿತಿ ನೀಡಲು ಅಥವಾ ವಿಮಾ ಪ್ರಮಾಣ ಪತ್ರವನ್ನು ಹಾಜರುಪಡಿಸಲು ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ, ಅವನು ಒಂದು ನೂರು ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**63. ಒಳನಾಡು ಯಂತ್ರಚಾಲಿತ ನೌಕೆಗೆ ಅಥವಾ ನೌಕೆಯಲ್ಲಿರುವ ಯಾರೇ ವ್ಯಕ್ತಿಯ ಪ್ರಾಣಕ್ಕೆ ಅಥವಾ ಅಂಗಾಂಗಕ್ಕೆ ಅಪಾಯ ಉಂಟು ಮಾಡುವ ದುರ್ನಡತೆಗೆ ಅಥವಾ ನಿರ್ಲಕ್ಷ್ಯಕ್ಕೆ ದಂಡ.–** ಒಂದು ಒಳನಾಡು ಯಂತ್ರಚಾಲಿತ ನೌಕೆಯಲ್ಲಿ ಯಾವುದೇ ಸ್ಥಾನದಲ್ಲಿ ನಿಯೋಜಿತನಾಗಿರುವ ಅಥವಾ ತೊಡಗಿರುವ ಯಾರೇ ವ್ಯಕ್ತಿಯು, ಕರ್ತವ್ಯದ ಉದ್ದೇಶಪೂರ್ವಕ ಉಲ್ಲಂಘನೆಯಿಂದ ಅಥವಾ ನಿರ್ಲಕ್ಷತೆಯಿಂದ ಅಥವಾ ಪಾನಮತ್ತತೆಯ ಕಾರಣದಿಂದ,–

(ಎ) ನೌಕೆಯು ತಕ್ಷಣವೇ ಭಗ್ನವಾಗುವ, ಅದನ್ನು ನಾಶ ಮಾಡುವ ಅಥವಾ ಅದಕ್ಕೆ ಗಣನೀಯವಾಗಿ ಹಾನಿ ಉಂಟುಮಾಡುವ ಅಥವಾ ನೌಕೆಯಲ್ಲಿರುವ ಅಥವಾ ನೌಕೆಗೆ ಸೇರಿದ ಯಾರೇ ವ್ಯಕ್ತಿಯ ಪ್ರಾಣ ಅಥವಾ ಅಂಗಾಂಗಕ್ಕೆ ಅಪಾಯ ಉಂಟು ಮಾಡುವ ಯಾವುದೇ ಕೃತ್ಯವನ್ನು ಮಾಡಿದರೆ; ಅಥವಾ

(ಬಿ) ತಕ್ಷಣವೇ ಭಗ್ನವಾಗುವುದರಿಂದ, ನಾಶವಾಗುವುದರಿಂದ ಅಥವಾ ಹಾನಿ ಯುಂಟಾಗುವುದರಿಂದ ನೌಕೆಯನ್ನು ರಕ್ಷಿಸಲು ಅಥವಾ ಯಾರೇ ವ್ಯಕ್ತಿಯ ಜೀವಕ್ಕೆ, ಅಂಗಾಂಗಕ್ಕೆ ಉಂಟಾಗಬಹುದಾದ ತಕ್ಷಣದ ಅಪಾಯದಿಂದ ಆ ವ್ಯಕ್ತಿಯನ್ನು ರಕ್ಷಿಸಲು, ಅವನು ಕಾನೂನು ಬದ್ಧವಾಗಿ ಕೈಗೊಳ್ಳಬೇಕಾದ ಯುಕ್ತವಾದ ಮತ್ತು ಅಗತ್ಯವಾದ ಯಾವುದೇ ಕೃತ್ಯವನ್ನು ಕೈಗೊಳ್ಳಲು ನಿರಾಕರಿಸಿದರೆ ಅಥವಾ ತಪ್ಪಿದರೆ

– ಅವನು ಒಂದು ಸಾವಿರ ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**63ಎ. ಬಿಟ್ಟುಹೋಗುವುದು ಮತ್ತು ರಜೆ ತೆಗೆದುಕೊಳ್ಳದೆ ಗೈರು ಹಾಜರಾಗುವುದು.**- ಒಂದು ಯಂತ್ರಚಾಲಿತ ನೌಕೆಯಲ್ಲಿ ಯಾವುದೇ ಸ್ಥಾನದಲ್ಲಿ ನಿಯೋಜಿತನಾಗಿರುವ ಅಥವಾ ತೊಡಗಿರುವ ಯಾರೇ ವ್ಯಕ್ತಿಯು, ಕೆಳಕಂಡ ಅಪರಾಧಗಳಲ್ಲಿ ಯಾವುದೇ ಅಪರಾಧವನ್ನು ಮಾಡಿದರೆ, ಅವನು ಕೆಳಕಂಡಂತೆ ಕ್ಷಿಪ್ರ ದಂಡನೆಗೆ ಗುರಿಯಾಗಲು ಬದ್ಧನಾಗತಕ್ಕದ್ದು,-

(ಎ) ಅವನು, ತನ್ನ ಯಂತ್ರಚಾಲಿತ ನೌಕೆಯನ್ನು ಬಿಟ್ಟು ಹೋದರೆ, ಅವನು ಬಿಟ್ಟುಹೋದ ಅಪರಾಧದ ತಪ್ಪಿತಸ್ಥನಾಗತಕ್ಕದ್ದು, ಮತ್ತು ನೌಕೆಯಲ್ಲಿ ಅವನು ಬಿಟ್ಟಿರುವ ಎಲ್ಲಾ ಅಥವಾ ಯಾವುವೇ ಸ್ವತ್ತು ಮತ್ತು ಅವನು ಆಗ ಗಳಿಸಿರುವ ವೇತನಗಳು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು ಮತ್ತು ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸಕ್ಕೆ ಗುರಿಯಾಗಲು ಬದ್ಧನಾಗತಕ್ಕದ್ದು;

(ಬಿ) ಅವನು, ಯುಕ್ತ ಕಾರಣವಿಲ್ಲದೆ, ತನ್ನ ಯಂತ್ರಚಾಲಿತ ನೌಕೆಯನ್ನು ಸೇರಲು ಅಥವಾ ಅವನ ನೌಕೆಯಲ್ಲಿ ಯಾವುದೇ ಸಮುದ್ರಯಾನದ ಮೇಲೆ ತೆರಳಲು ಉಪೇಕ್ಷಿಸಿದರೆ ಅಥವಾ ನಿರಾಕರಿಸಿದರೆ ಅಥವಾ ಒಂದು ಸಮುದ್ರಯಾನದ ಪ್ರಾರಂಭದಲ್ಲಾಗಲೀ ಅಥವಾ ಅದರ ಮುಂದುವರಿದ ಅವಧಿಯಲ್ಲಾಗಲಿ ಬಂದರು ಅಥವಾ ನದಿ ಘಟ್ಟದಿಂದ ನೌಕೆಯು ಪ್ರಯಾಣ ಹೊರಟ ಇಪ್ಪತ್ತನಾಲ್ಕು ಘಂಟೆಯೊಳಗಿನ ಯಾವುದೇ ಕಾಲದಲ್ಲಿ ರಜೆ ತೆಗೆದುಕೊಳ್ಳದೆ ಗೈರು ಹಾಜರಾದರೆ ಅಥವಾ ತನ್ನ ನೌಕೆಯಿಂದ ಅಥವಾ ಅವನ ಕರ್ತವ್ಯದಿಂದ ರಜೆ ತೆಗೆದುಕೊಳ್ಳದೆ ಮತ್ತು ಸಾಕಷ್ಟು ಕಾರಣವಿಲ್ಲದೆ ಯಾವುದೇ ಕಾಲದಲ್ಲಿ ಗೈರು ಹಾಜರಾದರೆ, ಅವನು, ಆ ಅಪರಾಧವು ಹಾಗೆ ಬಿಟ್ಟು ಹೋಗಿರುವ ಅಪರಾಧವಾಗದೇ ಇರುವಲ್ಲಿ ಅಥವಾ ನಾಯಕನು ಅಂಥ ಅಪರಾಧವೆಂದು ಪರಿಗಣಿಸದೇ ಇರುವಲ್ಲಿ, ಅವನು ರಜೆ ಹಾಕದೇ ಗೈರು ಹಾಜರಾದ ಅಪರಾಧದ ತಪ್ಪಿತಸ್ಥನಾಗತಕ್ಕದ್ದು ಮತ್ತು ಅವನ ಮಜೂರಿಗಳಿಂದ ಎರಡು ದಿವಸಗಳ ವೇತನವನ್ನು ಮೀರದಷ್ಟು ಮೊಬಲಗು ಮತ್ತು ಇದರ ಜೊತೆಗೆ ಗೈರು ಹಾಜರಿಯ ಪ್ರತಿ ಇಪ್ಪತ್ತನಾಲ್ಕು ಗಂಟೆಗಳಿಗೆ ಆರು ದಿವಸಗಳ ವೇತನವನ್ನು ಮೀರದಷ್ಟು ಮೊಬಲಗು ಅಥವಾ ಬದಲಿಯಾಗಿ ಇನ್ನೊಬ್ಬನನ್ನು ನೇಮಕ ಮಾಡಿಕೊಳ್ಳಲು ಯುಕ್ತವಾಗಿ ವಹಿಸಿದ ಯಾವುವೇ ವೆಚ್ಚಗಳ ಮೊಬಲಗು - ಇವು ಮುಟ್ಟುಗೋಲಿಗೆ ಗುರಿಯಾಗುವ ಶಿಕ್ಷೆಗೆ ಬದ್ಧನಾಗತಕ್ಕದ್ದು ಹಾಗೂ ಅವನು ಎರಡು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದ ಶಿಕ್ಷೆಗೆ ಗುರಿಯಾಗಲು ಸಹ ಬದ್ಧನಾಗತಕ್ಕದ್ದು.

**63ಬಿ. ಶಿಸ್ತು ಉಲ್ಲಂಘನೆಯ ಸಾಮಾನ್ಯ ಅಪರಾಧಗಳು.**- ಒಂದು ಯಂತ್ರಚಾಲಿತ ನೌಕೆಯಲ್ಲಿ ಯಾವುದೇ ಸ್ಥಾನದಲ್ಲಿ ನಿಯೋಜಿತನಾಗಿರುವ ಅಥವಾ ತೊಡಗಿರುವ ಯಾರೇ ವ್ಯಕ್ತಿಯು, ಈ ಕೆಳಕಂಡ ಅಪರಾಧಗಳಲ್ಲಿ ಯಾವುದೇ ಅಪರಾಧವನ್ನು ಮಾಡಿದರೆ, ಅವನು, ಕೆಳಕಂಡಂತೆ ಕ್ಷಿಪ್ರ ದಂಡನೆಗೆ ಗುರಿಯಾಗಲು ಬದ್ಧನಾಗತಕ್ಕದ್ದು:-

(ಎ) ಅವನು, ಯಂತ್ರಚಾಲಿತ ನೌಕೆಯು, ಅದು ಬಂದರಿಗೆ ಅಥವಾ ನದಿ ಘಟ್ಟಕ್ಕೆ ಅಥವಾ ಬಟವಾಡೆಯ ಬಂದರು ಅಥವಾ ಘಟ್ಟಕ್ಕೆ ತಲುಪಿದಾಗ ರಜೆ ಹಾಕದೆ ಬಿಟ್ಟುಹೋದರೆ, ಅವನ ಒಂದು ತಿಂಗಳ ವೇತನವನ್ನು ಮೀರದಷ್ಟು ಮೊಬಲಗು ಮುಟ್ಟುಗೋಲಿಗೆ ಗುರಿಯಾಗುವ ಶಿಕ್ಷೆಗೆ ಬದ್ಧನಾಗತಕ್ಕದ್ದು;

(ಬಿ) ಅವನು, ಯಾವುದೇ ಕಾನೂನುಬದ್ಧ ಆದೇಶಕ್ಕೆ ಉದ್ದೇಶಪೂರ್ವಕ ಅವಿಧೇಯತೆಯನ್ನು ತೋರಿಸಿರುವ ಅಪರಾಧ ಅಥವಾ ಕರ್ತವ್ಯದ ಉಪೇಕ್ಷೆಯ ಅಪರಾಧದ ತಪ್ಪಿತಸ್ಥನಾದರೆ, ಅವನ ಮಜೂರಿಗಳಿಂದ ಎರಡು ದಿವಸಗಳ ವೇತನವನ್ನು ಮೀರದಷ್ಟು ಮೊಬಲಗು ಮುಟ್ಟುಗೋಲಿಗೆ ಗುರಿಯಾಗುವ ಶಿಕ್ಷೆಗೆ ಬದ್ಧನಾಗತಕ್ಕದ್ದು;

(ಸಿ) ಅವನು ಕಾನೂನುಬದ್ಧ ಆದೇಶಕ್ಕೆ ಉದ್ದೇಶಪೂರ್ವಕ ನಿರಂತರ ಅವಿಧೇಯತೆ ತೋರಿಸಿದ ಅಪರಾಧದ ಅಥವಾ ನಿರಂತರವಾಗಿ ಕರ್ತವ್ಯವನ್ನು ಉದ್ದೇಶಪೂರ್ವಕವಾಗಿ ಉಪೇಕ್ಷಿಸುವ ಅಪರಾಧದ ತಪ್ಪಿತಸ್ಥನಾದರೆ, ಅವನು ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸಕ್ಕೆ ಮತ್ತು ಅಂಥ ಅವಿಧೇಯತೆ ಅಥವಾ ಉಪೇಕ್ಷೆಯ ಮುಂದುವರಿಕೆಯ ಮೇಲಿನ ಪ್ರತಿ ಇಪ್ಪತ್ತನಾಲ್ಕು ಗಂಟೆಗೆ ಆರು ದಿವಸಗಳ ವೇತನವನ್ನು ಮೀರದಷ್ಟು ಮೊಬಲಗು ಅಥವಾ ಬದಲಿಯವನನ್ನು ನೇಮಕ ಮಾಡಿಕೊಳ್ಳಲು ಯುಕ್ತವಾಗಿ ವಹಿಸಿದ ಯಾವುವೇ ವೆಚ್ಚಗಳ ಮೊಬಲಗು - ಇವುಗಳು ಮುಟ್ಟುಗೋಲಿಗೆ ಗುರಿಯಾಗುವ ಶಿಕ್ಷೆಗೆ ಸಹ ಬದ್ಧನಾಗತಕ್ಕದ್ದು;

(ಡಿ) ಅವನು, ನೌಕೆಯ ನಾಯಕ ಅಥವಾ ಯಾರೇ ಇತರ ಅಧಿಕಾರಿಯ ಮೇಲೆ ಹಲ್ಲೆ ಮಾಡಿದರೆ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದ ಶಿಕ್ಷೆಗೆ ಅಥವಾ ಐದು ನೂರು ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಅಥವಾ ಅವೆರಡೂ ಶಿಕ್ಷೆಗೆ ಗುರಿಯಾಗಲು ಬದ್ಧನಾಗತಕ್ಕದ್ದು;

(ಇ) ಅವನು, ಕಾನೂನುಬದ್ಧ ಆದೇಶಗಳಿಗೆ ಅವಿಧೇಯತೆಯನ್ನು ತೋರಲು ಅಥವಾ ಕರ್ತವ್ಯವನ್ನು ಉಪೇಕ್ಷಿಸಲು ಅಥವಾ ನೌಕೆಯ ಯಾನಕ್ಕೆ ಅಡಚಣೆ ಮಾಡಲು ಅಥವಾ ಜಲಯಾನದ ಮುಂದುವರಿಕೆಯನ್ನು ವಿಲಂಬಗೊಳಿಸಲು ಯಾರೇ ಅಧಿಕಾರಿಗಳೊಂದಿಗೆ ಕೂಡಿಕೊಂಡರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಅಥವಾ ಅವೆರಡಕ್ಕೂ ಗುರಿಯಾಗಲು ಬದ್ಧನಾಗತಕ್ಕದ್ದು;

(ಎಫ್) ಅವನು, ತನ್ನ ಯಂತ್ರಚಾಲಿತ ನೌಕೆಯನ್ನು ಉದ್ದೇಶಪೂರ್ವಕವಾಗಿ ಹಾನಿಗೊಳಿಸಿದರೆ ಅಥವಾ ಆ ನೌಕೆಗೆ ಸಂಬಂಧಪಟ್ಟಂತೆ ಆಪರಾಧಿಕ ದುರುಪಯೋಗವನ್ನು ಅಥವಾ ನಂಬಿಕೆ ದ್ರೋಹವನ್ನು ಎಸಗಿದರೆ, ಯಾವುದೇ ದಾಸ್ತಾನು ಅಥವಾ ರವಾನೆ ಸರಕನ್ನು ಉದ್ದೇಶಪೂರ್ವಕವಾಗಿ ಹಾನಿಗೊಳಿಸಿದರೆ, ಅದರಿಂದ ಉಂಟಾದ ನಷ್ಟಕ್ಕೆ ಸಮನಾದಷ್ಟು ಮೊಬಲಗು ಅವನ ಮಜೂರಿಯಿಂದ ಮುಟ್ಟುಗೋಲಿಗೆ ಗುರಿಯಾಗುವ ಶಿಕ್ಷೆಗೆ ಮತ್ತು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದ ಶಿಕ್ಷೆಗೆ ಸಹ ಗುರಿಯಾಗಲು ಬದ್ಧನಾಗತಕ್ಕದ್ದು;

**63ಸಿ. ಅಧಿಕೃತ ವಾಹನ ಸಂಚಾರ ಪುಸ್ತಕದಲ್ಲಿ ಅಪರಾಧದ ನಮೂದನೆ.-** ಈ ಅಧಿನಿಯಮದ ಅರ್ಥ ವ್ಯಾಪ್ತಿಯೊಳಗೆ, ಬಿಟ್ಟುಹೋಗುವ ಅಥವಾ ರಜೆ ತೆಗೆದುಕೊಳ್ಳದೆ ಗೈರು ಹಾಜರಾಗುವ ಅಥವಾ ಶಿಸ್ತಿಗೆ ವಿರುದ್ಧವಾಗಿ ನಡೆದುಕೊಳ್ಳುವ ಯಾವುದೇ ಅಪರಾಧವನ್ನು ಎಸಗಿದ್ದರೆ ಅಥವಾ ಅಪರಾಧಿಯು ಮಾಡಿಕೊಂಡ ಒಪ್ಪಂದದ ಪ್ರಕಾರ ಯಾವ ದುರ್ನಡತೆಯ ಕೃತ್ಯಕ್ಕಾಗಿ ಜುಲ್ಮಾನೆಯನ್ನು ವಿಧಿಸಲಾಗುವುದೋ ಅಂಥ ಕೃತ್ಯವನ್ನು ಮಾಡಿದರೆ ಮತ್ತು ಆ ಜುಲ್ಮಾನೆಯನ್ನು ಜಾರಿಗೊಳಿಸಲು ಉದ್ದೇಶಿಸಿದರೆ,-

(ಎ) ಆ ಅಪರಾಧ ಅಥವಾ ಕೃತ್ಯಗಳ ಒಂದು ನಮೂದನೆಯನ್ನು ಅಧಿಕೃತ ವಾಹನ ಸಂಚಾರ ಪುಸ್ತಕದಲ್ಲಿ ಮಾಡತಕ್ಕುದು ಮತ್ತು ಅದಕ್ಕೆ ನಾಯಕನು ಮತ್ತು ಯಂತ್ರಚಾಲಿತ ನೌಕೆಯಲ್ಲಿ ಯಾವುದೇ ಸ್ಥಾನದಲ್ಲಿ ನಿಯೋಜಿತನಾಗಿರುವ ಅಥವಾ ತೊಡಗಿಸಲಾಗಿರುವ ವ್ಯಕ್ತಿಗಳ ಪೈಕಿ ಒಬ್ಬನು ಸಹಿ ಮಾಡತಕ್ಕದ್ದು;

(ಬಿ) ಅಪರಾಧಿಗೆ ನಮೂದನೆಯ ಒಂದು ಪ್ರತಿಯನ್ನು ಒದಗಿಸತಕ್ಕುದು ಮತ್ತು ಅದನ್ನು ಅವನಿಗೆ ಸ್ಪಷ್ಟವಾಗಿ ಕೇಳುವಂತೆ ಓದಿ ಹೇಳತಕ್ಕದ್ದು ಮತ್ತು ತದನಂತರ ಅವನು ಅದಕ್ಕೆ ಸೂಕ್ತವೆಂದು ಭಾವಿಸಬಹುದಾದಂಥ ಉತ್ತರವನ್ನು ನೀಡಬಹುದು;

(ಸಿ) ಹಾಗೆ ಒದಗಿಸಲಾದ ನಮೂದನೆಯ ಪ್ರತಿಯ ವಿವರಣೆಯನ್ನು ಮತ್ತು ಹಾಗೆ ಓದಿ ಹೇಳಲಾದ ನಮೂದನೆಯನ್ನು ಮತ್ತು ಅಪರಾಧಿಯು ಏನಾದರೂ ಉತ್ತರವನ್ನು ನೀಡಿದ್ದರೆ ಆ ಉತ್ತರವನ್ನು ಅದೇ ರೀತಿಯಾಗಿ ಮೇಲೆ ಹೇಳಲಾದ ವಿಧಾನದಲ್ಲಿ ನಮೂದಿಸತಕ್ಕದ್ದು ಮತ್ತು ಸಹಿ ಮಾಡತಕ್ಕದ್ದು;

(ಡಿ) ತರುವಾಯದ ಯಾವುದೇ ಕಾನೂನು ವ್ಯವಹರಣೆಗಳಲ್ಲಿ ಈ ಪ್ರಕರಣವು ಅಗತ್ಯಪಡಿಸಿದ ನಮೂದನೆಗಳನ್ನು ಕಾರ್ಯಸಾಧ್ಯವಾದರೆ ಹಾಜರುಪಡಿಸತಕ್ಕದ್ದು ಅಥವಾ ರುಜುವಾತುಪಡಿಸತಕ್ಕದ್ದು ಮತ್ತು ಹಾಗೆ ಹಾಜರುಪಡಿಸಲು ಅಥವಾ ರುಜುವಾತುಪಡಿಸಲು ತಪ್ಪಿದರೆ, ಮೊಕದ್ದಮೆಯ ಸುನಾವಣೆ ಮಾಡುವ ನ್ಯಾಯಾಲಯವು ಅದರ ವಿವೇಚನಾನುಸಾರ ಅಪರಾಧ ಅಥವಾ ದುರ್ನಡತೆಯ ಕೃತ್ಯದ ಸಾಕ್ಷ್ಯವನ್ನು ತೆಗೆದುಕೊಳ್ಳಲು ನಿರಾಕರಿಸಬಹುದು.

**63ಡಿ. ಅನ್ಯಥಾ ಉಪಬಂಧಿಸಿಲ್ಲದ ಅಪರಾಧಗಳ ದಂಡನೆಗಾಗಿ ಸಾಮಾನ್ಯ ಉಪಬಂಧ.-** ಈ ಅಧಿನಿಯಮದ ಯಾವುದೇ ಉಪಬಂಧದ ಉಲ್ಲಂಘನೆಗೆ, ಅದರಲ್ಲಿ ಯಾವುದೇ ಇತರ ದಂಡವನ್ನು ಉಪಬಂಧಿಸಿಲ್ಲದಿದ್ದರೆ, ಅಂಥ ಉಪಬಂಧಗಳನ್ನು ಉಲ್ಲಂಘಿಸಿದ ಯಾರೇ ವ್ಯಕ್ತಿಯು ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**64. ಒಳನಾಡು ಯಂತ್ರಚಾಲಿತ ನೌಕೆಯನ್ನು ಜಪ್ತಿ ಮಾಡುವ ಮೂಲಕ ಜುಲ್ಮಾನೆಯ ವಸೂಲಿ.-** ಒಂದು ಒಳನಾಡು ಯಂತ್ರಚಾಲಿತ ನೌಕೆಯ ಒಡೆಯನು ಅಥವಾ ನಾಯಕನು ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮದ ಮೇರೆಗೆ ನೌಕೆಯಲ್ಲಿ ಅಥವಾ ಆ ಯಂತ್ರಚಾಲಿತ ನೌಕೆಯ ಸಂಬಂಧದಲ್ಲಿ ಎಸಗಿದ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿರುವಲ್ಲಿ ಮತ್ತು ಜುಲ್ಮಾನೆಯನ್ನು ಸಂದಾಯ ಮಾಡುವಂತೆ ಶಿಕ್ಷೆಯ ಆದೇಶವನ್ನು ಮಾಡಿರುವಲ್ಲಿ, ಆ ಶಿಕ್ಷೆಯ ಆದೇಶವನ್ನು ಮಾಡುವ ಮ್ಯಾಜಿಸ್ಟ್ರೇಟನು, ಜುಲ್ಮಾನೆಯ ಮೊಬಲಗನ್ನು, ಯಂತ್ರಚಾಲಿತ ನೌಕೆ ಮತ್ತು ಅದರ ಯಂತ್ರ ಸಲಕರಣೆ, ಸಜ್ಜು ಮತ್ತು ಪೀಠೋಪಕರಣಗಳನ್ನು ಅಥವಾ ಅವುಗಳಲ್ಲಿ ಎಷ್ಟು ಅವಶ್ಯವಿರುವುದೋ ಅಷ್ಟನ್ನು ಜಪ್ತಿ ಮಾಡಿ ಮಾರಾಟ ಮಾಡುವ ಮೂಲಕ ವಸೂಲ್ಮಾಡತಕ್ಕದ್ದೆಂದು ನಿರ್ದೇಶಿಸಬಹುದು.

**65. ಮ್ಯಾಜಿಸ್ಟ್ರೇಟರ ಅಧಿಕಾರ ವ್ಯಾಪ್ತಿ.–** 53ನೇ ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ನಿಯಮದ ವಿರುದ್ಧದ ಒಂದು ಅಪರಾಧದ ಸಂದರ್ಭದಲ್ಲಿ ಹೊರತು, ಮ್ಯಾಜಿಸ್ಟ್ರೇಟನು ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ಮೇರೆಗಿನ ಒಂದು ಅಪರಾಧವನ್ನು, ಅವನು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನಾಗಿರುವ ಹೊರತು ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನ ಅಧಿಕಾರಗಳಿಗಿಂತ ಕಡಿಮೆಯಿಲ್ಲದ ಅಧಿಕಾರಗಳನ್ನು ಹೊಂದಿರುವ ಮ್ಯಾಜಿಸ್ಟ್ರೇಟನಾಗಿರುವ ಹೊರತು, ಅಧಿವಿಚಾರಣೆ ಮಾಡತಕ್ಕದ್ದಲ್ಲ.

**66. ಅಧಿವಿಚಾರಣೆಯ ಸ್ಥಳ.–** ಯಾರೇ ವ್ಯಕ್ತಿಯು ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ವಿರುದ್ಧ ಒಂದು ಅಪರಾಧವನ್ನು ಎಸಗಿದರೆ, ಅವನು ಕಂಡುಬರಬಹುದಾದ ಯಾವುದೇ ಸ್ಥಳದಲ್ಲಿ ಅಥವಾ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಈ ಬಗ್ಗೆ ಗೊತ್ತುಪಡಿಸಬಹುದಾಗಿರುವ ಯಾವುದೇ ಸ್ಥಳದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮದ ಮೇರೆಗೆ ಅವನನ್ನು ಯಾವ ಸ್ಥಳದಲ್ಲಿ ಅಧಿವಿಚಾರಣೆ ಮಾಡಬಹುದೋ ಆ ಯಾವುದೇ ಇತರ ಸ್ಥಳದಲ್ಲಿ, ಆ ಅಪರಾಧದ ಬಗ್ಗೆ ಅಧಿವಿಚಾರಣೆಗೆ ಗುರಿಪಡಿಸತಕ್ಕದ್ದು.

## ಅಧ್ಯಾಯ – VIII

### ಪೂರಕ

**67. ಸಾಮಾನ್ಯ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು ಈ ಅಧಿನಿಯಮದ ಯಾವ ಉದ್ದೇಶಗಳ ಬಗ್ಗೆ ಅನ್ಯಥಾ ಉಪಬಂಧಿಸಿಲ್ಲವೋ ಆ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ನಿಯಮವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದೆಂಬ ಉಪಬಂಧವನ್ನು ಆ ನಿಯಮವು ಒಳಗೊಂಡಿರಬಹುದು.

**68. ಕೆಲವು ಒಳನಾಡು ಯಂತ್ರಚಾಲಿತ ನೌಕೆಗಳಿಗೆ ಅಧಿನಿಯಮದ ಅನ್ವಯವನ್ನು ಮಾರ್ಪಾಟು ಮಾಡುವ ರಾಜ್ಯ ಸರ್ಕಾರದ ಅಧಿಕಾರ.–** ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ಅಧ್ಯಾಯಗಳು II, IIಎ ಮತ್ತು III – ಇವುಗಳ ಎಲ್ಲ ಅಥವಾ ಯಾವುವೇ ಉಪಬಂಧಗಳನ್ನು ಯಂತ್ರಚಾಲಿತ ನೌಕೆಗಳ ಯಾವುದೇ ನಿರ್ದಿಷ್ಟ ವರ್ಗದ ಸಂದರ್ಭದಲ್ಲಿ ಅನ್ವಯಗೊಳಿಸತಕ್ಕುದಲ್ಲವೆಂದು ಅಥವಾ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮಾರ್ಪಾಟುಗಳೊಂದಿಗೆ ಅನ್ವಯಗೊಳಿಸತಕ್ಕದ್ದೆಂದು ಘೋಷಿಸಬಹುದು.

**69. ಸರ್ಕಾರಿ ನೌಕೆಗಳಿಗೆ ಫೀಜುಗಳಿಂದ ವಿನಾಯಿತಿ.–** ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ಸರ್ಕಾರಕ್ಕೆ ಸೇರಿದ ಅಥವಾ ಸರ್ಕಾರದ ಸೇವೆಯಲ್ಲಿರುವ ಎಲ್ಲ ಯಂತ್ರಚಾಲಿತ ನೌಕೆಗಳಿಗೆ, ಅಥವಾ ಅವುಗಳಲ್ಲಿ ಯಾವುದೇ ನೌಕೆಗೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಫೀಜುಗಳಿಂದ ವಿನಾಯಿತಿ ನೀಡಬಹುದು.

**70. ಉಬ್ಬರವಿಳಿತ ಕಡಲನ್ನು ನಿರ್ಧರಿಸಲು ಕೇಂದ್ರ ಸರ್ಕಾರದ ಅಧಿಕಾರ.–** ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ಈ ಅಧಿನಿಯಮದ ಉದ್ದೇಶಗಳಿಗಾಗಿ ಉಬ್ಬರವಿಳಿತದ ಕಡಲಿನ ಎಷ್ಟು ಅಳತೆಯನ್ನು ಒಳನಾಡು ಜಲಮಾರ್ಗವೆಂದು ಪರಿಗಣಿಸತಕ್ಕದ್ದು ಎಂಬುದನ್ನು ನಿರ್ಧರಿಸಬಹುದು.

**71. ಜುಲ್ಮಾನೆಯಂತೆ ವಸೂಲು ಮಾಡಬೇಕಾದ ಫೀಜುಗಳು.–** ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಎಲ್ಲ ಫೀಜುಗಳನ್ನು ಈ ಅಧಿನಿಯಮದ ಮೇರೆಗಿನ ಜುಲ್ಮಾನೆಯಂತೆ ವಸೂಲು ಮಾಡಬಹುದು.

**72. ಒಳನಾಡು ಯಂತ್ರಚಾಲಿತ ನೌಕೆಗಳ ಪ್ರಮಾಣಪತ್ರ ಹೊಂದಿರುವ ನಾಯಕನನ್ನು 1908ರ ಅಧಿನಿಯಮ ಸಂಖ್ಯೆ 15ರ ಪ್ರಕರಣ 31ರ ಮೇರೆಗೆ ಹಡಗು ಚಾಲಕನೆಂದು ಭಾವಿಸುವುದು.–** (1) 31ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ನೀಡಿದ ಮತ್ತು ಜಾರಿಯಲ್ಲಿರುವ ನಾಯಕನ ಒಂದು ಪ್ರಮಾಣ ಪತ್ರವನ್ನು ಹೊಂದಿರುವ ಒಳನಾಡು ಯಂತ್ರಚಾಲಿತ ನೌಕೆಯ ಪ್ರತಿಯೊಬ್ಬ ನಾಯಕನು, ಯಾವ ಬಂದರುಗಳಿಗೆ ಭಾರತ ಬಂದರುಗಳ ಅಧಿನಿಯಮ, 1908ರ ಪ್ರಕರಣ 31ನ್ನು ವ್ಯಾಪ್ತಗೊಳಿಸಲಾಗಿದೆಯೋ ಆ ಬಂದರುಗಳಲ್ಲಿ, ಆ ಪ್ರಕರಣದ ಉದ್ದೇಶಗಳಿಗಾಗಿ, ಅವನು ಯಾವ ಯಂತ್ರಚಾಲಿತ ನೌಕೆಯ ಪ್ರಭಾರದಲ್ಲಿರುವನೋ ಆ ನೌಕೆಯ ಚಾಲಕನಾಗಿರುವನೆಂದು ಭಾವಿಸತಕ್ಕದ್ದು.

**72ಎ. ಪಾಕಿಸ್ತಾನದಲ್ಲಿ ನೀಡಲಾದ ಪ್ರಮಾಣ ಪತ್ರಗಳು ಮತ್ತು ಲೈಸೆನ್ಸ್‌ಗಳಿಗೆ ಹಿಂಬರಹ.–** ಬಾಂಗ್ಲಾದೇಶದ ಸರ್ಕಾರವು, ಈ ಅಧಿನಿಯಮದ ಅಧ್ಯಾಯ II ಅಥವಾ ಅಧ್ಯಾಯ IIIರ ಉಪಬಂಧಗಳಿಗೆ ಸಂವಾದಿಯಾಗಿರುವ ಮತ್ತು ಆ ದೇಶದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ನೀಡಲಾದ ಯಾವುದೇ ಪ್ರಮಾಣಪತ್ರ ಅಥವಾ ಲೈಸೆನ್ಸಿನ ಮೇಲೆ, ಈ ಅಧಿನಿಯಮದ ಮೇರೆಗೆ ಅದೇ ಬಗೆಯ ಪ್ರಮಾಣ ಪತ್ರದ ಅಥವಾ ಲೈಸೆನ್ಸಿನ ನೀಡಿಕೆಗೆ ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ಮೇಲೆ,–

(ಎ) ಭಾರತದ ಯಾವುದೇ ರಾಜ್ಯ ಸರ್ಕಾರವು; ಅಥವಾ

(ಬಿ) ಅಂಥ ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಮಂಜೂರಾತಿಯನ್ನು ಪಡೆದು ಈ ಅಧಿನಿಯಮದ ಮೇರೆಗೆ ಅಂಥದೇ ಪ್ರಮಾಣಪತ್ರ ಅಥವಾ ಲೈಸೆನ್ಸನ್ನು ನೀಡಲು ಸಕ್ಷಮನಾಗಿರುವ ಯಾರೇ ಪ್ರಾಧಿಕಾರಿಯು

– ಹಿಂಬರಹ ಮಾಡಬಹುದು ಮತ್ತು ಅಂಥ ಯಾವುದೇ ಪ್ರಮಾಣಪತ್ರದ ಅಥವಾ ಲೈಸೆನ್ಸಿನ ಮೇಲೆ ಹಾಗೆ ಹಿಂಬರಹ ಮಾಡಿದ ತರುವಾಯ ಅದು, ಈ ಅಧಿನಿಯಮದ ಮೇರೆಗೆ ಅದನ್ನು ನೀಡಲಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

**73. (ನಿರಸಿತ).**

**74. ನಿಯಮಗಳ ಪ್ರಕಟಣೆ.–** (1) ಈ ಅಧಿನಿಯಮದ ಮೇರೆಗೆ ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವು, ಆ ನಿಯಮಗಳನ್ನು ಮುಂಚಿತವಾಗಿ ಪ್ರಕಟಿಸಿದ ತರುವಾಯ ರಚಿಸತಕ್ಕದ್ದು ಎಂಬ ಷರತ್ತಿಗೊಳಪಟ್ಟಿರತಕ್ಕದ್ದು.

(2) ಅಂಥ ಎಲ್ಲ ನಿಯಮಗಳನ್ನು ರಚಿಸಿದ ತರುವಾಯ ಅವುಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ತದನಂತರ, ಈ ಅಧಿನಿಯಮದಲ್ಲಿ ಅಧಿನಿಯಮಿಸಲಾಗಿದ್ದರೆ ಹೇಗೋ ಹಾಗೆ ಅವು ಪರಿಣಾಮವನ್ನು ಹೊಂದಿರತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳವರೆಗೆ ಇರಿಸತಕ್ಕುದು ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನದ ಅಥವಾ ಮೇಲೆ ಹೇಳಿದ ನಿರಂತರ ಅಧಿವೇಶನಗಳ ನಿಕಟೋತ್ತರದ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾನೂನಿನ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**75. ನಿರಸನ ಮತ್ತು ಉಳಿಸುವಿಕೆ.–** 1ನೇ ನವೆಂಬರ್ 1956ರ ನಿಕಟಪೂರ್ವದಲ್ಲಿ ಈ ಅಧಿನಿಯಮವು, ಭಾಗ 'ಬಿ' ರಾಜ್ಯಗಳನ್ನು ಒಳಗೊಂಡಿದ್ದ ರಾಜ್ಯಕ್ಷೇತ್ರಗಳಲ್ಲಿ ಯಾವ ದಿವಸದಂದು ಜಾರಿಗೆ ಬಂದಿರುವುದೋ ಆ ದಿವಸದ ನಿಕಟಪೂರ್ವದಲ್ಲಿ, ಈ ಅಧಿನಿಯಮಕ್ಕೆ ಸಂವಾದಿಯಾಗುವ ಯಾವುದೇ ಕಾನೂನು ಅಂತಹ ರಾಜ್ಯಕ್ಷೇತ್ರಗಳಲ್ಲಿ ಜಾರಿಯಲ್ಲಿದ್ದರೆ, ಅಂಥ ಸಂವಾದಿ ಕಾನೂನು ಆ ದಿವಸದಂದು ನಿರಸಿತವಾಗತಕ್ಕದ್ದು.

(2) ಅಂಥ ನಿರಸನವಿದ್ದಾಗ್ಯೂ, ಅಂಥ ಸಂವಾದಿ ಕಾನೂನಿನ ಮೂಲಕ ಪ್ರದತ್ತವಾದ ಯಾವುವೇ ಅಧಿಕಾರಗಳನ್ನು ಚಲಾಯಿಸಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕುದು ಮತ್ತು ಅಂಥ ಸಂವಾದಿ ಕಾನೂನಿನ ಮೇರೆಗೆ ವಹಿಸಿದ ಯಾವುದೇ ದಂಡ ಅಥವಾ ಪ್ರಾರಂಭಿಸಲಾದ ವ್ಯವಹರಣೆಯನ್ನು, ಯಾವ ದಿವಸದಂದು ಅಂಥ ಕಾರ್ಯವನ್ನು ಮಾಡಲಾಯಿತೋ, ಕ್ರಮವನ್ನು ಕೈಗೊಳ್ಳಲಾಯಿತೋ, ದಂಡವನ್ನು ವಹಿಸಲಾಯಿತೋ ಅಥವಾ ವ್ಯವಹರಣೆಯನ್ನು ಪ್ರಾರಂಭಿಸಲಾಯಿತೋ, ಆ ದಿವಸದಂದು ಈ ಅಧಿನಿಯಮವು ಜಾರಿಯಲ್ಲಿದ್ದರೆ ಹೇಗೋ ಹಾಗೆ, ಈ ಅಧಿನಿಯಮದ ಮೇರೆಗೆ ವಹಿಸಿದ ದಂಡ ಅಥವಾ ಪ್ರಾರಂಭಿಸಲಾದ ವ್ಯವಹರಣೆ ಎಂಬುದಾಗಿ ಭಾವಿಸತಕ್ಕದ್ದು.

## ಅನುಸೂಚಿ - I

### ಶುಲ್ಕಗಳ ದರಗಳು

[6(ಎ) ಮತ್ತು 19(ಡಿ) ಪ್ರಕರಣಗಳನ್ನು ನೋಡಿ]

| | ರೂ. |
|---|---|
| 100 ಟನ್ನುಗಳಿಗಿಂತ ಕಡಿಮೆಯ ಯಂತ್ರಚಾಲಿತ ನೌಕೆಗಳಿಗಾಗಿ | 25 |
| 100 ಟನ್ನುಗಳು ಮತ್ತು 200 ಟನ್ನುಗಳವರೆಗಿನ ಯಂತ್ರಚಾಲಿತ ನೌಕೆಗಳಿಗಾಗಿ | 40 |
| 200 ಟನ್ನುಗಳು ಮತ್ತು 350 ಟನ್ನುಗಳವರೆಗಿನ ಯಂತ್ರಚಾಲಿತ ನೌಕೆಗಳಿಗಾಗಿ | 50 |
| 350 ಟನ್ನುಗಳು ಮತ್ತು 700 ಟನ್ನುಗಳವರೆಗಿನ ಯಂತ್ರಚಾಲಿತ ನೌಕೆಗಳಿಗಾಗಿ | 60 |
| 700 ಟನ್ನುಗಳು ಮತ್ತು 1000 ಟನ್ನುಗಳವರೆಗಿನ ಯಂತ್ರಚಾಲಿತ ನೌಕೆಗಳಿಗಾಗಿ | 80 |
| 1000 ಟನ್ನುಗಳು ಮತ್ತು 1500 ಟನ್ನುಗಳವರೆಗಿನ ಯಂತ್ರಚಾಲಿತ ನೌಕೆಗಳಿಗಾಗಿ | 100 |
| 1500 ಟನ್ನುಗಳು ಮತ್ತು ಮೇಲ್ಪಟ್ಟು ಟನ್ನುಗಳವರೆಗಿನ ಯಂತ್ರಚಾಲಿತ ನೌಕೆಗಳಿಗಾಗಿ | 120 |

**ಅನುಸೂಚಿ -II** - (ಅಧಿನಿಯಮಗಳನ್ನು ನಿರಸನಗೊಳಿಸಲಾಗಿದೆ) ನಿರಸನಗೊಳಿಸುವ ಅಧಿನಿಯಮ, 1927ರ (1927ರ 12) 2ನೇ ಪ್ರಕರಣ ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

* * *